ಸಂಪುಟ: 13 Volume | ಸಂಚಿಕೆ: 294 Issue | ಪುಟಗಳು 08 Pages | ಶನಿವಾರ 10 ಜನವರಿ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಇರುವೆಗಳು ಸಂಗ್ರಹಿಸಿದ ಕಾಳು, ಜೇನುನೊಣಗಳು ಕೂಡಿಟ್ಟ ಜೇನುತುಪ್ಪ, ಜಿಪುಣನ ಸಂಪತ್ತು ಇವೆಲ್ಲಾ ಸಂಪೂರ್ಣ ನಾಶವಾಗುವವು.

–ಸುಭಾಷಿತ

ಮಹಿಳೆಯರು ಆತ್ಮಸ್ಥೈರ್ಯ ತಂದುಕೊಳ್ಳಬೇಕು 4

ಮಾಧ್ಯಮ ಪ್ರತಿನಿಧಿಗಳಿಗೆ ವಾರ್ತಾಲಾಪ 6

ತೊಗರಿ ಖರೀದಿ ಕೇಂದ್ರ ಶಾಸಕರಿಂದ ಚಾಲನೆ 7

## 2026-27ನೇ ಸಾಲಿನ ಬಜೆಟ್ ಸಭೆ



**ಹಳಿಯಾಳ:** 2026–27ನೇ ಸಾಲಿನ ಪುರಸಭೆಯ ಬಜೆಟ್ ಕುರಿತಂತೆ ಪೂರ್ವ ಸಿದ್ಧತಾ ಸಭೆಯನ್ನು ಆಡಳಿತ ಅಧಿಕಾರಿ ಅನುಪಸ್ಥಿತಿಯಲ್ಲಿ ಇಂದು ಪುರಸಭೆಯ ಮುಖ್ಯ ಅಧಿಕಾರಿ ಅಶೋಕ್ ಸಾಳೆಣ್ಣವರ ನೇತೃತ್ವದಲ್ಲಿ ನಡೆಸಲಾಯಿತು. ಇಂದಿನ ಈ ಸಭೆಯಲ್ಲಿ ಕನ್ನಡಪರ ಸಂಘಟನೆಯವರು ವಿವಿಧ ಸಂಘ ಸಂಸ್ಥೆಯ ಪದಾಧಿಕಾರಿಗಳು ಅಧ್ಯಕ್ಷರು ಹಾಗೂ ಸಾರ್ವಜನಿಕರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸ್ವಚ್ಛತೆ, ಬೀದಿ ದೀಪ, ಹಾಗೂ ಪಟ್ಟಣದ ಮುಖ್ಯ ಮಾರುಕಟ್ಟೆಯ ಪಾರ್ಕಿಂಗ್ ಸಮಸ್ಯೆ ಹಾಗೂ ಇತರ ವಿಷಯಗಳ ಕುರಿತು ಸಮಗ್ರವಾಗಿ ಸಭೆಯಲ್ಲಿ ಚರ್ಚಿಸಲಾಯಿತು.

## ಡಾ.ರಾಜ್, ಕಣಗಾಲ್ ಪ್ರಶಸ್ತಿ ಪ್ರಕಟ

**ಬೆಂಗಳೂರು:** ರಾಜ್ಯ ಸರ್ಕಾರದ 2020 ಹಾಗೂ 2021ನೇ ಸಾಲಿನ ಪ್ರತಿಷ್ಠಿತ ಡಾ.ರಾಜಕುಮಾರ್, ಪುಟ್ಟಣ್ಣ ಕಣಗಲ್ ಮತ್ತು ಡಾಕ್ಟರ್ ವಿಷ್ಣುವರ್ಧನ್ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.ಡಾ.ರಾಜ್‌ಕುಮಾರ್ ಪ್ರಶಸ್ತಿಯನ್ನು ಹಿರಿಯ ನಟಿ ಡಾ.ಜಯಮಾಲಾ ಅವರಿಗೆ, ಪುಟ್ಟಣ್ಣ ಕಣಗಾಲ್ ಪ್ರಶಸ್ತಿಯನ್ನು ಹಿರಿಯ ನಿರ್ದೇಶಕ ಎಂ.ಎಸ್. ಸತ್ಯು ಹಾಗೂ ಪ್ರಗತಿ ಅಶ್ವತ್ಥ್ ನಾರಾಯಣ್ ಅವರಿಗೆ ಡಾ.ವಿಷ್ಣುವರ್ಧನ ಪ್ರಶಸ್ತಿ ನೀಡಲಾಗಿದೆ. 2021ರ ಸಾಲಿನ ಡಾ.ರಾಜಕುಮಾರ್ ಪ್ರಶಸ್ತಿ ಹಿರಿಯ ನಿರ್ಮಾಪಕ ಸಾ.ರಾ.ಗೋವಿಂದ್‌ಗೆ ಲಭಿಸಿದೆ. ಸಾಲಿನ ಪುಟ್ಟಣ್ಣ ಕಣಗಲ್ ಪ್ರಶಸ್ತಿಯನ್ನು ನಿರ್ದೇಶಕ ಶಿವರುದ್ರಯ್ಯ ಅವರಿಗೆ ನೀಡಲಾಗಿದೆ.

## ಮಹಾ ತೊಟ್ಟಿಲೋತ್ಸವ



**ಕಲಬುರಗಿ:** ಇಲ್ಲಿನ ಗೋದುತಾಯಿ ನಗರದ ಶಿವಮಂದಿರ ಆವರಣದಲ್ಲಿ ಶರಣಬಸವೇಶ್ವರರ ಮಹಾ ತೊಟ್ಟಿಲೋತ್ಸವ, ಸಹಸ್ರ ದೀಪೋತ್ಸವ ನಡೆದಿದೆ. ಕಾರ್ಯಕ್ರಮವನ್ನು ಗಣ್ಯರಿಂದ ಜ್ಯೋತಿ ಬೆಳಸುವ ಮೂಲಕ ಶರಣಬಸವೇಶ್ವರರ ಮಹಾತೊಟ್ಟಿಲೋತ್ಸವಕ್ಕೆ ಚಾಲನೆ ನೀಡಲಾಯಿತು. ನೂರಾರು ಮಹಿಳೆಯರ ಸಮ್ಮುಖದಲ್ಲಿ ಹಲವರು ಪುಷ್ಪಾಲಂಕೃತ ತೊಟ್ಟಿಲು ತೂಗಿದ್ದು ವಿಶೇಷ.

## ಓರಿಯಂಟೇಶನ್ ಕಾರ್ಯಕ್ರಮಕ್ಕೆ ಚಾಲನೆ




**ಬೀದರ:** ಪ್ರವಾಸೋದ್ಯಮ ಸಚಿವಾಲಯ, ಭಾರತ ಸರ್ಕಾರದ ಬೆಂಗಳೂರು ಕಚೇರಿ, ಮತ್ತು ಸಹಾಯಕ ನಿರ್ದೇಶಕರ ಕಚೇರಿ ಬೀದರ್ ಸಂಯೋಗದೊಂದಿಗೆ ಡಿಸ್ಕವರ್ ಬೀದರ್ FAM ಟ್ರಿಪ್ ಅಂಗವಾಗಿ ಬೀದರ್ ಎಸ್‌ಆರ್‌ಎಸ್ ರೆಸಾರ್ಟ್‌ನಲ್ಲಿ ಓರಿಯಂಟೇಶನ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಬೀದರ್ ಜಿಲ್ಲಾಡಳಿತ ಹಾಗೂ ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದು, ಬೀದರ್ ಜಿಲ್ಲೆಯನ್ನು ಪರಂಪರೆ, ಸಾಂಸ್ಕೃತಿಕ ಮತ್ತು ಅನುಭವಾತ್ಮಕ ಪ್ರವಾಸೋದ್ಯಮದ ಪ್ರಮುಖ ತಾಣವಾಗಿ ಉತ್ತೇಜಿಸುವುದು ಇದರ ಪ್ರಧಾನ ಉದ್ದೇಶವಾಗಿದೆ.

## ಹಿರಿಯ ವೀಕ್ಷಕರ ನೇಮಕ

**ಬೆಂಗಳೂರು:** ಮುಂಬರುವ ಅಸ್ಸಾಂ ವಿಧಾನಸಭಾ ಚುನಾವಣೆಗೆ ಮೊದಲ ಹೆಜ್ಜೆಯಾಗಿ ಕರ್ನಾಟಕದ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರನ್ನು ಪಕ್ಷದ ಹಿರಿಯ ವೀಕ್ಷಕರಾಗಿ ಕಾಂಗ್ರೆಸ್ ಹೈಕಮಾಂಡ್ ನೇಮಿಸಿದೆ. ಆ ಮೂಲಕ, ಕರ್ನಾಟಕ ಕಾಂಗ್ರೆಸ್ಸಿನಲ್ಲಿರುವ ಗೊಂದಲಕ್ಕೆ ಸಂಬಂಧಿಸಿದಂತೆ, ಚಾಣಾಕ್ಷ ನಡೆ ಇಟ್ಟಿದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ.

126 ಸದಸ್ಯ ಬಲದ ಅಸ್ಸಾಂ ವಿಧಾನಸಭೆಗೆ ಮಾರ್ಚ್ – ಏಪ್ರಿಲ್ ತಿಂಗಳಲ್ಲಿ ಚುನಾವಣೆ ನಡೆಯಬೇಕಿದೆ. ಈಗಿನ ವಿಧಾನಸಭೆಯ ಅವಧಿ ಮೇ 20, 2026ಕ್ಕೆ ಮುಕ್ತಾಯಗೊಳ್ಳಲಿದೆ. ಡಿಕೆ ಶಿವಕುಮಾರ್ ಜೊತೆ, ಛತ್ತೀಸ್'ಗಢದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್, ಮಾಜಿ ಜಾರ್ಖಂಡ್ ಶಾಸಕ ಬಂಧು ತಿರ್ಕಿ ಅವರನ್ನೂ ಹಿರಿಯ ವೀಕ್ಷಕರಾಗಿ ನೇಮಿಸಿ, ಎಐಸಿಸಿ ಆದೇಶ ಹೊರಡಿಸಿದೆ.

## ಹಲಬರ್ಗಾಕ್ಕೆ ಕೋಡಿಮಠದ ಶ್ರೀ ಭೇಟಿ 11ಕ್ಕೆ



**ಭಾಲ್ಕಿ:** ತಾಲೂಕಿನ ಹಲಬರ್ಗಾ ಗ್ರಾಮದಲ್ಲಿ ಜ.11 ರಂದು ನಡೆಯಲಿರುವ ಸಿದ್ಧರಾಮೇಶ್ವರ ನಮ್ಮೂರ 13ನೇ ಜಾತ್ರಾ ಮಹೋತ್ಸವ ಸಮಾರಂಭದಲ್ಲಿ ಹಾಸನ ಜಿಲ್ಲೆಯ ಅರಿಸೀಕೆರೆ ತಾಲೂಕಿನ ಕೋಡಿಮಠದ ಜಗದ್ಗುರು ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭಾಗವಹಿಸಲಿದ್ದಾರೆ ಎಂದು ರಾಚೋಟೇಶ್ವರ ಮಠದ ಪೀಠಾಧಿಪತಿ ಹಾವಗಲಿಂಗೇಶ್ವರ ಶಿವಾಚಾರ್ಯರು ತಿಳಿಸಿದ್ದಾರೆ. ಗ್ರಾಮದ ಶ್ರೀಮಠದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,

ಅಂದು ಬೆಳಗ್ಗೆ 10 ಗಂಟೆಗೆ ಗ್ರಾಮದ ಹೊರ ವಲಯದ ಪೆಟ್ರೋಲ್ ಪಂಪ್ ಸಮೀಪ ಪೂಜ್ಯರನ್ನು ಸ್ವಾಗತಿಸಿ ಮೆರವಣಿಗೆ ಮೂಲಕ ಕರೆತರಲಾಗುತ್ತದೆ. ಮೆರವಣಿಗೆಯಲ್ಲಿ ಹವಾ ಮಲ್ಲಿನಾಥ ಪೂಜ್ಯರು, ಹುಲಸೂರಿನ ಡಾ.ಶಿವಾನಂದ ಸ್ವಾಮೀಜಿ ಅವರು ಭಾಗಿಯಾಗಲಿದ್ದಾರೆ. ನಂತರ ಮಧ್ಯಾಹ್ನ 1 ಗಂಟೆಗೆ ಶ್ರೀಮಠದ ಆವರಣದಲ್ಲಿ ನಡೆಯಲಿರುವ ಧರ್ಮಸಭೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಸಂಸದ ಸಾಗರ ಖಂಡ್ರೆ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜಾತ್ರಾ ಮಹೋತ್ಸವ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ.

# ಮದಗಜ ಮಾತು ಮರ್ದನ

## ಡಿಸಿಎಂ ಡಿಕೆ ಶಿವಕುಮಾರ್ ವರ್ಸಸ್ ಕೇಂದ್ರ ಸಚಿವ ಕುಮಾರಸ್ವಾಮಿ ನಡುವೆ ಚಕಮಕಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಡಿಸಿಎಂ ಡಿಕೆ ಶಿವಕುಮಾರ್ ಹಾಗೂ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮು ನಡುವೆ ಮಾತಿನ ಚಕಮಕಿ ನಡೆದಿದೆ. ಬಿಜೆಪಿ–ಜೆಡಿಎಸ್ ಮೈತ್ರಿಬಗ್ಗೆ ಮಾತಾಡಿದ್ದ ಡಿಸಿಎಂ ಡಿಕೆಶಿ, ರಾಜ್ಯದಲ್ಲಿ ಲೆಕ್ಕಕ್ಕೆ 3 ಪಕ್ಷ ಇದೆ. ಆದರೆ ಆಟಕ್ಕೆ ಎರಡೇ ಪಕ್ಷಗಳಿವೆ ಎಂದು ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಗೆ ವ್ಯಂಗ್ಯವಾಡಿದ್ದರು. ಇದಕ್ಕೆ ಕುಮಾರಸ್ವಾಮಿ ಸೋಷಿಯಲ್ ಮೀಡಿಯಾ ಮೂಲಕ ತಿರುಗೇಟು ನೀಡಿದ್ದು, ಚರ್ಚೆಗೆ ಗ್ರಾಸವಾಗಿದೆ.

**ಡಿಕೆಶಿ ಮಾತಿಗೆ ಎಚ್ಡಿಕೆ ತಿರುಗೇಟು:** ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಳ್ಳಲಿದೆ ಎಂದು ಡಿಕೆಶಿ ಹೇಳಿಕೆ ನೀಡಿದ್ದರು. ನಾನು ಕುಮಾರಸ್ವಾಮಿಗಿಂತ ಅನುಭವಿ ಎಂದಿದ್ದು, ಚರ್ಚೆಗೆ ಅಸಲು ಕಾರಣ. ಡಿಕೆಶಿ ಮಾತಿಗೆ ಟಾಂಗ್ ಕೊಟ್ಟ ಕುಮಾರಸ್ವಾಮಿ, ನಮ್ಮ ವಿಲೀನದ ಚಿಂತೆ ಪಕ್ಕಕ್ಕಿಡಿ. ನನ್ನ, ನಿಮ್ಮ ಆಡಳಿತಾನುಭವದ ಬಗ್ಗೆ ಮಾತನಾಡೋಣ ಎಂದು ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

### ನಾವಲ್ಲ, ಜನರೇ ಹೇಳಬೇಕು

ನಮ್ಮ ವಿಲೀನದ ಚಿಂತೆ ಪಕ್ಕಕ್ಕೆ ಇಡಿ. ನಾನು ಎರಡು ಸಣ್ಣ ಅವಧಿಗೆ ಸಿಎಂ, ಅಲ್ಪ ಅವಧಿಗೆ ಪ್ರತಿಪಕ್ಷ ನಾಯಕ. ಈಗ ಕೇಂದ್ರ ಮಂತ್ರಿ. ನೀವೂ ಸುದೀರ್ಘ ಅವಧಿಗೆ ಶಾಸಕ, ಅನೇಕ ಬಾರಿ ಮಂತ್ರಿ. ಈಗ ಡಿಸಿಎಂ. ನಮ್ಮಿಬ್ಬರ ಆಡಳಿತಾನುಭವದ ಬಗ್ಗೆ ನೀವು ಹೇಳುವುದಲ್ಲ, ಜನರನ್ನೇ ಕೇಳಬೇಕು ಎಂದು ಕುಮಾರಸ್ವಾಮಿ ಬರೆದಿದ್ದಾರೆ.



### ಎಚ್ಡಿಕೆ ಮಾತಿಗೆ ಡಿಕೆಶಿ ಹೇಳಿದ್ದೇನು..?

ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರ ಟ್ವೀಟ್ ಕುರಿತಾಗಿ ಪ್ರತಿಕ್ರಿಯೆ ನೀಡಿರುವ ಡಿಸಿಎಂ ಡಿಕೆ ಶಿವಕುಮಾರ್ ಅವರು, ವೃಥಾ ಮಾತು ಏಕೆ, ಅವರ ಶಾಸಕರು ಇದ್ದಾರಲ್ಲಾ..? ಅವರ ಮೂಲಕ ಈ ವಿಚಾರವನ್ನು ಚರ್ಚೆ ಮಾಡಲು ಹೇಳಲಿ. ಆಗ ಸತ್ಯ ಏನೆಂಬುದು ಹೊರ ಬರಲಿದೆ ಎಂದು ಎದಿರೇಟು ನೀಡಿದ್ದಾರೆ.

### ಒತ್ತುವರಿಯಲ್ಲಿ ಸಾಟಿ ನೀವೇ

ನಿಮಗೆ ಭೂ ಕಬ್ಜ, ಒತ್ತುವರಿ ಕರತಲಾಮಲಕ. ಅದೇ ರೀತಿ ಮತ್ತೊಬ್ಬ ಸಚಿವರ ಖಾತೆಯನ್ನು ಒತ್ತುವರಿ ಮಾಡುವುದರಲ್ಲಿಯೂ ನೀವು ನಿಸ್ಸೀಮರು. ಅದನ್ನಷ್ಟೇ ನಾನು ಹೇಳಿದ್ದು.. ತಾವು ಡಿಸಿಎಂ ಆಗಿರಬಹುದು. ಆದರೆ ಮಂತ್ರಿ ಪದವಿಗೆ ಇರುವಷ್ಟೇ ಶಿಷ್ಟಾಚಾರ, ಅಧಿಕಾರ ವ್ಯಾಪ್ತಿ ಆ ಹುದ್ದೆಗಿದೆ ಎನ್ನುವುದು ಗೊತ್ತಿಲ್ಲವೇ ಎಂದು ಡಿಕೆಶಿಗೆ ಟಾಂಗ್ ಕೊಟ್ಟಿದ್ದಾರೆ.

ಕೊಲೆಯಾದ ಕಾರ್ಯಕರ್ತನ ಮೃತದೇಹವನ್ನು ಸುಟ್ಟು ಹಾಕಿದ್ದು ಏಕೆ? ಒಬ್ಬ ಹಿರಿಯ ಮಂತ್ರಿಯ ಖಾತೆಯನ್ನು ನೀವು ಹೀಗೆ ಅಕ್ರಮವಾಗಿ ಒತ್ತುವರಿ ಮಾಡುವುದಕ್ಕೆ ಸಂವಿಧಾನದಲ್ಲಿ ವಿಶೇಷ ತಿದ್ದುಪಡಿ ಏನನ್ನಾದರೂ ಮಾಡಿಸಿದ್ದೀರ? ಇಂಥ ಸಣ್ಣ ವಿಷಯ ನಿಮಗೇಕೆ ತಿಳಿಯಲಿಲ್ಲ ಡಿಕೆಶಿ?

–ಎಚ್ಡಿ ಕುಮಾರಸ್ವಾಮಿ
ಕೇಂದ್ರ ಸಚಿವ

ಡಿಸಿಎಂ ಡಿಕೆ ಶಿವಕುಮಾರ್ ಅಲ್ಲಿಗೆ ಹೋಗುವುದನ್ನು ತಪ್ಪು ಎನ್ನಲಾಗುವುದಿಲ್ಲ. ಅವರು ಸಂಪುಟ ಸಚಿವ ಮತ್ತು ಉಪಮುಖ್ಯಮಂತ್ರಿ ಜವಾಬ್ದಾರಿಯೊಂದಿಗೆ ಅಲ್ಲಿಗೆ ಹೋಗಿದ್ದಾರೆ. ಏಕೆಂದರೆ ನಾನು ಹೋಗಲು ಸಾಧ್ಯವಾಗಲಿಲ್ಲ

–ಡಾ.ಪರಮೇಶ್ವರ್
ಗೃಹ ಸಚಿವ

### ಎಚ್ಡಿಕೆ ಹಸ್ತಕ್ಷೇಪ ಹೇಳಲೆ?

ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸಲು ಡಿಕೆ ಶಿವಕುಮಾರ್ ಅವರಿಗೆ ಅಧಿಕಾರ ಕೊಟ್ಟವರು ಯಾರು ಎಂದು ಎಚ್ಡಿಕೆ ಪ್ರಶ್ನಿಸಿದ್ದರು. ಇದಕ್ಕೆ ಮಾಜಿ ಸಚಿವ ಕೆಎನ್ ರಾಜಣ್ಣ ಪ್ರತಿಕ್ರಿಯಿ, ಕುಮಾರಸ್ವಾಮಿ ಸಿಎಂ ಆಗಿದ್ದಾಗ ಮಂತ್ರಿಗಳ ಖಾತೆಯಲ್ಲಿ ಎಷ್ಟು ಹಸ್ತಕ್ಷೇಪ ಮಾಡಿದ್ದಾರೆ ಎನ್ನುವ ದೊಡ್ಡ ಲಿಸ್ಟೇ ಕೊಡ್ತೇನೆ ಎಂದು ಕಿಡಿಕಾರಿದ್ದಾರೆ.

## ಮೊದಲ ಹೆಸರೇ ಇರಲಿ: ಕಾಂಗ್ರೆಸ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಯನ್ನು ಮರುಸ್ಥಾಪಿಸಬೇಕೆಂದು ಆಗ್ರಹಿಸಿರುವ ರಾಜ್ಯಸರ್ಕಾರ, ಈ ನಿಟ್ಟಿನಲ್ಲಿ ನಿರ್ಣಯ ಅಂಗೀಕರಿಸಲು ರಾಜ್ಯ ವಿಧಾನಸಭೆಯ ವಿಶೇಷ ಅಧಿವೇಶನವನ್ನು ಕರೆಯಲು ನಿರ್ಧರಿಸಿದೆ.

ಬೆಂಗಳೂರು ನಗರದ ಹೋಟೆಲ್ನಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರ ಹಾಗೂ ಸಚಿವರ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಶೀಘ್ರದಲ್ಲೇ ರಾಜ್ಯ ವಿಧಾನಸಭೆಯ ವಿಶೇಷ ಅಧಿವೇಶನ ಕರೆಯಲಾಗುವುದು ಎಂದು ಹೇಳಿದ್ದರು. ಡಾ.ಮನಮೋಹನ್ ಸಿಂಗ್ ಪ್ರಧಾನಮಂತ್ರಿಯಾಗಿದ್ದ ಸಂದರ್ಭದಲ್ಲಿ ಜಾರಿಗೆ ಬಂದ ಎಂಜಿಎನ್‌ಆರ್‌ಇಗಾ ಯೋಜನೆಯಿಂದ ಮಹಾತ್ಮ ಗಾಂಧಿಯ ಹೆಸರು ತೆಗೆದುಹಾಕುವುದು ಬಿಜೆಪಿಯ ಸಂಚು ಎಂದು ಆರೋಪಿಸಿದ್ದರು.

ಗ್ರಾಮೀಣ ಪ್ರದೇಶಗಳ ದಲಿತರು, ಮಹಿಳೆಯರು ಹಾಗೂ ರೈತರಿಗೆ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೆ ತರಲಾಗಿತ್ತು.

## ಕೃಷ್ಣಾ ಮೇಲ್ದಂಡೆಗೆ ಕೇಂದ್ರ ಅಡಚಣೆ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಸಹಕಾರ ನೀಡುತ್ತಿಲ್ಲ. ಈ ಯೋಜನೆಗೆ ಅಧಿಸೂಚನೆ ಹೊರಡಿಸುತ್ತಿಲ್ಲ. ನೆರೆ ರಾಜ್ಯಗಳು ದಾವೆಗಳ ಮೂಲಕ ಯೋಜನೆ ಜಾರಿಗೆ ಅಡಚಣೆ ಉಂಟು ಮಾಡುತ್ತಿವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ವಿಜಯಪುರದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಶಿವಕುಮಾರ್ ಅವರು ಮಾತನಾಡಿ, ಕಮಲ ಕೆರೆಯಲ್ಲಿದ್ದರೆ ಚೆಂದ, ತೆನೆ ಹೊಲದಲ್ಲಿದ್ದರೆ ಚೆಂದ. ದಾನ ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಚೆಂದ ಎಂದು ಚುನಾವಣೆ ಪ್ರಚಾರದ ವೇಳೆ ನಾನು ಹೇಳಿದ್ದೆ. ಈ ಕೈಗೆ ಅಧಿಕಾರ ಸಿಕ್ಕಿದ ಕಾರಣಕ್ಕೆ ಇಂದು ದೊಡ್ಡ ಕಾಮಗಾರಿಗಳಿಗೆ ಚಾಲನೆ ನೀಡಿದ್ದೇವೆ. ನಿಮ್ಮ ಜಿಲ್ಲೆಯಲ್ಲಿ ಕೃಷ್ಣ ಜಲಭಾಗ್ಯ ನಿಗಮದಲ್ಲಿ ನೆನೆಗುದಿಗೆ ಬಿದ್ದಿದ್ದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಆದ್ಯತೆ ನೀಡಲಾಗಿದೆ. ನಾನು ಸಚಿವನಾದ ಬಳಿಕ 3,700 ಕೋಟಿ ಕೆಲಸವನ್ನು ಈ ಜಿಲ್ಲೆಗೆ ಮಂಜೂರು ಮಾಡಿದ್ದೇವೆ ಎಂದು ವಿವರಿಸಿದ್ದಾರೆ.

## ಅದ್ಧೂರಿ ಜಾತ್ರೆ ಆಚರಣೆಗೆ ನಿರ್ಧಾರ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಗ್ರಾಮ ದೇವರಾದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವವನ್ನು ಅತಿ ವಿಜ್ರಂಭಣೆಯಿಂದ ಆಚರಿಸಲು ಬಸವರಾಜ್ ಎಚ್ ಪಾಟೀಲ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಪೂರ್ವ ಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

**ಬಿಗಿ ಬಂದೋಬಸ್ತ:** ಪೂರ್ವ ಭಾವಿ ಸಭೆಯಲ್ಲಿ ಯಾವುದೆ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಮುಂಜಾಗ್ರತ ಕ್ರಮ ಕೈಗೊಳ್ಳಲಾಯಿತು. ಜಾತ್ಯಾತೀತ ವಾಗಿ ಜಾತ್ರೆ ನಡೆಯುತ್ತದೆ ಡಾ, ಚಂದ್ರಶೇಖರ್ ಪಾಟೀಲ ಜಾತ್ರೆ ಯಶಸ್ವಿಗೆ ಸರ್ವರು ಸಹಕರಿಸಬೇಕು. ಬೆಂಕಿ ವೀರಭದ್ರೇಶ್ವರ ನಮ್ಮ ದೇವರಿದ್ದಾರೆ. ಅಧಿಕಾರಿ ವರ್ಗದವರು ಜಾತ್ರಾಗೆ ಸಹಕರಿಸಬೇಕು ಎಂದು ಡಾ. ಚಂದ್ರಶೇಖರ ಪಾಟೀಲ ಮನವಿ ಮಾಡಿದ್ದಾರೆ. ಮಾಜಿ ಸಚಿವ ರಾಜಶೇಖರ ಪಾಟೀಲ ಮಾತನಾಡಿ, ಪ್ರಥಮ ಬಾರಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು ಸ್ವಾಗತಾರ್ಹ, ಜಾತ್ರೆ ಸರ್ಕಾರದಿಂದದಾಗಲಿ. ಯಾರದೊಬ್ಬರಿಂದ ಜಾತ್ರೆಗಳು ನಡೆಯುವುದಿಲ್ಲ, ಜಾತ್ರೆ ಯಶಸ್ವಿಗೆ ಪುರಸಭೆ, ವಿದ್ಯುತ್, ಪೊಲಿಸ್ ಇಲಾಖೆ, ಆರೋಗ್ಯ ಇಲಾಖೆಯ ಕಾರ್ಯ ಪ್ರಮುಖವಾಗಿದೆ ಎಂದು ತಿಳಿಸಿದರು. ಭಕ್ತರಿಗೆ ಯಾವುದೆ ತೊಂದರೆ ಆಗದಂತೆ ನೊಡಿಕೊಂಡು ಹೊಗೋಣ. ಸಭೆಯಲ್ಲಿ ಶ್ರೀ ಗಂಗಾಧರ ಶ್ರೀಗಳು ಅಧ್ಯಕ್ಷತೆ ವಹಿಸಿದರು. ಮಾಜಿ ಸಚಿವರಾದ ರಾಜಶೇಖರ ಪಾಟೀಲ,ವಿಧಾನ ಪರಿಷತ್ ಸದಸ್ಯರುಗಳಾದ ಡಾ.ಚಂದ್ರಶೇಖರ ಪಾಟೀಲ, ಭೀಮರಾವ ಪಾಟೀಲ, ಬಸವರಾಜ ಆರ್ಯ, ಸಹಾಯಕ ಆಯುಕ್ತ ಪ್ರಕಾಶ ಕುದರೆ, ಸಮಿತಿಯ ಅಧ್ಯಕ್ಷ ವೀರಣ್ಣ ಪಾಟೀಲ, ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ಮಲ್ಲಿಕಾರ್ಜುನ ಮಾಶೆಟ್ಟಿ,ಹುಮನಾಬಾದ್ ಸೇರಿದಂತೆ ಇತರರಿದ್ದರು.

### ಜಾತ್ರೆ ಯಶಸ್ವಿಗೆ ಮನವಿ

ಸಭೆಯ ನೇತೃತ್ವ ವಹಿಸಿದ್ದ ಜಿಲ್ಲಾಧಿಕಾರಿ ಮಾತನಾಡಿ, ಸ್ವಚ್ಚತೆಗೆ,ವಿದ್ಯುತ್, ಪೊಲೀಸ್ ಬಂದೋಬಸ್ತ, ಮಾಡಬೇಕು. ಹಾಗೂ ಶಾಂತಿಯಿಂದ ಜಾತ್ರೆ ಯಶಶ್ವಿಗೆ ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ ರವರು ಮನವಿ ಮಾಡಿದರು.

## ನ್ಯಾಯಾಂಗ ತನಿಖೆಗೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿದ ವಿಚಾರ ದೇಶದ ಸುದ್ದಿಯಾಗಿದೆ. ಜನರು ಇದರ ಸತ್ಯಾಂಶ ತಿಳಿಯಲು ಬಯಸುತ್ತಿದ್ದಾರೆ. ಆದ್ದರಿಂದ ಘಟನೆಯ ನ್ಯಾಯಾಂಗ ತನಿಖೆ ಮಾಡಬೇಕು ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಆಗ್ರಹಿಸಿದ್ದಾರೆ.

ಮಹಿಳೆಯನ್ನು ವಿವಸ್ತ್ರಗೊಳಿಸಿದ ಪ್ರಕರಣ ಸಂಬಂಧ ಆರ್. ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ಅವರು ಇಂದು ಸಂತ್ರಸ್ತ ಮಹಿಳೆಯ ಮನೆಗೆ ಭೇಟಿ ನೀಡಿದ್ದರು. ಬಳಿಕ ಆರ್.ಅಶೋಕ್ ಅವರು ಮಾಧ್ಯಮಗಳ ಜೊತೆ ಮಾತನಾಡಿದರು. ಆ ಹೆಣ್ಮಗಳೇ ಬಟ್ಟೆ ಬಿಚ್ಚಿಕೊಂಡಿದ್ದಾರೆ ಎನ್ನುತ್ತಾರೆ. ಹಾಗಿದ್ದರೆ ಪೊಲೀಸರು ಕತ್ತೆ ಕಾಯುತ್ತಿದ್ದರೇ? 40 ಜನ ಪೊಲೀಸರು, ವ್ಯಾನ್ ನಿಮ್ಮದೇ, ಚಾಲಕನೂ ನಿಮ್ಮವನೇ, ಪೊಲೀಸ್– ಕಾನೂನು ನಿಮ್ಮದೇ ಇರುವಾಗ ನಿಮ್ಮಿಂದ ತಡೆಯಲಾಗಲಿಲ್ಲವೇ ಎಂದು ಕೇಳಿದರು. ಇದು ಶುದ್ಧ ಸುಳ್ಳು ಎಂದರು. ಯಾವ ಪೊಲೀಸರು ಇವತ್ತು ಕಳ್ಳತನ ಮಾಡಲು ಇಳಿದಿದ್ದಾರೆ; 7 ಕೋಟಿ ಬ್ಯಾಂಕ್ ದರೋಡೆ ಮಾಡಿದ್ದು ನಮಗೆಲ್ಲ ಗೊತ್ತಿರುವ ಘಟನೆ. ಅದೇ ಪೊಲೀಸರು ದುಶ್ಯಾಸನನ ರೀತಿಯಲ್ಲಿ ಹಲ್ಲೆ ಮಾಡಿ ವಿವಸ್ತ್ರಗೊಳಿಸಿದ ಘಟನೆ ನಡೆದಿದೆ ಎಂದು ಟೀಕಿಸಿದ್ದಾರೆ.



## ನಾಲ್ವರು ಅಯ್ಯಪ್ಪ ಭಕ್ತರ ಸಾವು



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲೆಯ ಕುಕನೂರಿನ ನಾಲ್ವರು ಅಯ್ಯಪ್ಪ ಮಾಲಾಧಾರಿಗಳು ತುಮಕೂರು ಜಿಲ್ಲೆ ವಸಂತನರಸಾಪುರ ಹತ್ತಿರ ನಡೆದ ಭೀಕರ ಅಪಘಾತದಲ್ಲಿ ಮೃತಪಟ್ಟಿದ್ದಾರೆ.ಸಂಭವಿಸಿ ನಾಲ್ವರು ಅಯ್ಯಪ್ಪ ಭಕ್ತರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಬೆಳಗಿನ ಜಾವ ನಿಂತಿದ್ದ ಲಾರಿಗೆ ಕ್ರೂಸರ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಈ ಭೀಕರ ದುರಂತ ನಡೆದಿದೆ. ಕ್ರೂಸರ್‌ನಲ್ಲಿದ್ದವರು ಏಳು ವರ್ಷದ ಸಾಕ್ಷಿ ಎಂಬ ಬಾಲಕಿ ಸೇರಿ ವೆಂಕಟೇಶ (30), ಮಾರತಪ್ಪ (35) ಹಾಗೂ ಗವಿಸಿದ್ದಪ್ಪ (40) ಎಂಬುವವರು ಸ್ಥಳದಲ್ಲಿಯೆ ಸಾವನ್ನಪ್ಪಿದ್ದಾರೆ. ಅಪಘಾತದಲ್ಲಿ ಇನ್ನೂ ಏಳು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಶಬರಿಮಲೆ ಅಯ್ಯಪ್ಪ ಸ್ವಾಮಿ ದರ್ಶನ ಮುಗಿಸಿಕೊಂಡು ವಾಪಸ್ ಬರುವಾಗ ಇಂದು ಬೆಳಗಿನ ಜಾವ ಈ ದುರ್ಘಟನೆ ಜರುಗಿದೆ. ಶ್ರೀನಿವಾಸ್, ಪ್ರವೀಣ್ ಕುಮಾರ್ , ರಾಜಪ್ಪ ಹುಲಿಗಪ್ಪ , ರಾಕೇಶ್, ತಿರುಪತಿ, ಶ್ರೀನಿವಾಸ್ ಎಂಬ ಗಾಯಾಳುಗಳನ್ನು ಅಲ್ಲಿಯೆ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದು ಬಂದಿದೆ.

**ರಾಜ್ಯದಲ್ಲಿ ಆಡಳಿತರೂಢ ಸರ್ಕಾರದಿಂದ ಬರೀ ಜಗಳಗಳೇ ಆಗುತ್ತಿವೆಯೇ ಹೊರತು, ಅಭಿವೃದ್ಧಿಯಿಲ್ಲ: ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ**

# ಗುರು ಕಾರಣ್ಯವೆಂಬುದು ಅದ್ಭುತ ಧರ್ಮ ನಿಧಿ - ಹಾರಕೂಡ ಶ್ರೀ.



• **ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ:**

ಗುರು ಕಾರುಣ್ಯವೆಂಬುವುದು ಯಾವತ್ತೂ ಬತ್ತದ ಅದ್ಭುತವಾದ ಧರ್ಮ ನಿಧಿಯಾಗಿದೆ ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಬಗದೂರಿ ಗ್ರಾಮಸ್ಥರಿಂದ ಆಯೋಸಿದ ಗುರುವಂದನೆ ಹಾಗೂ 912ನೇ ತುಲಾಭಾರ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ಕಾರುಣ್ಯಮೂರ್ತಿ ಗುರುವಿನ ಸಾನಿಧ್ಯದಿಂದ ಪ್ರಭಾವಿತರಾದವರ ಬದುಕು ಧರ್ಮ ಶ್ರೀಮಂತಿಕೆಯಿಂದ ತುಂಬಿರುತ್ತದೆ.

ಹೊರಗೂ ಒಳಗೂ ಸಮತೂಕದ ಜೀವನ ಸಾಗಿಸಲು ಗುರು ಮಾರ್ಗದರ್ಶನ ಅವಶ್ಯಕತೆ.

ಅಂತರಚಕ್ಷು ಜಾಗೃತೆಗೊಂಡಾಗ ಅಧ್ಯಾತ್ಮದ ಅನುಸಂಧಾನ ಉಂಟಾಗಿ ಬದುಕಿನಲ್ಲಿ ಭಗವದಾನಂದ ಅನುಭವಿಸಲು ಸಾಧ್ಯವಾಗುತ್ತದೆ ಎಂದು ನುಡಿದರು. ಎಲ್ಲಮ್ಮ ದೇವಿಯ ಆವಾಸಸ್ಥಾನವಾದ ಬಗದೂರಿ ಗ್ರಾಮದ ಜನತೆ ಭಕ್ತಿಯ ತೋರಣ ಹೆಣೆದು ಹಾರಕೂಡ ಪೀಠದ ಮೇಲಿನ ತಮ್ಮ ಶ್ರದ್ಧೆ ಅನುಕರಣೆಯವಾಗಿದ್ದು ಸರ್ವರಿಗೂ ಸೌಖ್ಯವಾಗಲೆಂದು ಶುಭ ಹಾರೈಸಿದರು. ವಿಲಾಸ ಪಾಟೀಲ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಈಶ್ವರ ಬಿರಾದಾರ, ಉದಯಕುಮಾರ ಮೂಲಗೆ, ವೆಂಕಟರಾವ ಬಿರಾದಾರ, ಮಲ್ಲಿಕಾರ್ಜುನ ಪಾಟೀಲ, ಜೀತೆ–ಂದ್ರ ಮಂದಿರಕರ್, ಭೀಮಷಾ ಮಂದಿರಕರ್, ಅನ್ನಪೂರ್ಣ ಬಿರಾದಾರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾರ್ತಿಕ ಸ್ವಾಮಿ ಯಲ್ಲದಗುಂಡಿ ಪ್ರಾರ್ಥನ ಗೀತೆ ಹಾಡಿದರು. ಚನ್ನಬಸಪ್ಪ ಮೀನ ಹಾಬಳ ಹಾಗೂ ಶ್ರೀ ಮಲ್ಲಿಕಾರ್ಜುನ ಭಜನಾ ಮಂಡಳಿಯವರು ಸಂಗೀತ ಸೇವೆ ಸಲ್ಲಿಸಿದರು. ಮಹಾದೇವ ಪೂಜಾರಿ ಸ್ವಾಗತಿಸಿ, ನಿರೂಪಿಸಿದರು. ಸಮಸ್ತ ಬಗದೂರಿ ಗ್ರಾಮದ ಭಕ್ತರು ಹಾರಕೂಡ ಶ್ರೀಗಳ 912ನೇ ತುಲಾಭಾರ ಮಾಡಿ ಗುರುವಂದನೆ ಸಲ್ಲಿಸಿದರು. ಕಾರ್ಯಕ್ರಮಕ್ಕೆ ಮೊದಲು ಗ್ರಾಮದ ಹೊರವಲಯದಿಂದ ವೇದಿಕೆಯ ವರೆಗೆ ಅಲಂಕೃತ ಸಾರೋಟಿನಲ್ಲಿ ಹಾರಕೂಡ ಶ್ರೀಗಳ ಅದ್ದೂರಿ ಮೆರವಣಿಗೆ ಜರುಗಿತು.

# ರಕ್ತದಾನ ಶ್ರೇಷ್ಠ ದಾನ – ಡಾ. ರಜನೀಶ ಎಸ್. ವಾಲಿ




• **ಮಲ್ಲಮ್ಮ ನುಡಿ ವಾರ್ತೆ ಬೀದರ :**

09ನೇ ಜ.2026: ನಗರದ ಪ್ರತಿಷ್ಠಿತ ಬಿ.ವಿ. ಭೂಮರಡ್ಡಿ ಮಹಾವಿದ್ಯಾಲಯ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ,

ರೋಟರಿ ಕ್ಲಬ್, ಸಿಲ್ವರ್ ಸ್ಟಾರ್ ವತಿಯಿಂದ ಒಳ್ಳೆಯದಕ್ಕಾಗಿ ಒಗ್ಗಟ್ಟು ಎಂಬ ಘೋಷ ವಾಕ್ಯದೊಂದಿಗೆ ಇವರುಗಳ ಸಂಯುಕ್ತಾಶ್ರಯದಲ್ಲಿ ರಕ್ತದಾನದ ದಿನಾಚರಣೆಯ ಅಂಗವಾಗಿ ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿದ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಸದಸ್ಯರು ಹಾಗೂ ಬಿ.ವಿ.ಬಿ ಮಹಾವಿದ್ಯಾಲಯ ಶಾಲಾ ಕಾಲೇಜುಗಳ ಸಂಚಾಲಕರಾದ ಡಾ. ರಜನೀಶ್ ಎಸ್. ವಾಲಿಯವರು ಮಾತನಾಡುತ್ತಾ ರಕ್ತದಾನ ಮಹಾದಾನ ರಕ್ತದಾನದಿಂದ ಹಲವಾರು ರೋಗಿಗಳ ಜೀವಗಳನ್ನು ಉಳಿಸಬಹುದು, ಉದಾಹರಣೆ ಆಕಸ್ಮಿಕ ಅಪಘಾತದಲ್ಲಿ ರೋಗಿಯ ಶರೀರದಿಂದ ರಕ್ತಸ್ರಾವವಾದಾಗ ರಕ್ತ ಬೇಕಾಗುತ್ತದೆ, ರಕ್ತದಾನಿಗಳು ರಕ್ತ ಕೊಡುವುದರಿಂದ ಅವರ ದೇಹದಲ್ಲಿ ಮೂರು ತಿಂಗಳ ಒಳಗೆ ಮತ್ತೆ ಹೊಸ ರಕ್ತ ಕಣಗಳು ಉತ್ಪತ್ತಿಯಾಗುತ್ತವೆ. ಇದರಿಂದ ಯಾರು ಭಯಪಡದೆ ರಕ್ತದಾನವನ್ನು ಮಾಡಬೇಕು ಎಂದು ಮಾರ್ಮಿಕವಾಗಿ ನುಡಿದರು.

ಈ ಕಾರ್ಯಕ್ರಮದಲ್ಲಿ ಶ್ರೀ ಅನಶೂಲ್ ಆರ್. ವಾಲಿ, ಶ್ರೀ ಸೂರ್ಯಕಾಂತ ನಾಗಮಾರಪಳ್ಳಿ, ಶ್ರೀ ಸಚೀನ ಶೆಟಕಾರ, ಶ್ರೀಮತಿ ದೈವಶಾಲಾ ಶ್ರೀ ಶೇಶಾಂಕ ಬಿರಾದಾರ ಶ್ರೀ ಚಂದ್ರಶೇಖರ ಸಿ. ಇವರೆಲ್ಲರು ಬಿ.ವಿ.ಬಿ. ಮಹಾವಿದ್ಯಾಲಯದ ವತಿಯಿಂದ ರಕ್ತದಾನ ಮಾಡಿದರು ಅಷ್ಟೇ ಅಲ್ಲದೇ ಮಹಾವಿದ್ಯಾಲಯದ ಎನ್.ಸಿ.ಸಿ., ಎನ್.ಎಸ್.ಎಸ್.ನ ಸುಮಾರು ವಿದ್ಯಾರ್ಥಿಗಳು ರಕ್ತದಾನ ಮಾಡಿ ಸಮಾಜಕ್ಕೆ ಮಾದರಿಯಾದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೀಪಾ ರಾಗ ಮಾತನಾಡುತ್ತಾ ರಕ್ತದಾನ ಮಹಾದಾನೆ, ಅನ್ನದಾನ, ನೇತ್ರದಾನ, ವಿದ್ಯಾದಾನ ಇವೆಲ್ಲವುಕ್ಕಿಂತ ಮಿಗಲಾಗಿ ಮತ್ತೊಬ್ಬರ ಪ್ರಾಣ ಉಳಿಸುವ ರಕ್ತದಾನ ಶ್ರೇಷ್ಠದಾನವಾಗಿದೆ, ರಕ್ತದಾನ ಮಾಡಿದ ರಕ್ತವನ್ನು ನಾಲ್ಕು ಘಟಕಗಳಾಗಿ ವಿಂಗಡಿಸಿ ಶೇಖರಣೆ ಮಾಡಬಹುದು 1)ಪ್ಲಾಸ್ಮಾ 2)ಬಿಳಿ ರಕ್ತ ಕಣಗಳು 3)ಕೆಂಪು ರಕ್ತ ಕಣಗಳು ಹಾಗೂ 4) ಪ್ಲೇಟ್‌ಲೇಟ್ಸ್ ಈ ರೀತಿಯಾಗಿ ವಿಂಗಡಿಸಿ ನಾಲ್ಕು ಜೀವಗಳನ್ನು ಉಳಿಸಬಹುದು ಎಂದು ಮಾರ್ಮಿಕವಾಗಿ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಾದ ಶ್ರೀ ಶಿವಶರಣಪ್ಪಾ ವಾಲಿ, ಶ್ರೀಮತಿ ಅಂಜನಾ ಆರ್. ವಾಲಿ, ಶ್ರೀ ಆದೀಶ್ ಆರ್.ವಾಲಿ, ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಮಲ್ಲಿಕಾರ್ಜುನ ಕನಕಟ್ಟೆ, ಶ್ರೀ ಹಾವಶೆಟ್ಟಿ ಪಾಟೀಲ ಬ್ರಿಮ್ಸ್‌ನ ರಕ್ತನಿಧಿಯ ಹಿರಿಯ ಅಧಿಕಾರಿಯಾದ ಶ್ರೀ ವೀರೇಂದ್ರ ಪಾಟೀಲ ಹಾಗೂ ಅವರ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಕಾರ್ಯಕ್ರಮದಲ್ಲಿ ಎನ್.ಸಿ.ಸಿ. ಅಧಿಕಾರಿಯಾದ ಡಾ. ಸಾಮ್ರಾಟ್ ಶಿವಪ್ಪಾ ಪಾಯದ್, ಎನ್.ಎಸ್.ಎಸ್. ಅಧಿಕಾರಿಯಾದ ಡಾ. ಲಕ್ಷ್ಮೀ ವಿಶ್ವನಾಥ, ಶ್ರೀ ಬಸವರಾಜ ಬಿರಾದಾರ ವಾಯ್.ಆರ್.ಸಿ., ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಧಿಕಾರಿಯಾದ ಡಾ. ಶಿವಲೀಲಾ ವೀರಯ್ಯಾ ಸ್ವಾಮಿ, ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ರೂಪೇಶ ಗೊಂಟಲ್ ಗೆ ಸನ್ಮಾನ.



(ವರದಿ.ಡಿ.ಕೆ. ಪ್ರಹ್ಲಾದ).

• **ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ :**

ಇಲ್ಲಿನ ಛಾಯಾಗ್ರಾಹಕರಾದ ರೂಪೇಶ ಗೊಂಟಲ್ ಅವರು ಇತ್ತೀಚೆಗೆ ಬಿಡುಗಡೆಯಾದ ಜಗನ್ಮಾತೆ ಅಕ್ಕಮಹಾದೇವಿ ಚಲನಚಿತ್ರದಲ್ಲಿ ಸಂಗನ ಬಸವ ಸ್ವಾಮಿಜಿ ಪಾತ್ರದಲ್ಲಿ ನಟಿಸಿರುವುದರಿಂದ ಅವರನ್ನು ಅನೇಕ ಛಾಯಾಗ್ರಾಹಕರು ಮತ್ತು ಅಭಿಮಾನಿಗಳಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಉಪನ್ಯಾಸಕರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ನರ್ಸಿಂಗರಡ್ಡಿ ಗದಲೇಗಾಂವ ಮಾತನಾಡಿ ಶರಣರ ನಾಡಾದ ಬಸವಕಲ್ಯಾಣಕೆ ಆಗಮಿಸಿದ ಜಗನ್ಮಾತೆ ಅಕ್ಕ ಮಹಾದೇವಿ ಯವರ ಚಲನಚಿತ್ರದಲ್ಲಿ ಛಾಯಾಗ್ರಾಹಕರಾದ ರೂಪೇಶ ಗೊಂಟಲ್ ಅವರಿಗೆ ಪಾತ್ರ ನಿರ್ವಹಿಸಲು ಅವಕಾಶ ನೀಡಿದ್ದು ಸಂತೋಷ ತಂದಿದೆ ಅಲ್ಲದೆ ಇವರು ಉತ್ತಮವಾಗಿ ನಟಿಸಿದ್ದಾರೆ ಎಂದರು. ಪ್ರಮುಖರಾದ ಸಂಗೀತ ಶಿಕ್ಷಕರಾದ ಅನೀಲ ಕಾಂಬಳೆ. ಛಾಯಾಗ್ರಾಹಕರಾದ ದೀಲಿಪ ಸ್ವಾಮಿ. ಶಿಕ್ಷಕರಾದ ಅನೂಪ್ ಪಾಠಕ. ಶಿವಶಂಕರ ಕುರಕೋಟೆ. ರಾಜು ಗರಜೆ. ಉಮಕಾಂತ. ಕ್ಷೀರಸಾಗರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಕಲಿಕಾ ಹಬ್ಬದಿಂದ ಮಕ್ಕಳ ಪ್ರತಿಭೆಗೆ ಹೊಸ ದಿಕ್ಕು

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**



ಮಕ್ಕಳ ಸರ್ವತೋಮುಖ ಬೆಳವಣಿಗೆ ಹಾಗೂ ಕಲಿಕೆಯ ಮೇಲಿನ ಆಸಕ್ತಿ ಹೆಚ್ಚಿಸಲು ಎಫ್‌ಎಲ್‌ಎನ್ ಕಲಿಕಾ ಹಬ್ಬಗಳು ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ದತ್ತಾತ್ರಿ ಕಾಟಕರ ಹೇಳಿದರು. ತಾಲೂಕಿನ ಕೋಟಗ್ಯಾಳವಾಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಡೋಣಗಾಪುರ ಕ್ಲಸ್ಟರ್ ಮಟ್ಟದ ಎಫ್‌ಎಲ್‌ಎನ್ ಕಲಿಕಾ ಹಬ್ಬ–2026 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕಲಿಕಾ ಹಬ್ಬಗಳು ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತಂದು, ಕಲಿಕೆಯನ್ನು ಸಂತಸದಾಯಕವಾಗಿಸುತ್ತವೆ. 1 ರಿಂದ 5ನೇ ತರಗತಿಯ ಮಕ್ಕಳಿಗೆ ಆಯೋಜಿಸುವ ಈ ಚಟುವಟಿಕೆಗಳು ಸಮುದಾಯದಲ್ಲಿ ಶಾಲೆಗಳ ಮೇಲಿನ ನಂಬಿಕೆಯನ್ನು ಹೆಚ್ಚಿಸುತ್ತವೆ ಎಂದರು.

ಬಿ.ಆರ್.ಪಿ ಸಂಜುಕುಮಾರ ಸಾವರೇ ಮಾತನಾಡಿ, ಮಕ್ಕಳಲ್ಲಿ ಪ್ರಶ್ನಿಸುವ ಮನೋಭಾವ, ಆತ್ಮವಿಶ್ವಾಸ ಮತ್ತು ಸಕ್ರಿಯ ಕಲಿಕೆ ಬೆಳೆಸುವುದೇ ಕಲಿಕಾ ಹಬ್ಬದ ಮುಖ್ಯ ಉದ್ದೇಶ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಆರ್‌ಪಿ ಸಂತೋಷ ಮುಧೋಳೆ, ಚೇತನಾ, ಸಿಆರ್‌ಪಿ ಅಶೋಕ ಕಲ್ಯಾಣೆ, ಮಹೇಶ ಕೊರಾಳೆ, ಸತ್ಯವಾನ ಕಾಂಬಳೆ, ಸಂದೀಪ ವಾಡೇಕರ, ಸಂತೋಷ ಧಬಾಲೆ, ಮುಖ್ಯ ಗುರುಗಳಾದ ಶ್ರೀದೇವಿ ಬಿರಾದರ, ಪ್ರಭಾಕರ ಪಾಟೀಲ, ವಲಯದ ಮುಖ್ಯ ಗುರುಗಳು, ಶಿಕ್ಷಕರು, ಮಕ್ಕಳು ಹಾಗೂ ಪಾಲಕರು ಉಪಸ್ಥಿತರಿದ್ದರು. ಸಿ ಆರ್ ಪಿ ಚಂದ್ರಕಾಂತ್ ತಳವಾಡೆ ನಿರೂಪಿಸಿದರು. ಸಂದೀಪವಾಡೇಕರ ಸ್ವಾಗತಿಸಿದರು, ಗಂಗಾಧರ ವಂದಿಸಿದರು.


**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬೀದರ ವಿಭಾಗ ಬೀದರ**

ಸಂ/ಕಕರಸಾ/ಬೀವಿ/ಸಂಚಾರ/ವಾಣಿಜ್ಯ/3160/25–26/ ದಿನಾಂಕ:– 08.01.2026

**ಇ–ಟೆಂಡರ ಪ್ರಕಟಣೆ ಸಂ: 01/2026**
**(ಇ–ಪ್ರೊಕ್ಯೂರಮೆಂಟ ಮುಖಾಂತರ)**

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಬೀದರ ವಿಭಾಗಕ್ಕೆ ಸೇರಿದ ಬಸ್ ನಿಲ್ದಾಣಗಳ ಮೂತ್ರಾಲಯ/ಶೌಚಾಲಯ ಹಾಗೂ ಆವರಣ, ಕಟ್ಟಡ, ಅಂಕಣಗಳು, ಸಿಬ್ಬಂದಿ ವಿಶ್ರಾಂತಿ ಕೋಣೆ ಮತ್ತು ಸಂಪೂರ್ಣ ಬಸ್ ನಿಲ್ದಾಣದ ಸ್ವಚ್ಛತಾ ನಿರ್ವಹಣೆಗಾಗಿ ಪರವಾನಗೆದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರಮೆಂಟ ಮುಖಾಂತರ ಇ–ಟೆಂಡರ ಅಹ್ವಾನಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ವೆಬ್‌ಸೈಟ kppp.Karnataka.gov.in ನಿಂದ ಡೌನಲೋಡ್ ಮಾಡಿಕೊಳ್ಳಬಹುದು. ಆನಲೈನ ಟೆಂಡರ ಅರ್ಜಿ ಸಲ್ಲಿಸಲು **ದಿನಾಂಕ: 21–01–2026 ರಂದು 16:00 ಗಂಟೆಗೆ ಕೊನೆಯ ದಿನಾಂಕವಾಗಿರುತ್ತದೆ.** ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ಕ.ರ.ಸಾ.ನಿಗಮ, ಬೀದರ ವಿಭಾಗ, ಬೀದರನಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ 7760992202 ಅಥವಾ ವಿಷಯ ನಿರ್ವಾಹಕರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

**ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ**
**ಕ.ಕ.ರ.ಸಾ.ನಿಗಮ ಬೀದರ ವಿಭಾಗ ಬೀದರ**

ವಾ.ಸಾ.ಸಂ.ಇ/ಬೀದರ/292/ಕೆ.ಎಸ್.ಎಂ.ಸಿ.&ಎ/2025–26


# ಮಹಿಳೆಯರು ಆರ್ಥಿಕ ಸ್ವಾವಲಂಬನೆ ಧರ್ಮಸ್ಥಳ ಸಂಘ ದಾರಿದೀಪ:ಮುರುಳಿಧರ

• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಒಂದಾದ ಸ್ವ–ಸಹಾಯ ಸಂಘದಿಂದ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಬದುಕಿಗೆ ದಾರಿದೀಪವಾಗಿದೆ ಎಂದ ಮುರುಳಿಧರ ಎಚ್.ಎಲ್ ಜಿಲ್ಲಾ ನಿರ್ದೇಶಕರು



ಎಸ್.ಕೆ.ಡಿ.ಆರ್.ಡಿ.ಪಿ.ಬಿ.ಸಿ ಟ್ರಸ್ಟ್ (ರಿ) ಬೀದರ ಅವರು ಹೇಳಿದರು.

ಪಟ್ಟಣದ ಬಸವ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್(ರಿ) ವತಿಯಿಂದ ಆಯೋಜನೆ ಮಾಡಿದ ಸಾಮೂಹಿಕ ಲಕ್ಷ್ಮೀ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿದರು.

**ಸಮಾಜದ ಕಲ್ಯಾನಕ್ಕಾಗಿ**

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹತ್ತು ಹಲುವು ಯೋಜನೆ ನೀಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ, ನೈರ್ಮಲ್ಯ ಮತ್ತು ಮೂಲಸೌಕರ್ಯ ಅಭಿವೃದ್ಧಿ, ಕೃಷಿ ತರಬೇತಿ, ಸೇರಿದಂತೆ ಅನೇಕ ಜನಪರ ಕಾರ್ಯಕ್ರಮಗಳು ಕರ್ನಾಟಕ ದಾದ್ಯಂತ ಹಳ್ಳಿಗಳಲ್ಲಿ ಯೋಜನೆಯು ವ್ಯಾಪಿಸಿದೆ ಎಂದು ಹೇಳಿದರು. ಮುಖ್ಯ ಅತಿಥಿ ಮಡಿವಾಳಪ್ಪ ಮುರ್ಕೆ ಸದಸ್ಯರು, ಜಿಲ್ಲಾ ಜನ ಜಾಗೃತಿ ವೇದಿಕೆ ಬೀದರ, ಮಾತನಾಡಿ ಸಮಾಜದ ಕಟ್ಟೆ ಕಡೆ ವ್ಯಕ್ತಿ ಬಗ್ಗೆ ಕಾಳಜಿ ವಹಿಸಿ ಅನೇಕ ಯೋಜನೆ ರೂಪಿಸಲಾಗಿದೆ ಇದರ ಲಾಭ ಪಡೆದುಕೊಳ್ಳಬೇಕು ಎಂದರು. ಯುವ ಮುಖಂಡ ಮಹೇಶ ಸಜ್ಜಶೆಟ್ಟಿ ಮಾತನಾಡಿ ಸಂಘವು ತೀವ್ರಗತಿಯಲ್ಲಿ ಬೆಳೆಯುದಕ್ಕೆ ಸಂಘದ ಜನಪರ ಕೆಲೆಸಗಳೇ ಕಾರಣ ಎಂದು ಹೇಳಿದರು. ಸಾಮೂಹಿಕ ಲಕ್ಷ್ಮೀಪೂಜಾ ಬೆಳಗ್ಗೆ 9 ಗಂಟೆಗೆ ಸಮಿತಿಯ ಪದಾಧಿಕಾರಿಗಳು ನೆರವೇರಿಸಿದರು.

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯ ಉಮಾಕಾಂತ ಸ್ವಾಮಿ ದೇಶಿಕೇಂದ್ರ ಡೊಣಗಾಂವ ವಹಿಸಿದರು. ಮುಖ್ಯ ಅತಿಥಿಯಾಗಿ ದೇವೇಂದ್ರ ಪಾಟೀಲ ಡಿಗ್ಗಿ, ಗುರುಬಸಯ್ಯ ಸ್ವಾಮಿ ಚಾಂಡೇಶ್ವರ, ಲಕ್ಷ್ಮಣ್ ಘಾಗರೆ ಕಮಲನಗರ, ಭರತ ಕದಂ ಹೊಳಸಮುದ್ರ, ಶಶಿಕಾಂತ ಪಾಟಿಲ ಮದನೂರ, ರಾಜಕುಮಾರ ಗುರುನಾಥ ಸೋನಾಳ, ಶಾಂತಪ್ಪ ಮೆಹತ್ರೆ ಕಾಳಗಾಪುರ, ರಾಘವೇಂದ್ರ ತಾಲೂಕ ಯೋಜನಾಧಿಕಾರಿ ಗಳು, ಬಸವರಾಜ ತಾಲೂಕ ಕೃಷಿ ಮೇಲ್ವಿಚಾರಕರು ಸೇರಿದಂತೆ ಸಂಘದ ಮೇಲ್ವಿಚಾರಕರು/ಸೇವಾಪ್ರತಿನಿಧಿಗಳು, ಅಧ್ಯಕ್ಷರು/ಪದಾಧಿಕಾರಿಗಳು ಪ್ರಗತಿಬಂಧು ಸ್ವ–ಸಹಾಯ ಸಂಘಗಳ ಒಕ್ಕುಟ ಕಮಲನಗರ ವಲಯ ಹಾಗೂ ನೂರಾರು ಮಹಿಳೆಯರು ಉಪಸ್ಥಿತರಿದ್ದರು. ಕಾರ್ಯಕ್ರಮ ನಿರೂಪಣೆ ಶರಣು ಬಿರಾದಾರ ಕಮಲನಗರ ತಾಲೂಕ ಯೋಜನಾಧಿಕಾರಿಗಳು ಇವರು ಮಾಡಿದರು.

## CITATION

**IN THE COURT OF THE PRL. CIVIL JUDGE AND JMFC., AT HUMNABAD.**

**CRL. MISC. No.2927/2025.**

**Petitioners:**

**1. Abdul Hameed S/o late. Abdul Qayyum,** Age: 80-year, Occu: Nil.

**2. Shakeel S/o late. Abdul Sadi,** Age: 48-year, Occu: Private work. Both R/o Zerpet, Humnabad now at Hyderabad-TS.

**3. Abdul Naqeeb S/o late. Abdul Naseeb,** Age: 45-year. Occu: Private work.

**4. Abdul Mutalib S/o late. Abdul Naseeb,** Age: 43-year. Occu: Private work.

**5. Samreen D/o late. Abdul Naseeb,** Age: 40-year, Occu: House hold.

**Petitioner**

No.3 to 5 R/o Kufartod galli, Humnabad.

**6. Badar Jahan D/o late. Abdul Naseeb,** Age: 45-year. Occu: Private work. R/o Kufartod galli, Humnabad. Now at Bemalkheda. Tq. Chitguppa.

**Respondent:**

The Registrar of Birth and Death through The Chief officer TMC Humnabad.

**Sub:-Petition U/Sec. 13(3) of Birth and Death Registration Act-1969**

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father of petitioner No.1. Grand father of petitioner No.2 to 6 by namely LATE. ABDUL KHAYUM S/O MAHETAB SAB, who was died on 15.05.1997 at House at Town Humnabad. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 20.02.2026 at 11.00 AM in person or any authorized pleader to answer such claim otherwise the matter will be heard and determined in your absence as per law.

**Given under my hand and seal of he court, this the 06-01-2026**

**/By order of the court//**

**Chief Ministerial Officer,**

**Prl. Civil Judge & JMFC Court,**

**Humnabad.**

## CITATION

**IN THE COURT OF THE PRL. CIVIL JUDGE AND JMFC., AT HUMNABAD.**

**CRL. MISC. No.2931/2025.**

**Petitioners:**

**1. Anandraj Manik Prabhu S/o Siddharaj Manik Prabhu,** Age: 54-yrs. Occu: Agriculture. R/o Maniknagar. Tq. Humnabad. Dist. Bidar.

**Respondent:**

The Registrar of Birth and Death through The Tahasildar Humnabad. Dist. Bidar.

**Sub: Petition U/Sec. 13(3) of Birth and Death Registration Act-1969**

Whereas, the above mentioned petitioner has filed the petition under section 13(3) of Birth and Death Registration Act-1969 praying this Honorable Court to issue Death Certificate of Grand Father of petitioner by namely LATE. SHANKAR MANIK PRABHU, who was died on 28.02.1945 at Village Maniknagar, Humnabad, Tq. Humnabad Dist. Bidar. The petitioner claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 20.02.2026 at 11.00 AM in person or any authorized pleader to answer such claim otherwise the matter will be heard and determined in your absence as per law.

**Given under my hand and seal of he court, this the 07-01-2026.**

**//By order of the court//**

**Chief Ministerial Officer,**

**Prl. Civil Judge & JMFC Court,**

**Humnabad.**

## CITATION

**IN THE COURT OF THE I ADDL. CIVIL JUDGE AND JMFC., AT HUMNABAD.**

**CRL. MISC. No.1823/2025.**

**Petitioners:**

**1. Laxmi W/o late. Prabhu,** Age: 25-year, Occu: House hold

**2. Chandrashekhar S/o late. Prabhu,** Age: 09-year, Occu: Student.

**3. Ashwini D/o late. Prabhu,** Age: 07-year, Occu: Student. All R/o Village Bashirapur. Tq. Chitguppa. Dist. Bidar. (The petitioner No.2 and 3 are minors they are under guardianship of petitioner No. 1)

**Respondent:**

The Registrar of Birth and Death through The Tahasildar Chitguppa.

**Sub:- Petition U/Sec. 13(3) of Birth and Death Registration Act-1969**

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Husband of petitioner No.1 and Father of petitioner No.2 and 3. Deceased by namely LATE. PRABHU S/O CHANDRAPPA, he was died on 31.10.2020 at Village Bashirapur. Tq. Chitguppa. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 28.02.2026 at 11.00 AM in person or any authorized pleader to answer such claim otherwise the matter will be heard and determined in your absence as per law.

**Given under my hand and seal of he court, this the 30-12-2025**

**//By order of the court//**

**Chief Ministerial Officer,**

**Prl. Civil Judge & JMFC Court,**

**Humnabad.**

# ಜ.11, 12 ಧರ್ಮ ಜಾಗೃತಿಸಮಾವೇಶ



• ಮಲ್ಲಮ್ಮ ನುಡಿ ವಾರ್ತೆ ಕೆಂಗೇರಿ :

ಏಕದಳ ಬಿಲ್ವ ಬಂಡೇಮಠದ ಪ್ರಾಂಗಣದಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರು ಸಾರೋಟೋತ್ಸವ–ಇಷ್ಟಲಿಂಗ ಮಹಾಪೂಜೆ, ಶಿವದೀಕ್ಷೆ ಹಾಗೂ ಜನ ಜಾಗೃತಿ ಧಾರ್ಮಿಕ ಸಮಾವೇಶ ನಡೆಯಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಸದ್ಭಕ್ತರು ಪಾಲ್ಗೊಂಡು ಯಶಸ್ವಿಗೊಳಿಸಿ ಎಂದು ಏಕದಳ ಬಿಲ್ವ ಬಂಡೇಮಠದ ಶ್ರೀ ಸಚ್ಚಿದಾನಂದ ಸ್ವಾಮೀಜಿ ಮನವಿ ಮಾಡಿದರು. ಮಠದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಸ್ವಾಮೀಜಿ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು. ಶ್ರೀ ಮಠ, ಅಖಿಲ ಭಾರತ

ವೀರಶೈವಲಿಂಗಾಯತಮಹಾಸಭಾ (ರಿ), ಹಾಗೂ ಸಮಾಜದ ಸದ್ಭಕ್ತರ ಸಹಯೋಗದಲ್ಲಿ ವಿಜೃಂ ಭಣೆ–ಯ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ ಎಂದರು

ಇದೇ ಜ.11 ಭಾನುವಾರ ಸಂಜೆ 4 ಗಂಟೆಗೆ ಬಾಳೆಹೊನ್ನೂರಿನ ಶ್ರೀಮದ್ ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ರಾಜದೇಶಿ ಕೇಂದ್ರ ಸ್ವಾಮೀಜಿ ಅವರನ್ನು ಕೆಂಗೇರಿಯ ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆಯಿಂದ ಶ್ರೀ ಏಕದಳ ಬಿಲ್ವ ಬಂಡೆಮಠದವರೆಗೆ ಸಾರೋಟಿನಲ್ಲಿ ಕರೆತರಲಾಗುವುದು. ಅಂತೆಯೇ

ಜ–12ರ ಸೋಮವಾರ ಬೆಳಿಗ್ಗೆ 7 ಗಂಟೆಗೆ ರಂಭಾಪುರಿ ಶ್ರೀಗಳಿಂದ ಇಷ್ಟಲಿಂಗ ಮಹಾಪೂಜೆ ಹಾಗೂ ಶಿವ ದೀಕ್ಷೆ 11 ಗಂಟೆಗೆ ಧರ್ಮ ಜಾಗೃತಿ ಸಮಾವೇಶ ನಡೆಯಲಿದೆ ಎ0ದರು.

ಕಾರ್ಯಕ್ರಮದಲ್ಲಿ ನೊಣವಿನಕೆರೆಯ ಕಾಡಸಿದ್ದೇಶ್ವರ ಮಠದ ಡಾ. ಕರಿವೃಷಭ ದೇಶಿಕೇಂದ್ರ ಶಿವಯೋಗಿ ಸ್ವಾಮೀಜಿ ಸೇರಿ ವಿವಿಧ ಮಠಾಧೀಶರು, ಕೇ0ದ್ರ ಸಚಿವೆ ಶೋಭಾ ಕರಂದ್ಲಾಜೆ, ಅರಣ್ಯ ಸಚಿವ ಈಶ್ವರ್ ಖಂಡ್ರೆ, ಶಾಸಕ ಎಸ್.ಟಿ ಸೋಮಶೇಖರ್ ಸಹಿತ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಮಾಜಿ ಮುಖ್ಯಮ0ತ್ರಿ ಬಿಎಸ್ ಯಡಿಯೂರಪ್ಪ ಅವರಿಗೆ

ಗೌರವ ಗುರುರಕ್ಷೆ ನಡೆಯಲಿದೆ ಎ0ದರು ಪತ್ರಿಕಾಗೋಷ್ಠಿಯಲ್ಲಿ ಕನಕಪುರ ಚಿಕ್ಕಕಲ್ಲಬಾಳುಮಠದ ಶಿವಾನ0ದ ಶಿವಾಚಾರ್ಯ ಸ್ವಾಮೀಜಿ, ರಾಜ್ಯ ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷ ಎಂ.ರುದ್ರೇಶ್, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಪಂಚಾಕ್ಷರಿ, ಮುಖಂಡರಾದ ಮೋಹನ್ ಕುಮಾರ್, ಶಶಿಕುಮಾರ್, ಮಂಜುನಾಥಯ್ಯ, ಡಾ. ಅನುಪಮಾ ಪಂಚಾಕ್ಷರಿ, ಸೂಲಿವಾರ ಬಸವರಾಜು, ಮಹದೇವ್ ಎನ್.ಎಸ್ ರುದ್ರೇಶ್, ಪ್ರಭಾಕರ್ ಲಾಡ್, ಪರಮೇಶ್, ಜಗದೀಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕುಂಬಾರಪೇಟೆಯ ಶ್ರೀ ಬಲ ಭೀಮೇಶ್ವರ ಮಂಡಳಿಯ ಸಾರ್ಥಕ ಪಯಣ.!

• ಮಲ್ಮನ ನುಡಿ ವಾರ್ತೆ : ಸುರಪುರ :

ಕುಂಬಾರಪೇಟೆಯಲ್ಲಿ 25 ವರ್ಷಗಳ ಭಕ್ತಿಸೇವೆ: ಕಲಾವಿದರಿಗೆ ಗೌರವ ಕುಂಬಾರ ಪೇಟೆಯ ಶ್ರೀ ಬಲ ಭೀಮೇಶ್ವರ ಭಜನಾ ಮಂಡಳಿ ಕಳೆದ 25 ವರ್ಷಗಳಿಂದ ನಿರಂತರವಾಗಿ ಭಕ್ತಿಗೀತೆ, ಭಜನೆ, ಹರಿಕಥೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಸಮಾಜ ಸೇವೆ ಮಾಡುತ್ತಾ ಬಂದಿದೆ. ಭಕ್ತಿ–ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಸ್ಥಾಪಿತವಾದ ಈ ಮಂಡಳಿ, ಗ್ರಾಮೀಣ ಭಾಗದಲ್ಲಿ ಧಾರ್ಮಿಕ ಚಟುವಟಿಕೆಗಳಿಗೆ ಹೊಸ ಆಯಾಮ ನೀಡಿದೆ.

ಈ ಅವಧಿಯಲ್ಲಿ ಅನೇಕ ನಿಷ್ಠಾವಂತ ಕಲಾವಿದರು ಹಾಗೂ ಭಜನಾ ಕಲಾವಿದರ ಶ್ರಮ, ತ್ಯಾಗ ಮತ್ತು ಸೇವೆ ಮಂಡಳಿಯ ಯಶಸ್ಸಿಗೆ ಮೂಲ ಕಾರಣವಾಗಿದೆ. ಯಾವುದೇ ಪ್ರತಿಫಲದ ನಿರೀಕ್ಷೆ ಇಲ್ಲದೆ, ದೇವರ ಸೇವೆಯೇ ಜೀವನದ ಧ್ಯೇಯವೆಂದು ಭಾವಿಸಿ, ಕಲಾವಿದರು ನಿರಂತರವಾಗಿ ಸೇವೆ ಸಲ್ಲಿಸಿದ್ದಾರೆ.

ಮಂಡಳಿಯ ಕಾರ್ಯಕ್ರಮಗಳು ಯುವ ಪೀಳಿಗೆಗೆ ಧಾರ್ಮಿಕ ಮೌಲ್ಯಗಳು, ಸಂಸ್ಕಾರ ಹಾಗೂ ಶಿಸ್ತು ಕಲಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಹಬ್ಬಗಳು, ಜಾತ್ರೆಗಳು, ಉತ್ಸವಗಳು ಹಾಗೂ ವಿಶೇಷ ಪೂಜೆಗಳಲ್ಲಿ ಭಜನಾ ಮಂಡಳಿಯ ಸೇವೆ ಜನಮನ ಸೆಳೆದಿದೆ.

25 ವರ್ಷಗಳ ಈ ಸಾರ್ಥಕ ಸೇವೆಯ ಹಿನ್ನೆಲೆ, ಸೇವೆ ಸಲ್ಲಿಸಿದ ಎಲ್ಲಾ ಕಲಾವಿದರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಮಂಡಳಿಯ ಪದಾಧಿಕಾರಿಗಳು ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿಯೂ ಸಮಾಜಕ್ಕೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸೇವೆ ಇನ್ನಷ್ಟು ಬಲವಾಗಿ ಮುಂದುವರಿಸುವ ಸಂಕಲ್ಪವನ್ನು ಮಂಡಳಿ ಹೊಂದಿದೆ.

ಈ ಪವಿತ್ರ ಸೇವೆಯಲ್ಲಿ ಕೈಜೋಡಿಸಿದ ಎಲ್ಲಾ ಕಲಾವಿದರು, ಸಹಕಾರ ನೀಡಿದ ಗ್ರಾಮಸ್ಥರು ಹಾಗೂ ಭಕ್ತರಿಗೆ ಮಂಡಳಿಯ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಕೃತಜ್ಞತೆಗಳು. ಹನುಮಂತ ಕೆಂಗೇರಿ. ಮೈಲಾರಪ್ಪ ಮಂಗ್ಯಾಳ ನಿಂಗಪ್ಪ ಬೋವಿ. ಮರಿಯಪ್ಪ ಶಾರದಳ್ಳಿ. ಸಿದ್ದಪ್ಪ ಮಂಗಿಹಾಳ. ಮಲ್ಲಪ್ಪ ಸಂಗ್ಟರ್. ಮರಿಯಪ್ಪ ಶಾಂತಪುರ. ಆದಪ್ಪ ಕೆಂಗುರಿ. ಲಕ್ಷ್ಮಣ ದೊಣ್ಣೆಗೆರೆ ಹನುಮಂತ ಹರಪ್ನಳ್ಳಿ ಯಂಕಪ್ಪ ಐಕುರ್ ಹಣಮಂತ ಬೊಂಬ್ಯೆ. ಮಲ್ಲಣ್ಣ ಹುಬ್ಬಳ್ಳಿ. ಸಾಕಷ್ಟು ಕಲಾವಿದರು. ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.!



# ‘ಸೌಹಾರ್ಧ ಭಾರತ ಸಮಾನತೆಯ ಸ್ನೇಹಿತ’ ಪುಸ್ತಕ ಬಿಡುಗಡೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ಬೆಂಗಳೂರು ಜನ ಪ್ರಕಾಸನ ಸಂಸ್ಥೆಯು ಡಾ. ಬರಗೂರು ರಾಮಚಂದ್ರಪ್ಪ ಅವರು ರಚಿಸಿರುವ ‘ಸೌಹಾರ್ಧ ಭಾರತ ಸಮಾನತೆಯ ಸ್ನೇಹಿತ’ ಪುಸ್ತಕ ಬಿಡುಗಡೆ ಸಮಾರಂಭವನ್ನು ಜ. 10, 2026 ರಂದು ಬೆಳಿಗ್ಗೆ 11:00 ಗಂಟೆಗೆ ಕುಸನೂರು ರಸ್ತೆಯಲ್ಲಿರುವ ಜಿಡಿಯ ಲೇಔಟನ ಜನರಂಗದಲ್ಲಿ ಆಯೋಜಿಸಿದೆ.

ಪತ್ರಗಾರ ಇಲಾಖೆಯ ಡಾ. ವೀರಶೆಟ್ಟಿ ಗಾರಂಪಳ್ಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಫರಹತಾಬಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಇಂದುಮತಿ ಪಾಟೀಲ್ ಪುಸ್ತಕ ಬಿಡುಗಡೆಗೊಳಿಸುವರು.

ಸರ್ಕಾರಿ ಸ್ವಾಯತ್ತ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಸವಿತಾ ತಿವಾರಿ ಮುಖ್ಯ ಅತಿಥಿಯಾಗಿ ಆಗಮಿಸುವರು. ಯುವ ಬರಹಗಾರ ಡಾ. ಪಿ. ನಂದಕುಮಾರ ಪುಸ್ತಕ ಪರಿಚಯಿಸುವರು. ಜನರಂಗ ಕಾರ್ಯದರ್ಶಿ ಆಶಾ ಚಿ. ಕಂಠಿ ಉಪಸ್ಥಿತರಿರುವರು.

ರಾಷ್ಟ್ರೀಯ ಭಾವೈಖ್ಯತೆ ಸಾರುವ ಈ ಪುಸ್ತಕ ರಾಜ್ಯದ 20 ಜಿಲ್ಲೆಗಳಲ್ಲಿ ಏಕಕಾಲದಲ್ಲಿ ಬಿಡುಗಡೆಗೊಳ್ಳಲಿರುವ ಈ ವಿಶೇಷ ಕಾರ್ಯಕ್ರಮದಲ್ಲಿ ಡಾ. ಕಿರಣ ಗಾಜನೂರು ಡಾ. ಅಪ್ಪಗೆರೆ ಸೋಮಶೇಖರ, ಡಾ. ವಿಕ್ರಮ ವಿಸಾಜಿ, ಡಾ. ಶಿವಗಂಗಾ ರುಮ್ಮಾ, ಡಾ. ಶ್ರೀನಿವಾಸ ಮನಗನಳ್ಳಿ, ಎಚ್.ಎಸ್. ಬಸವಪ್ರಭು, ಡಾ. ಅಜೀಮ್ ಪಾಷಾ, ಡಾ. ಸಂಗನಗೌಡ, ಡಾ. ಕೆ. ಎಂ. ಕುಮಾರಸ್ವಾಮಿ, ಲಕ್ಷ್ಮೀಕಾಂತ ಪಾಟೀಲ, ಕಿರಣ ಪಾಟೀಲ, ಬಾಬುರಾವ ಎಚ್., ಸಂಗಯ್ಯ ಹಳ್ಳದಮಠ, ಶರಣು, ರೋಹಿತ ಹೂಗಾರ, ಅತೀಫ್ ಪಟೇಲ್, ಭೀಮಶೆಟ್ಟಿ ರುದ್ರಾಕ್ಷಿ, ಆರ್. ಸುತ್ರಾವೆ, ಮಲ್ಲಿಕಾರ್ಜುನ, ಎಸ್, ಡಾ. ರೇಣುಕಾ ಮೇಲ್ಕುಂದಿ, ಡಾ. ಅರುಣ ಜೋಳದಕೂಡ್ಲಗಿ ಉಪಸ್ಥಿತರಿವರು ಎಂದು ಜನರಂಗ ಅಧ್ಯಕ್ಷ ಶಂಕ್ರಯ್ಯ ಆರ್. ಘಂಟಿ ಪ್ರಮಟಣೆಯಲ್ಲಿ ತಿಳಿಸಿದ್ದಾರೆ.

# ಅಕ್ರಮ ಮರಳುಗಾರಿಕೆ ತಡೆಗೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಸೇಡಂ,

ತಾಲ್ಲೂಕಿನ ಬಿಜನಳ್ಳಿ ಮತ್ತು ತೊಟ್ನಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಜೇಸಿಬಿ ಹಾಗೂ ಟಿಪ್ಪರ ಮೂಲಕ ಯಾವುದೇ ಸರಕಾರಿ ಅಧಿಕಾರಿಗಳ ಭಯವಿಲ್ಲದೆ ರಾಜಾ ರೋಷವಾಗಿ ಮರಳು ಸಾಗಾಣಿಕೆ ಬರದಿಂದ ಸಾಗುತ್ತಿದೆ. ಎಂದು ಜಯ ಕರ್ನಾಟಕ ಜನಪರ ವೇದಿಕೆ ತಾಲ್ಲೂಕು ಅಧ್ಯಕ್ಷ ರವಿ ನಾಯಕ ತಹಸೀಲ್ದಾರರು ಸೇಡಂ ರವರಿಗೆ ಮನವಿ ಪತ್ರ ನೀಡಿದರು ಕಾಗಿಣಾ ನದಿತೀರದ ಮುಕಾಂತರ ಹಲವಾರು ದಿನಗಳಿಂದ ಅಕ್ರಮವಾಗಿ ಸರ್ಕಾರದ ಪರವಾನಗಿ ಇಲ್ಲದೆ ರಾಜಾರೋಷವಾಗಿ ಮರಳು ಸಾಗಾಣಿಕೆ ಮಾಡಲಾಗುತ್ತಿದೆ.

ಅದೆ ರೀತಿ ಬಿಜನಳ್ಳಿ ಹಾಗೂ ತೊಟ್ನಳ್ಳಿ ಗ್ರಾಮದ ಸಂಪರ್ಕಕ್ಕಾಗಿ ಅಡ್ಡಲಾಗಿ ನೂತನ ಸೇತುವೆ ನಿರ್ಮಾಣ ಕೆಲಸಕ್ಕೆ ಈ ನದಿ ಮುಕಾಂತರ ಅಕ್ರಮವಾಗಿ ಸೇತುವೆ ಕಾಮಗಾರಿಗೆ ರಾಜಾರೋಷವಾಗಿ ಮರಳು ಸಾಗಾಣಿಕೆ ಮಾಡಲಾಗುತ್ತಿತೆ. ಆದರಿಂದ ಆದಷ್ಟು ಬೇಗನೆ ಮರಳಿನ ಕಳ್ಳಸಾಗಾಣಿಕೆ ನಿಲ್ಲಿಸಲು ಸಂಬಂಧ ಪಟ್ಟ ಅದಿಕಾರಿಗಳು ಇತ್ತಕಡೆ ಗಮನ ಹರಿಸಬೇಕೆಂದು ಜಯ ಕರ್ನಾಟಕ ಜನಪರ ವೇದಿಕೆ ಪದಾದಿಕಾರಿಗಳು ಆಗ್ರಹಿಸಿದರು.

# ಕಲಿಕಾ ಹಬ್ಬ : ಗ್ರಾಮೀಣ ಮಕ್ಕಳಿಗೆ ಹೊಸ ಅವಕಾಶ



• ಮಲ್ಲಮ್ಮ ನುಡಿ ವಾರ್ತೆ ಕುಕನೂರು:

ತಾಲೂಕಿನ ಆಡೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ತಾಲ್ಲೂಕು ಗ್ರಾಮೀಣ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬವನ್ನು ಆಯೋಜಿಸಲಾಯಿತು.

ಮಕ್ಕಳ ಕಲಿಕಾ ಆಸಕ್ತಿ ಹಾಗೂ ಸೃಜನಶೀಲತೆಯನ್ನು ಉತ್ತೇಜಿಸುವ ಉದ್ದೇಶದಿಂದ ನಡೆದ ಈ ಹಬ್ಬವನ್ನು ‘ಕಲಿಕಾ ಚಿಟ್ಟೆ’ ಅನಾವರಣಗೊಳಿಸುವ ಮೂಲಕ ಉದ್ಘಾಟಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಪ್ರೌಢಶಾಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ಮಹೇಶ್ ಸಬರದ ಮಾತನಾಡಿ, ಮಕ್ಕಳ ಕಲಿಕಾ ಸಾಮರ್ಥ್ಯ ವೃದ್ಧಿಗೆ ಶಿಕ್ಷಕರ ಜೊತೆಗೆ ಪೋಷಕರ ಸಹಕಾರವೂ ಅಗತ್ಯ ಎಂದು ಹೇಳಿದರು. ಶಿಕ್ಷಣವು ಕೇವಲ ಪಠ್ಯಕ್ಕೆ ಸೀಮಿತವಾಗದೆ ಜೀವನಕ್ಕೆ ದಾರಿ ತೋರಿಸಬೇಕು ಎಂದರು.

ಪ್ರಾಥಮಿಕ ಶಾಲಾ ನೌಕರರ ಸಂಘದ ಅಧ್ಯಕ್ಷ ಮಾರುತಿ ತಳವಾರ್ ಮಾತನಾಡಿ, ಮಕ್ಕಳು ಮೊಬೈಲ್ ಗೀಳಿನಿಂದ ಹೊರಬಂದು ಅದನ್ನು ಶಿಕ್ಷಣಕ್ಕಾಗಿ ಮಾತ್ರ ಬಳಸಬೇಕು ಎಂದು ಸಲಹೆ ನೀಡಿದರು. ‘ಪ್ರಶ್ನೆಯು ಪ್ರಜ್ಞೆಯಾಗಲಿ’ ಎಂಬ ಧ್ಯೇಯದೊಂದಿಗೆ ಕಲಿಕೆಯಲ್ಲಿ ತೊಡಗಿಸಿಕೊಂಡಾಗಲೇ ಜ್ಞಾನ ಸಂಪಾದನೆ ಸಾಧ್ಯ ಎಂದು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷ ವೀರಣ್ಣ ಚೌಡಿ ಮಾತನಾಡಿ, ಕಲಿಕಾ ಹಬ್ಬವು ಮಕ್ಕಳಿಗೆ ತಮ್ಮ ಸಂಸ್ಕೃತಿಯ ಪರಿಚಯ ನೀಡುವ ಜೊತೆಗೆ ಚಿತ್ರಕಲೆ, ಮಣ್ಣಿನ ಮಾದರಿ ತಯಾರಿಕೆ, ಕಾಗದದ ಕೆಲಸ, ನಾಟಕಗಳ ಮೂಲಕ ಮಕ್ಕಳ ಸೃಜನಶೀಲಶಕ್ತಿಯನ್ನು ಉತ್ತೇಜಿಸುತ್ತದೆ ಎಂದು ಹೇಳಿದರು. ಇಂತಹ ಚಟುವಟಿಕೆಗಳು ಮಕ್ಕಳ ಆತ್ಮವಿಶ್ವಾಸ ಹೆಚ್ಚಿಸುತ್ತವೆ ಎಂದರು.

ಕಾರ್ಯಕ್ರಮದಲ್ಲಿ ಸಿಆರ್‌ಪಿ ಪೀರ್‌ಸಾಬ್ ದಫೇದಾರ್ ಶಾಲೆಯ ಮುಖ್ಯ ಉಪಾಧ್ಯಾಯರಾದ ಸಂಗಪ್ಪ ಕಿಂದ್ರಿ, ಚಂದಾ ಹುಸೇನ್ ಸಾಬ್ ಮಕಪ್ಪನವರ್, ಸುರೇಶ್ ಹೊಸಮನಿ, ಪ್ರಭುರಾಜ್ ಮುತ್ತಾಳ, ಮೌನೇಶ್ ಪತ್ತಾರ್,

ವೀರೇಶ್ ಚನ್ನಪ್ಪನಹಳ್ಳಿ, ಈರಪ್ಪ ಮಕ್ಕಳಿ, ರಮೇಶ ನಾಗೋಜಿ, ನಾಗರಾಜ ರತ್ನಮ್ಮ ಆಡೂರ, ಚಲವಾದಿ, ಶರಣಪ್ಪ ತೊಂಡಿಹಾಳ, ವೀರೇಶ ಬಟಪ್ನಳ್ಳಿ, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಿದ್ದನಗೌಡ ರಬ್ಬನಗೌಡ, ಗ್ರಾಮ ಪಂಚಾಯತಿ ಉಪಾಧ್ಯಕ್ಷ ಕೋಟೇಶ್ ಗೊಂದಿ ಸೇರಿದಂತೆ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಗ್ರಾಮಸ್ಥರು, ಯುವಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಯುವ ಸಮಾವೇಶ:ಉದ್ಯೋಗ ಹುಡುಕಬೇಡಿ– ಸೃಷ್ಟಿಸಿ



• ಮಲ್ಲಮ್ಮ ನುಡಿ ವಾರ್ತೆ, ಪೀಣ್ಯ ದಾಸರಹಳ್ಳಿ:’

ಕೃಷಿ, ಸಣ್ಣ ಕೈಗಾರಿಕೆ, ಸಣ್ಣ ವ್ಯಾಪಾರ ಮತ್ತು ಸ್ವಯಂ ಉದ್ಯೋಗಗಳಿಂದ ಶೇಕಡ 96 ರಷ್ಟು ಉದ್ಯೋಗ ಸೃಷ್ಟಿಯಾಗುತ್ತಿದೆ’ ಎಂದು ಸ್ವದೇಶಿ ಜಾಗರಣ ಮಂಚ್ ಕ್ಷೇತ್ರ ಸಂಘಟನಾ ಕಾರ್ಯದರ್ಶಿ ಜಗದೀಶ್ ಮಾಹಿತಿ ನೀಡಿದರು. ಬಾಗಲಗುಂಟೆಯ ಎಂಇಐ ಆಟದ ಮೈದಾನದಲ್ಲಿ ಸದೇಶಿ ಜಾಗರಣ ಮಂಚ್– ಕರ್ನಾಟಕ ವತಿಯಿಂದ ಆಯೋಜಿಸಲಾದ ಸ್ವದೇಶಿ 2ನೇ ದಿನದ ಮೇಳದಲ್ಲಿ 'ನಿರುದ್ಯೋಗ ಸಮಸ್ಯೆ ಮತ್ತು ಪರಿಹಾರ ಮಾರ್ಗಗಳು’ ಎಂಬ ವಿಷಯ ಕುರಿತು ಯುವ ಸಮಾವೇಶದಲ್ಲಿ ಮಾತನಾಡಿದರು.

ಉದ್ಯೋಗ ಹುಡುಕಬೇಡಿ– ಸೃಷ್ಟಿಸಿ ಎಂಬುದು ನಮ್ಮ ಸಿದ್ಧಾಂತವಾಗಿದೆ. ದೇಶದ ಉತ್ಪಾದಕರಿಗೆ ಸೂಕ್ತ ತಂತ್ರಜ್ಞಾನದ ಸಂಶೋಧನೆ, ಉತ್ಪನ್ನಗಳಿಗೆ ದೇಶಿಯ ಮಾರುಕಟ್ಟೆ, ರಫ್ತು ಮಾಡುವ ವ್ಯವಸ್ಥೆ ಆಗಬೇಕು. ಯುವ ಜನತೆಯಲ್ಲಿ ಉದ್ಯಮಶೀಲತೆಯ ಮಾನಸಿಕತೆಯನ್ನು ಬೆಳೆಸುವಂತಹ ಶಿಕ್ಷಣ, ಕಾಲೇಜುಗಳಲ್ಲಿ ಉದ್ಯೋಗ ಸೃಷ್ಟಿಸುವ ಕೌಶಲ್ಯ ತರಬೇತಿ ಸಿಗಬೇಕು’ ಎಂದರು.

ಶಾಸಕ ಎಸ್. ಮುನಿರಾಜು ಮಾತನಾಡಿ,’ ಹೆಚ್ಚು ಹೆಚ್ಚು ಸ್ವದೇಶಿ ವಸ್ತುಗಳನ್ನು ಬಳಸುವ ಮೂಲಕ ಇಲ್ಲಿನ ಉದ್ಯೋಗದ ಸಮಸ್ಯೆಯನ್ನು ನಿವಾರಿಸಬಹುದು. ಗಡಿಯಾರ, ತಂಪು ಪಾನೀಯ, ಲೇಖನಿ ಸಾಮಗ್ರಿ, ಪಾದರಕ್ಷೆ, ಅಡಿಗೆ ಎಣ್ಣೆ, ಮಸಾಲೆ ಪುಡಿ, ಹಾಲಿನ ಪುಡಿ, ಉಪ್ಪು, ಸಾಬೂನುಗಳು, ಪೌಡರ್, ತುಪ್ಪ, ಸಿದ್ಧ ಉಡುಪುಗಳು ಮುಂತಾದ ದೇಶಿ ಉತ್ಪನ್ನಗಳ ಬೇಡಿಕೆಯನ್ನು ಹೆಚ್ಚಿಸಬೇಕು’ ಎಂದು ತಿಳಿಸಿದರು. ಮೇಳದ ಸಂಘಟಕ ಸೌಂದರ್ಯ ಭರತ್ ಮಾತನಾಡಿ,’ ಸಾವಿರಾರು ಜನ ಮೇಳ ವೀಕ್ಷಿಸಲು ಮತ್ತು ಮಾಹಿತಿ ಪಡೆಯಲು ತುಂಬಾ ಉತ್ಸುಕತೆಯಿಂದ ಬರುತ್ತಿದ್ದು ಸ್ವದೇಶಿ ವಸ್ತುಗಳ ಬಗ್ಗೆ ಮಾಹಿತಿ ಪಡೆಯುತ್ತಿದ್ದಾರೆ ’ಎಂದರು.

ಇದೇ ಸಂದರ್ಭದಲ್ಲಿ ಮಂಜುಳಾ ಭೀಮರಾವ್ ಅವರಿಂದ ಸೌಂದರ್ಯ ವರ್ಧಕ ವಸ್ತುಗಳ ತಯಾರಿಕಾ ಶಿಬಿರ ಮತ್ತು ಕುದ್ರೋಳಿ ಗಣೇಶ ಅವರಿಂದ 'ಮಸ್ತ್ ಮ್ಯಾಜಿಕ್ ಶೋ’ ಅವರಿಂದ ನಡೆಯಿತು. ಉದ್ಯಮಿ ರವಿ ಕುಲಾಲ್, ಸೌಂದರ್ಯ ಅಂಬಿಕ ಕಾಲೇಜಿನ ಪ್ರಾಶುಂಪಾಲೆ ಮೇಘನ, ಎಂ.ಎಸ್. ಪಿಯು ಕಾಲೇಜಿನ ಪ್ರಾಶುಂಪಾಲ ಮಲ್ಲಿಕಾರ್ಜುನ್, ಮೇಳದ ಸಂಯೋಜಕ ರವೀಂದ್ರ ಪೈ, ಸಂಘಟಕ ಭರತ್ ಸೌಂದರ್ಯ , ಸಹ ಸಂಘಟಕ ಲಕ್ಷ್ಮಿ ವೆಂಕಟೇಶ್ ಮುಂತಾದವರಿದ್ದರು.

# ಮಾಧ್ಯಮ ಅಕಾಡೆಮಿ ಪ್ರಶಸ್ತಿ

• ಮಲ್ಲಮ್ಮ ನುಡಿವಾರ್ತೆ,ಬೆಂಗಳೂರು:

ಕರ್ನಾಟಕ ಮಾಧ್ಯಮ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಹಾಗೂ ದತ್ತಿ ಪ್ರಶಸ್ತಿಗಳನ್ನು ಘೋಷಿಲಾಗಿದೆ. 2025ನೇ ಸಾಲಿನ ವಿಶೇಷ ಪ್ರಶಸ್ತಿಯನ್ನು ಈ ಬಾರಿ ಹಿರಿಯ ಪತ್ರಕರ್ತೆ ಸರಿತಾ ರೈ ಅವರಿಗೆ ನೀಡಲಾಗುತ್ತಿದ್ದು, ಲಕ್ಷ ರೂ. ನಗದು ಹಾಗೂ ಪ್ರಶಸ್ತಿ ಫಲಕವನ್ನೊಳಗೊಂಡಿದೆ. ಉಳಿದಂತೆ ಡಿ.ಕುಮಾರಸ್ವಾಮಿ, ಬನಶಂಕರಿ ಆರಾಧ್ಯ, ಹೇಮಾ ವೆಂಕಟ್, ವೈ.ಎಲ್.ಮಂಜುನಾಥ್, ಅನಂತ್ ನಾಡಿಗ್ ಸೇರಿದಂತೆ 30 ಮಂದಿ ಹಿರಿಯ ಪತ್ರಕರ್ತರಿಗೆ 2025ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಅಭಿಮಾನಿ ದತ್ತಿ ಪ್ರಶಸ್ತಿಗೆ ವಿಜಯವಾಣಿ ಪತ್ರಿಕೆಯ ಹುಣಸೂರು ವರದಿಗಾರ ಶಿವು ಅವರಿಗೆ ಲಭಿಸಿದ್ದು, ಅರಗಿಣಿ ದತ್ತಿ ಪ್ರಶಸ್ತಿ ಸಿನಿಮಾ ಪತ್ರಕರ್ತ ಚೇತನ್ ನಾಡಿಗೇರ ಅವರಿಗೆ ನೀಡಲಾಗುತ್ತಿದೆ. ಉಳಿದಂತೆ ಮೈಸೂರು ದಿ. ದತ್ತಿ ಪ್ರಶಸ್ತಿಗೆ ಸಂತೋಷ್ ಇ.ಚಿನಗೂಡಿ, ಅಭಿಮನ್ಯು ದತ್ತಿ ಪ್ರಶಸ್ತಿಗೆ ಸಿಂಧನೂರಿನ ಚಂದ್ರಶೇಖರ್ ಬೆನ್ನೂರು, ಪ್ರಜಾ ಸಂದೇಶ ದತ್ತಿ ಪ್ರಶಸ್ತಿ, ಟಿವಿ5 ಕೊಪ್ಪಳ ಜಿಲ್ಲಾ ವರದಿಗಾರ ನಾಗರಾಜು ವೈ. ಅವರು ಆಯ್ಕೆಯಾಗಿದ್ದಾರೆ .ಡಾ.ಬಿ.ಆರ್.ಅಂಬೇಡ್ಕರ್ ಮೂಕನಾಯಕ ಪ್ರಶಸ್ತಿಗೆ ಡಾ.ಎ.ನಾರಾಯಣ, ಬಸವರಾಜ ದೊಡ್ಡಮನಿ, ಕೃಷಿ ಪತ್ರಿಕೋದ್ಯಮ ಪ್ರಶಸ್ತಿಗೆ ಸಿದ್ದೇಶ್ ತ್ಯಾಗಟೂರು, ಸಿ.ವಿ.ರಾಜಗೋಪಾಲ್ ದತ್ತಿ ಪ್ರಶಸ್ತಿಗೆ ಪ್ರಹ್ಲಾದ್ ಕುಳಲಿ ಮತ್ತು ಕೆಯುಡಬ್ಲ್ಯೂಜೆ ದತ್ತಿ ಪ್ರಶಸ್ತಿಗೆ ಕೆ.ಆನಂದ್ ಶೆಟ್ಟಿ ಆಯ್ಕೆಯಾಗಿದ್ದಾರೆ ಎಂದು ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಆಯಿಷಾಖಾನಂ, ಕಾರ್ಯದರ್ಶಿ ಸಹನಾ ತಿಳಿಸಿದ್ದಾರೆ.

# ಶ್ರೀ ನಿಜಶರಣ ಅಂಬಿಗರ ಚೌಡಯ್ಯ ರವರ ಜಯಂತಿ। ವಿಜೃಂಭಣೆಯಿಂದ ಆಚರಿಸಲು ನಿರ್ಧಾರ



• ಮಲ್ಲಮ್ಮ ನುಡಿ ವಾರ್ತೆ ,ಕಲಬುರಗಿ:

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ನಿಜಶರಣ ಅಂಬಿಗರ ಚೌಡಯ್ಯ ರವರ ಜಯಂತಿಯನ್ನು ಇದೇ ಜನೆವರಿ 21 ರಂದು ವಿಜೃಂಭಣೆಯಿಂದ ಆಚರಿಸಲು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಯವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ನಿರ್ಧರಿಸಲಾಯಿತು. ಶುಕ್ರವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿ, ಇದೇ ಜನೆವರಿ 21 ರಂದು ನಗರದ ಡಾ. ಎಸ್.ಎಂ ಪಂಡಿತ ರಂಗಮಂದಿರದಲ್ಲಿ ಮಧ್ಯಾಹ್ನ 2 ಗಂಟೆಗೆ ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮ ಜರುಗಲಿದ್ದು, ಈ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸೂಚಿಸಿದರು. ಅಂದು ಬೆಳಿಗ್ಗೆ 9 ಗಂಟೆಗೆ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸರ್ಕಾರಿ ಕಚೇರಿಗಳಲ್ಲಿ, ಶಾಲಾ–ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು. ಸಭೆಯಲ್ಲಿ ನುರಿತ ಉಪನ್ಯಾಸಕರನ್ನು ಸಹ ಆಹ್ವಾನಿಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜೊತೆಗೆ ಸ್ವಚ್ಚತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ಇದೇಸಂದರ್ಭದಲ್ಲಿ ವಿಧಾನ ಪರಿಷತ್ ಶಾಸಕರಾದ ತಿಪ್ಪಣಪ್ಪ ಕಮಕನೂರ ಮಾತನಾಡಿ, ಎಲ್ಲ ಸಮಾಜದ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು. ತಾಲೂಕಗಳಲ್ಲಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಶಾಲಾ–ಕಾಲೇಜುಗಳಲ್ಲಿ ಕಡ್ಡಾಯವಾಗಿ ಅಂಬಿಗರ ಚೌಡಯ್ಯನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರ ವಚನಗಳನ್ನು ಬೋಧನೆ ಮಾಡಿಸಬೇಕು ಎಂದರು.

ಮೆರವಣಿಗೆಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳು ಸೂಕ್ತಕ್ರಮಕೈಗೊಳ್ಳಬೇಕು ಕಾರ್ಯಕ್ರಮದಲ್ಲಿ ಗಣ್ಯವ್ಯಕ್ತಿಗಳು ಅಧಿಕಾರಿಗಳು ಭಾಗವಹಿಸಬೇಕೆಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಸಮಾಜದ ಮುಖಂಡರು ಅಂಬಿಗರ ಚೌಡಯ್ಯ ಸಮಿತಿ ಅಧ್ಯಕ್ಷರನಾಗಿ ಜಯಪ್ರಕಾಶ ತಿಪ್ಪಣಪ್ಪ ಕಮನೂರ ಅವರಿಗೆ ಆಯ್ಕೆ ಮಾಡಿದರು. ಸಭೆಯಲ್ಲಿ ಕಲಬುರಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ಜಗದೀಶ್ವರಿ ನಾಶಿ ಪ್ರೋಟೋಕಾಲ್ ಪ್ರಕಾರ ಕಾರ್ಯಕ್ರಮ ಪತ್ರಿಕಾ ಆಮಂತ್ರಣ ಮುದ್ರಿಸಲಾಗುವುದು. ನಾಡಗೀತೆ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದರು.

ಸಮಾಜದ ಮುಖಂಡರು ತಮ್ಮ ಸಲಹೆ ಸೂಚನೆಗಳನ್ನು ನೀಡಿದರು. ವೇದಿಕೆ ಮೇಲೆ ಜಿಲ್ಲಾಮಟ್ಟ ಅಧಿಕಾರಿಗಳು ಸೇರಿದಂತೆ ಸಮಾಜದ ಮುಖಂಡರು, ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಶ್ರೀ ಭೀಮಾಂಬಿಕಾದೇವಿಯ ಜಾತ್ರಾ ಮಹೋತ್ಸವಕ್ಕೆ ಚಾಲನೆ

ಯಲಬುರ್ಗಾ : ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಸುಕ್ಷೇತ್ರ ದಮ್ಮೂರ ಗ್ರಾಮದ ಶ್ರೀ ಭೀಮಾಂಬಿಕಾದೇವಿ ದೇವಸ್ಥಾನದಲ್ಲಿ 37ನೇಯ ಪುರಾಣ ಮಹಾಮಂಗಲೋತ್ಸವ, ಸಾಮೂಹಿಕ ವಿವಾಹ ,ಧರ್ಮಸಭೆ ಹಾಗು ಲಿಂ.ಪೂಜ್ಯ ಗುರುಬಸಪ್ಪಜ್ಜನವರು ಮತ್ತು ಲಿಂ.ಮಾತೋಶ್ರೀ ರೇಣಮ್ಮನವರ 19ನೇ ವರ್ಣದ ಪುಣ್ಣಸ್ಮರೋಣೋತ್ಸವ ಹಾಗು 382 ನೇ ಶಿವಾನುಭವ ಗೋಷ್ಠಿ ಮತ್ತು ಮಹಾರಥೋತ್ಸವದ ಅಂಗವಾಗಿ ಜ.8 ರಂದ ರಾತ್ರಿ 8.30 ಕ್ಕೆ ಶ್ರೀ ಭೀಮಾಂಬಿಕಾ ದೇವಿಯ ಪುರಾಣ ಕಾರ್ಯಕ್ರಮಕ್ಕೆ



ಗುರು ಹಿರಿಯರಿಂದ ಚಾಲನೆ ನಿಡಲಾಗಿತು. ಬಳೋಟಗಿಯ ಪ್ರವಚನಕಾರ ವೇ.ಮೂ.ಸಿದ್ದೇಶ್ವರ ಶಾಸ್ತ್ರೀ ಅವರು ಮಾತನಾಡಿ ಶ್ರೀ ಭೀಮಾಂಬಿಕಾದೇವಿಯ ಪುರಾಣವನ್ನು ಆಲಿಸುವುದರಿಂದ ನಮ್ಮ ಮನಸ್ಸಿಗೆ ನೇಮ್ಮದಿ ಮತ್ತು ಚಿಂತೆಯಿಂದ ಇರಲು ಸಾಧ್ಯ ಎಂದರು. ಶ್ರೀಮಠದ ಓಡೆಯರಾದ ನಾಗಪ್ಪಜ್ಜ ಧರ್ಮರ, ಹನುಮಂತಪ್ಪಜ್ಜ ಧರ್ಮರ ಮತ್ತು ಶರಣಯ್ಯ ಹಿರೇಮಠ ಸಾನಿದ್ಯವಹಿಸಿದ್ದರು. ಪ್ರಾಸ್ತಾವಿಕವಾಗಿ ಅಂದಪ್ಪ ಮಂಡಲಗೇರಿ, ರಸೂಲಸಾಬ ಹಿರೇಮನಿ, ಗುರುಮೂರ್ತಿ ಬಡಿಗೇರ ,ನಿ.ಶಿಕ್ಷಕ ಶರಣೆಗೌಡ ಎಸ್ ಗೌಡರ ಮಾತನಾಡಿದರು. ಈ ವೇಳೆ ಶ್ರೀ ಭೀಮಾಂಬಿಕಾದೇವಿಯ ಶಿವಾನುಭವ ಸೇವಾ ಸಮಿತಿ ಅಧ್ಯಕ್ಷ ಶರಣಬಸಪ್ಪ ದಾನಕೈ, ಮುಖಂಡರಾದ ಡಿ.ಮೌನೇಶ ಬಡಿಗೇರ, ವೀರಪ್ಪ ರಾವಣಕಿ, ಶರಣಪ್ಪ ಹಾಲಕೇರಿ, ನಾಗಪ್ಪ ಮೇಟಿ, ಬಸವರಾಜ ತೋಂಡಿಹಾಳ, ಶರಣಪ್ಪ ಶೊಂಠಿ, ಅಂದಪ್ಪ ಕಿನ್ನಾಳ, ಭಾಷುಸಾಬ ವಾಲಿಕಾರ , ಭೀಮಣ್ಣ ಜರಕುಂಟಿ, ದೇವಪ್ಪ ಹಳ್ಳಿಕೇರಿ, ಅಂಬರೇಶ ಚಿಕ್ಕಗೌಡ್ರ ಸೇರಿದಂತೆ ಇತರರು ಇದ್ದರು. ಲಿಂಗನಬಂಡಿಯ ಹನುಮಂತಪ್ಪ ಆಂದ್ರಪ್ರದೇಶದ ಮೌನೇಶ ಕುಮಾರ ಸಂಗೀತ ಸೇವೆ ನೀಡಿದರು. ಪ್ರಕಾಶ ರಾವಣಕಿ ವಂದಿಸಿದರು. ನಂತರ ಮಹಾಪ್ರಸಾದ ಜರುಗಿತು. ಜ.17 ರಂದು 382 ನೇ ಶಿವಾನುಭವ ಗೋಷ್ಠಿ, ಜ.20 ರಂದು ಮುತ್ತೈದಿಯರಿಗೆ ಉಡಿತುಂಬುವ ಕಾರ್ಯಕ್ರಮ, ಜ.21 ರಂದು ಗುಡ್ಡಕ್ಕೆ ಆರತಿ ಬೆಳಗುವದು, ಜ.22 ರಂದು ಶ್ರೀ ಚಂದ್ರಾಬಿಕಾದೇವಿಗೆ ಅಭೀಷೇಕ, ಜ.23 ರಂದು ಶ್ರೀ ಭೀಮಾಂಬಿಕಾದೇವಿಯ ರಥೋತ್ಸವ ಜರುಗುವದು, ಜ.23 ರಂದು ರಾತ್ರಿ 10 ಗಂಟೆಗೆ ಡಾ.ಪ್ರಕಾಶ ರಾವಣಕಿ ವಿರಚಿತ ಪ್ರಥಮ ಕಾಣಿಕೆ " ಸಿಹಿ ಮುತ್ತಿನ ಕಾಣಿಕರ" ಎಂಬ ನಾಟಕ ಪ್ರದರ್ಶನವಾಗುವದು ಈ ಜಾತ್ರೋತ್ಸವದಲ್ಲಿ ಬೂನಕೊಪ್ಪ ಗ್ರಾಮದವರಿಂದ ಕಳಸದ ಸೇವೆ, ಜಿ.ಜರಕುಂಟಿ ಭಕ್ತರಿಂದ ಹಗ್ಗದ ಸೇವೆ, ಜಿ.ವೀರಾಪೂರ ಗ್ರಾಮದವರಿಂದ ಜಾನಗೋರಡದ ಸೇವೆ, ದಮ್ಮೂರದ ಮರಿಯಪ್ಪ ರಾ.ಲಕ್ಕಲಕಟ್ಟಿ ಕುಟುಂಬದವರಿಂದ ಮಹಾ ರಥೋತ್ಸವಕ್ಕೆ ಹೂವಿನ ಹಾರದ ಸೇವೆ ಹಾಗು ತಾಲೂಕಿನ ಸುತ್ತಮುತ್ತಲಿನ ಭಕ್ತರಿಂದ ಸಹಾಯ ಸಹಕಾರದೊಂದಿಗೆ ಜರುಗುವದು ಎಂದು ಶ್ರೀ ಭೀಮಾಂಬಿಕಾದೇವಿ ಜಾತ್ರಾ ಮಹೋತ್ಸವ ಹಾಗು ಶಿವಾನುಭವ ಸಮಿತಿ ಯವರು ಯಶಸ್ವಿಗೊಳಿಸಲು ವಿನಂತಿಸಿದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, inSy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, GadaComplex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927 (RNINO:KARKAN/2011/48371)

# ಹಿಂಸಾಚಾರದ ವರದಿಯನ್ನು ಡಿಸಿಎಂ ಡಿ.ಕೆ ಶಿವಕುಮಾರ ರವರಿಗೆ ತಲುಪಿಸಿದ : ನಿಯೋಗ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಬಳ್ಳಾರಿ ಬ್ಯಾನರ್ ಘರ್ಷಣೆ ಮತ್ತು ಕಾಂಗ್ರೆಸ್ ಕಾರ್ಯಕರ್ತನ ಸಾವಿನ ಕುರಿತು ಮಾಜಿ ಸಚಿವ ಎಚ್.ಎಂ. ರೇವಣ್ಣ ನೇತೃತ್ವದ ಸತ್ಯಶೋಧನಾ ಸಮಿತಿಯು ಗುರುವಾರ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಉಪಮುಖ್ಯಮಂತ್ರಿ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ವರದಿ ಸಲ್ಲಿಸಿತು. ನಿಯೋಗದಲ್ಲಿ ರಾಯಚೂರು ಯಾದಗಿರಿ ಲೋಕಸಭಾ ಕ್ಷೇತ್ರದ ಸಂಸದ ಜಿ. ಕುಮಾರ ನಾಯಕ, ಚಳ್ಳಕೆರೆ ಶಾಸಕ ರಘುಮೂರ್ತಿ, ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ ಮತ್ತು ವಿಧಾನ ಪರಿಷತ್ ಸದಸ್ಯರಾದ ಜಕ್ಕಪ್ಪನವರ್ ಮತ್ತು ಬಸವನಗೌಡ ಬಾದರ್ಲಿ ಸೇರಿದಂತೆ ನಿಯೋಗವು ಬಳ್ಳಾರಿಯ ಘರ್ಷಣೆಯ ಹಾಗೂ ಕಾಂಗ್ರೆಸ್ ಕಾರ್ಯಕರ್ತನ ಸಾವಿನ ಕುರಿತು ಸುದೀರ್ಘವಾದ ವರದಿಯನ್ನು ಎಚ್‌ಎಂ ರೇವಣ್ಣ ಮತ್ತು ಇತರ ಸಮಿತಿ ಸದಸ್ಯರು ಬಳ್ಳಾರಿಗೆ ತೆರಳಿ ಸ್ಥಳೀಯ ಮುಖಂಡರು ಮತ್ತು ಪಕ್ಷದ ಕಾರ್ಯಕರ್ತರನ್ನು ಭೇಟಿ ಮಾಡಿ, ಅಲ್ಲಿನ ನಿವಾಸಿಗಳೊಂದಿಗೆ ಸಂವಾದ ನಡೆಸಿ, ಘಟನೆಗಳ ಅನುಕ್ರಮ, ಆಡಳಿತಾತ್ಮಕ ಪ್ರತಿಕ್ರಿಯೆ ಮತ್ತು ಆರೋಪದ ಲೋಪಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿದರು. ಹಿಂಸಾಚಾರಕ್ಕೆ ಕಾರಣವಾದ ಸಂಗತಿಗಳು ಮತ್ತು ಕಾರ್ಯಕರ್ತನ ಸಾವಿಗೆ ಕಾರಣವಾದ ಸಂದರ್ಭಗಳನ್ನು

ಖ ಚಿ ತ್ ಪ ಡಿ ಸಿ ಕೊ ೦ ಡು ಸತ್ಯಶೋಧನಾ ವರದಿಯನ್ನು ಇಂದು ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಶ್ರೀ ಡಿಕೆ ಶಿವಕುಮಾರ್ ಅವರಿಗೆ ವರದಿಯನ್ನು ಸಲ್ಲಿಸಿದರು, ವರದಿಯನ್ನು ಸ್ವೀಕರಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿಗಳು ವರದಿ ಈಗಾಗಲೇ ನನ್ನ ಕೈ ಸೇರಿದೆ ಅದನ್ನು ಪರಿಶೀಲಿಸಿದ ನಂತರವೇ ಮಾತನಾಡುತ್ತೇನೆ ಈಗ ಅದರ ಬಗ್ಗೆ ಚರ್ಚಿಸುವುದಿಲ್ಲ ಎಂದು ಹೇಳಿದರು.

# ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ರಾಜನಹಳ್ಳಿ ಗ್ರಾಮದ ವಾಲ್ಮೀಕಿ ಗುರುಪೀಠದಲ್ಲಿ ಫೆಬ್ರವರಿ 8 ಮತ್ತು 9 ರಂದು ಜರುಗುವ 8 ನೇ ವರ್ಷದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರೆ ಅಂಗವಾಗಿ ಇಂದು ಶ್ರೀಮಠದ ಪೂರ್ವಭಾವಿ ಸಭೆಯಲ್ಲಿ ರಾಯಚೂರು ಯಾದಗಿರಿ ಲೋಕಸಭಾ ಕ್ಷೇತ್ರದ ಸಂಸದ ಜಿ.ಕುಮಾರ ನಾಯಕರವರು ಪಾಲ್ಗೊಂಡು ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಆಯೋಜನೆ ಹಾಗೂ ರೂಪರೇಷಗಳ ಅಗತ್ಯ ಸಲಹೆ ಸೂಚನೆಗಳನ್ನು ನೀಡಲಾಯಿತು, ಈ ವೇಳೆ ಶ್ರೀ ಮಠದ ಶ್ರೀಗಳು ಸಂಸದ ಜಿ ಕುಮಾರ ನಾಯಕರವರನ್ನು ಸನ್ಮಾನಿಸಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಶ್ರೀಮಠದ ಪರಮಪೂಜ್ಯ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ವಾಲ್ಮೀಕಿ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಬಸನಗೌಡ ದದ್ದಲ್ ರವರು, ಶಾಸಕರಾದ ರಘುಮೂರ್ತಿ ರವರು ಸೇರಿದಂತೆ ವಾಲ್ಮೀಕಿ ಸಮುದಾಯದ ಹಿರಿಯ ಮುಖಂಡರು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.



# ಮಹಿಳೆಯರು ಆತ್ಮಸ್ಥೈರ್ಯ ತಂದುಕೊಳ್ಳಬೇಕು

• **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**

ಮಹಿಳೆಯರು ಆತ್ಮಸ್ಥೈರ್ಯ ತಂದುಕೊಳ್ಳಬೇಕು ಎಂದು ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ಬಿರಾದಾರ್ ಹೇಳಿದರು. ಶುಕ್ರವಾರ ತಾಲೂಕ ಪಂಚಾಯತ್ ಸಭಾಂಗಣದಲ್ಲಿ ಎನ್‌ಆರ್‌ಎಲ್‌ಎಂ ಹಮ್ಮಿಕೊಂಡಿದ್ದ ಲಿಂಗತ್ವ ಆಧಾರಿತ ದೌರ್ಜನ್ಯ ವಿರುದ್ಧ ರಾಷ್ಟ್ರೀಯ ಅಭಿಯಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸ್ತುತ ಲಿಂಗತ್ವ ಸಮಾನತೆ ಎಂಬುದು ಸಂಪ್ರದಾಯ, ಮೌಢ್ಯತೆಯೊಂದಿಗೆ ಕೂಡಿಕೊಂಡಿ-ದೆ. ಮಹಿಳೆಯರು ಆತ್ಮಸ್ಥೈರ್ಯ ತಂದುಕೊಳ್ಳುವ ಮೂಲಕ ಎಲ್ಲಾ ಕೆಲಸಗಳನ್ನು ನಿಭಾಯಿಸಬಲ್ಲೆವು ಎಂದು ಸಂಕಲ್ಪ ಮಾಡಬೇಕು. ಗಂಡು ಹೆಣ್ಣು ಸಮಾನರೆಂದು 12ನೇ ಶತಮಾನದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ರವರ ಪ್ರಯತ್ನದಿಂದ ನಾವು ಇಲ್ಲಿ ನಿಲ್ಲಲು ಕಾರಣವಾಗಿದೆ. ಅಂಬೇಡ್ಕರ್ ಅವರು ನಮಗೆ ನೀಡಿರುವ ಸಂವಿಧಾನದ ಮೂಲಕ ಸ್ಥಾನ ಮಾನಗಳು ದೊರಕುತ್ತಿವೆ. ಇಂದು ನಾವು ಅಂಬೇಡ್ಕರ್ ಅವರಿಗೆ ಎಷ್ಟೇ ಕೃತಜ್ಞತೆಗಳು ಅರ್ಪಿಸಿದರು ಕಡಿಮೆ ಎಂದರು. ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಶಿಕ್ಷಣ ನೀಡಬೇಕು, ಮೊಬೈಲ್ ಇಂದ ದೂರವಿಡಬೇಕು ಎಂದು ಹೇಳಿದರು. ಅಕ್ಕ ಪಡೆ ಸಿಬ್ಬಂದಿ ಶ್ರದ್ಧಾ ಹಡಪದ ಮಾತನಾಡಿ, ಹೆಣ್ಣುಮಕ್ಕಳು ತಮ್ಮ ಮೇಲೆ ಯಾವುದೇ ರೀತಿಯ ದೌರ್ಜನ್ಯದರೆ ಕೂಡಲೇ ಅಕ್ಕ ಪಡೆಯ ಗಮನಕ್ಕೆ ತರಬೇಕು. ಅಕ್ಕ ಪಡೆ ಹೆಣ್ಣು ಮಕ್ಕಳ ರಕ್ಷಣೆಗಾಗಿಯೇ ಇದೆ. ಹೀಗಾಗಿ ಏನೇ ಸಮಸ್ಯೆ ಇದ್ದರೂ ಅಕ್ಕ ಪಡೆ ಮುಂದೆ ಹೇಳಿಕೊಳ್ಳಬೇಕು ಎಂದರು. ಸಂಕಷ್ಟದ ಸಂದರ್ಭದಲ್ಲಿ ಕರೆ ಮಾಡಲು ಸಹಾಯವಾಣಿ ಸಂಖ್ಯೆಗಳಾದ 112, 181 ಮತ್ತು 1098ಗೆ ಕರೆ ಮಾಡಬೇಕು ಎಂದು ಸಲಹೆ ಮಾಡಿದರು. ಬಾಲ್ಯ ವಿವಾಹ ಸಮಾಜಕ್ಕೆ ಮಾರಕವಾಗಿದೆ. ಶಿಕ್ಷಾರ್ಹ ಅಪರಾಧವೂ ಆಗಿದೆ. ಅದನ್ನು ತಡೆಗಟ್ಟಲು ಎಲ್ಲರೂ



ಕೈಜೋಡಿಸಬೇಕು ಎಂದು ಹೇಳಿದರು. ಅಕ್ಕಪಡೆ ಸಿಬ್ಬಂದಿ ಶೈಲಾ ಮಹಿಳಾ ಹಕ್ಕುಗಳ ಬಗ್ಗೆ ಮಾಹಿತಿ ನೀಡಿದರು. ಸಂಪನ್ಮೂಲ ವ್ಯಕ್ತಿ ರಜಿಯಾ ಬಳಬಟಿ, ಎನ್‌ಆರ್‌ಎಲ್‌ಎಂ ಉದೇಶಗಳ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಂತೋಷ ಚೀಲಾ, ವಿಜಯಕುಮಾರ ಚಾಂಗಲೇರಾ ಸೇರಿದಂತೆ ಎನ್‌ಆರ್‌ಎಲ್‌ಎಂ ಸ್ವಸಹಾಯ ಸಂಘದ ಮಹಿಳೆಯರು ಉಪಸ್ಥಿತರಿದ್ದರು. ಎನ್‌ಆರ್‌ಎಲ್‌ಎಂ ಕಾರ್ಯಕ್ರಮ ತಾಲೂಕ ವ್ಯವಸ್ಥಾಪಕ ಗಣಪತಿ ಭಾಗ್ಯನಗರ ನಿರೂಪಿಸಿ ವಂದಿಸಿದರು.

# ಜನೇವರಿ ಅಂತ್ಯಕ್ಕೆ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ.



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾ ಕೂಟ ಮತ್ತು ಸಾಂಸ್ಕೃತಿಕ ಸ್ಪದೆ9ಗಳನ್ನು ಇದೇ ದಿನಾಂಕ 30/1/2026 ಮತ್ತು 31/01/2026 ರಂದು ಏರ್ಪಡಿಸಲಾಗುವುದು ಎಂದು ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶ್ರೀ ವಿಜಯಕುಮಾರ್ ಮಡ್ಡೆ ಅವರು ಹೇಳಿದರು. ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಈ ಕ್ರೀಡಾಕೂಟ ಏರ್ಪಡಿಸುವ ಕುರಿತು ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಅವರು ಅಧ್ಯಕ್ಷತೆವಹಿಸಿ, ಈ ವಿಷಯ ತಿಳಿಸಿದರು. ಸರ್ಕಾರಿ ನೌಕರರು ಈ ಕ್ರೀಡಾಕೂಟದಲ್ಲಿ ಭಾಗವಹಿಸಲು ಕಡ್ಡಾಯವಾಗಿ ಆನ್ ಲೈನ್ ನಲ್ಲಿ 16/1/2026 ರ ಒಳಗೆ ನೊಂದಾಯಿಸಬೇಕು. ಆಫ್ ಲೈನ್ ನಲ್ಲಿ ನೊಂದಾಯಿಸಲು ಅವಕಾಶ ಇರುವುದಿಲ್ಲ ಎಂದು ತಿಳಿಸಿದರು. ಇಂಗ್ಲಿಷ್ ವರ್ಣಮಾಲೆ, ಅಕ್ಷರಗಳಲ್ಲಿ ಭರ್ತಿ ಮಾಡಬೇಕು. ಒಬ್ಬ ನೌಕರ 1 ಟ್ರ್ಯಾಕ್ ಮತ್ತು 2 ಫೀಲ್ಡ್ ಅಥವಾ 2 ಟ್ರ್ಯಾಕ್ ಮತ್ತು 1 ಫೀಲ್ಡಗಳಲ್ಲಿ ಸೇರಿ ಒಟ್ಟು ಮೂರು ಆಟಗಳಲ್ಲಿ ಮಾತ್ರ ಭಾಗವಹಿಸಬೇಕು. ಕ್ರೀಡಾಪಟುಗಳು ಕ್ರೀಡಾ ಸ್ಪರ್ಧೆಗಳು ಪ್ರಾರಂಭವಾಗುವ ನಿಗದಿತ ಸಮಯಕ್ಕೆ ಕನಿಷ್ಠ 1 ಗಂಟೆ ಮುಂಚಿತವಾಗಿ ಹಾಜರಿರಬೇಕು. ಕ್ರೀಡಾ ಂಘಟಣಾಧಿಕಾರಿಗಳಲ್ಲಿ ಸೇವಾ ಪ್ರಮಾಣ ಪತ್ರ, ಇಲಾಖಾ ಗುರುತಿನ ಚೀಟಿ ಹಾಗೂ ಆಧಾರ್ ಕಾರ್ಡ್ ಹಾಜರುಪಡಿಸಿ ವರದಿ ಮಾಡಿಕೊಳ್ಳಬೇಕು. ಜಿಲ್ಲಾ ಮಟ್ಟದಲ್ಲಿ ಗುಂಪಾಟಗಳಲ್ಲಿ ಪ್ರತಿ ತಾಲೂಕಿನಿಂದ ಒಂದು ತಂಡಕ್ಕೆ ಮಾತ್ರ ಆಟವಾಡಲು ಅವಕಾಶ. ಕೆಜಿಐಡಿ ನಂಬರ್ ಹೊಂದಿರುವ ಕನಿಷ್ಠ ಆರು ತಿಂಗಳು ಸೇವಾ ಅವಧಿ ಹೊಂದಿರುವ ಖಾಯಂ ನೌಕರರು ಮಾತ್ರ ಅರ್ಹರು. ಒಬ್ಬ ಸರ್ಕಾರಿ ನೌಕರ ಒಂದು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ, ದೈಹಿಕ ಶಿಕ್ಷಕರು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಬಹುದು, ಕ್ರೀಡಾ ಕೋಟಾದಲ್ಲಿ ಆಯ್ಕೆಯಾದ ನೌಕರರು ಭಾಗವಹಿಸುವಂತಿಲ್ಲ, ನಿರ್ಣಾಯಕ ನಿರ್ಣಯಕ್ಕೆ ಬದ್ಧವಾಗಿರಬೇಕು ಎಂದು ಸಭೆ ಮೂಲಕ ಕ್ರೀಡಾ ಪಟುಗಳಿಗೆ ತಿಳಿಸಲಾಯಿತು. ಈ ವೇಳೆಯಲ್ಲಿ ಕ.ರಾ.ಸ.ನೌ.ಸಂಘ ಜಿಲ್ಲಾ ಘಟಕ ಜಿಲ್ಲಾ ಅದ್ಯಕ್ಷ ರಾಯಪ್ಪ ಗೌಡ ಹುಡೇದ್ ಹಾಗೂ ವಿವಿಧ ತಾಲೂಕು ಘಟಕಗಳ ಅದ್ಯಕ್ಷರು, ಖಜಾಂಚಿ, ಕಾರ್ಯದರ್ಶಿಗಳು, ಜಿಲ್ಲಾ ದೈಹಿಕ ಶಿಕ್ಷಣ ಅದೀಕ್ಷಕ ಅನಿಲ್ ಕುಮಾರ್, ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ರಾಜು ಬಾವಿಹಳ್ಳಿ ಇವರು ಸಭೆಗೆ ಆಗಮಿಸಿದವರನ್ನು ಸ್ವಾಗತಿಸಿದರು.

# ಅಭಿವೃದ್ಧಿ ಕಾರ್ಯಕ್ರಮ ಮತ್ತು ಜನಸಂಪರ್ಕ ಸಭೆ

ಮಲ್ಲಮ್ಮನುಡಿ ವಾರ್ತೆಕುಕನೂರು:

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಜನಪರ ಆಡಳಿತ ನೀಡುತ್ತಿದೆ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕ ಬಸವರಾಜ ರಾಯ-ರೆಡ್ಡಿ ಶುಕ್ರವಾರ ಹೇಳಿದರು.



ತಾಲೂಕಿನ ಹರಿಶಂಕರ ಬಂಡಿ, ಚೆನ್ನಪ್ಪನಹಳ್ಳಿ, ಕೋನಾಪುರ, ಬಳಗೇರಿ, ರಾವಣಕಿ, ಬೂದುಗುಂಪ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಮತ್ತು ಜನಸಂಪರ್ಕ ಸಭೆಯ ಸಂದರ್ಭದಲ್ಲಿ ಚನ್ನಪ್ಪನಹಳ್ಳಿ ಗ್ರಾಮದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಸರ್ವ ಜನಾಂಗದ ಅಭಿವೃದ್ಧಿ ಚಿಂತನೆಯೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜನರ ಬೇಕು-ಬೇಡಗಳನ್ನು ಅರಿತು ಗ್ಯಾರಂಟಿ ಯೋಜನೆಗಳನ್ನು ರೂಪಿಸಿದ್ದಾರೆ ಎಂದು ಹೇಳಿದರು.

ರಾಜ್ಯದಲ್ಲಿ 4.34 ಕೋಟಿ ಜನರಿಗೆ ಉಚಿತ ಪಡಿತರ ನೀಡಲಾಗುತ್ತಿದ್ದು, ಗೃಹಲಕ್ಷ್ಮಿ ಯೋಜನೆಯಡಿ 1.24 ಕೋಟಿ ಮಹಿಳೆಯರಿಗೆ ಸುಮಾರು 30 ಸಾವಿರ ಕೋಟಿ ರೂ. ಆರ್ಥಿಕ ನೆರವು ಒದಗಿಸಲಾಗುತ್ತಿದೆ. 1.69 ಕೋಟಿ ಜನರಿಗೆ ಉಚಿತ ವಿದ್ಯುತ್ ಸೌಲಭ್ಯ ನೀಡಲಾಗುತ್ತಿದೆ. ಅಲ್ಲದೆ 98 ಲಕ್ಷ ಮಕ್ಕಳಿಗೆ ಶಿಕ್ಷಣ ವ್ಯವಸ್ಥೆಯಡಿ ಬಟ್ಟೆ, ಪಠ್ಯಪುಸ್ತಕ, ಬಿಸಿಯೂಟ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಸರ್ಕಾರ ನೀಡುತ್ತಿದೆ ಎಂದು ತಿಳಿಸಿದರು.

ಕೃಷಿ ಕ್ಷೇತ್ರಕ್ಕೂ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದ್ದು, 36 ಲಕ್ಷ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಒದಗಿಸಲಾಗುತ್ತಿದೆ. ಗ್ಯಾರಂಟಿ ಯೋಜನೆಗಳು ಸೇರಿದಂತೆ ವಿವಿಧ ಜನಪರ ಯೋಜನೆಗಳಿಗೆ ಪ್ರತಿ ವರ್ಷ ಸುಮಾರು 1 ಲಕ್ಷ 12 ಸಾವಿರ ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ ಎಂದು ರಾಯರೆಡ್ಡಿ ಹೇಳಿದರು.

ಕಾರ್ಯಕ್ರಮದಲ್ಲಿ ಯಂಕಣ್ಣ ಯಾರಾಶಿ,

ಹನುಮಂತಗೌಡ ಪಾಟೀಲ್ ಚಂಡೂರ, ಕೇರಿಬಸಪ್ಪ ನಿಡಗುಂದಿ, ಮಂಜುನಾಥ್ ಕಡೆಮನಿ,

ಪಂಚಗ್ಯಾರಂಟಿ ಯೋಜನೆ ತಾಲೂಕು ಘಟಕದ ಅಧ್ಯಕ್ಷ ಸಂಗಮೇಶ್ ಗುತ್ತಿ, ತಾಪಂ ಕಾರ್ಯನಿರ್ವಹಣಾಧಿಕಾರಿ ಸಂತೋಷ ಪಾಟೀಲ್ ಬಿರಾದಾರ್, ತೋಟಗಾರಿಕೆ ಇಲಾಖೆ ಅಧಿಕಾರಿ ಲಿಂಗಾರೆಡ್ಡಿ, ಜೆಸ್ಕಾ, ಪಶುಪಾಲನೆ, ಶಿಕ್ಷಣ, ಕೃಷಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ತಹಸೀಲ್ದಾರ್ ಬಸವರಾಜ್ ಬೆಣ್ಣೆ ಶಿರೂರ ಹಾಗೂ ಸ್ಥಳೀಯ ಮುಖಂಡರು ಭಾಗವಹಿಸಿದ್ದರು.

# ಜ.13 ರಂದು ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಪೂರ್ವಸಿದ್ಧತಾ ಸಭೆಗೆ ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :**

2026ರ ಜನವರಿ 21 ರಂದು ಶ್ರೀ ನಿಜಶರಣ ಅಂಬಿಗರ ಚೌಡಯ್ಯರವರ ಜಯಂತ್ಯೋತ್ಸವದ ಆಚರಣೆಯ ಹಿನ್ನೆಲೆ ಪೂರ್ವಸಿದ್ಧತಾ ಸಭೆಯನ್ನು ಅಪರ ಜಿಲ್ಲಾಧಿಕಾರಿ ಶ್ರೀ ರಮೇಶ ಕೋಲಾರ ಅವರ ಅಧ್ಯಕ್ಷತೆಯಲ್ಲಿ 2026ರ ಜನವರಿ 13ರ ಮಂಗಳವಾರ ರಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಯಾದಗಿರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ ಅವರು ತಿಳಿಸಿದ್ದಾರೆ.

ಶ್ರೀ ನಿಜಶರಣ ಅಂಬಿಗರ ಚೌಡಯ್ಯರವರ ಜಯಂತ್ಯೋತ್ಸವ ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಯಾದಗಿರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗುತ್ತಿದ್ದು, ಈ ಜಯಂತಿಯನ್ನು ಆಚರಿಸುವ ಸಲುವಾಗಿ ಸಂಬಂಧಿಸಿದ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಅಂದು ತಪ್ಪದೇ ಉಪಸ್ಥಿತರಿರುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫೆಲೋಶಿಪ್ ಅಧ್ಯಯನ ವೇತನಕ್ಕೆ ಸಂಬಂಧಿಸಿದಂತೆ ಅಧ್ಯಯನಕಾರರಿಂದ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಫೆಲೋಶಿಪ್ ಅಧ್ಯಯನ ವೇತನಕ್ಕೆ ಸಂಬಂಧಿಸಿದಂತೆ ಅಧ್ಯಯನಕಾರರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಬೆಂಗಳೂರು ಕರ್ನಾಟಕ ಜಾನಪದ ಅಕಾಡೆಮಿ ರಿಜಿಸ್ಟ್ರಾರ್ ಅವರು ತಿಳಿಸಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿಯು ಫೆಲೋಶಿಪ್ (ಅಧ್ಯಯನ ವೇತನ) ಲೇಖನಗಳಿಗೆ ಅರ್ಜಿಗಳನ್ನು ಕರೆಯಲಾಗಿದ್ದು, ಅಕಾಡೆಮಿಯ ವೆಬ್‌ಸೈಟ್‌ನಲ್ಲಿ ತಿಳಿಸಿರುವ ಶೀರ್ಷಿಕೆಗಳನ್ನು ಆಧರಿಸಿ ಕ್ಷೇತ್ರಕಾರ್ಯ ನಡೆಸಿ ಆಧ್ಯಯನ ಕೃತಿಗಳನ್ನು ಸಿದ್ಧಪಡಿಸಿಕೊಡಲು ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬೇಕು, ನಿಗದಿಪಡಿಸಿರುವ ಒಂದು ಶೀರ್ಷಿಕೆಯನ್ನು ಆಯ್ಕೆ ಮಾಡಿ 5 ಪುಟಗಳ ಸಾರಲೇಖ (ಥಿಟಂಥಿ) ಬರೆದು 2026ರ ಜನವರಿ 23ರ ಒಳಗೆ ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಎರಡನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು 560002 ಇವರಿಗೆ ಕಳುಹಿಸಿಕೊಡಲು ಕೋರಿದೆ. ಸಾರಲೇಖ (ಥಿಟಂಥಿ) ಆಯ್ಕೆಯಾದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು, ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಫೆಲೋಶಿಪ್ ಕಾರ್ಯ ನಡೆಸಲು ಆದೇಶ ನೀಡಲಾಗುವುದು. ಫೆಲೋಶಿಪ್‌ಗಾಗಿ ಸಾಮಾನ್ಯ-1, ಪರಿಶಿಷ್ಟ ಜಾತಿ-5, ಪರಿಶಿಷ್ಟ ಪಂಗಡ-9, ಮಂದಿಗಳು ಸೇರಿದಂತೆ 15 ಮಂದಿಗಾಗಿ ಅಭ್ಯರ್ಥಿಗಳಿಂದ ಫೆಲೋಶಿಪ್ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆ, ಫೆಲೋಶಿಪ್ ಶೀರ್ಷಿಕೆಗಳು ಮತ್ತು ಇತರೆ ವಿವರಗಳಿಗಾಗಿ ಅಕಾಡೆಮಿ ವೆಬ್‌ಸೈಟ್ ರಿಚಿಟಿಚಿಠಿಚಿಜಚಿ.ಇಚಿಡಿಟಿಚಿಣಚಿಇಚಿ. ರಠಿತ.ಟಿ ನಿಂದ ಮಾಹಿತಿ ಪಡೆಯಬಹುದಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿಧನ ವಾರ್ತೆ.



ಶ್ರೀಮತಿ ನಾಗಮಣಿ ಗಂಡ ಸೂಗಯ್ಯ ಸ್ವಾಮಿ ಕುಂಬಾರೊಳಮಠ ಗುರುಮಠಕಲ್: ಪಟ್ಟಣದ ವೀರಶೈವ ಲಿಂಗಾಯತ ಸಮಾಜದ ಶ್ರೀಮತಿ ನಾಗಮಣಿ ಗಂಡ ಸೂಗಯ್ಯ ಸ್ವಾಮಿ ಕುಂಬಾರೊಳಮಠ ಶುಕ್ರವಾರ ಸಾಯಂಕಾಲ 4 ಗಂಟೆಗೆ ಲಿಂಗೈಕ್ಯರಾಗಿದ್ದಾರೆ. ಇಬ್ಬ ಪುತ್ರರನ್ನು ಸೇರಿದಂತೆ ಅಪಾರ ಬಂದು ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆಯು ಇಂದು ದಿನಾಂಕ ಜನವರಿ 10 ಶನಿವಾರದಂದು ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಮಧ್ಯಾಹ್ನ 1 ಗಂಟೆಗೆ ಜರುಗುವದು ಎಂದು ಕುಟುಂಬ ಮೂಲದಿಂದ ತಿಳಿಸಲಾಗಿದೆ.

### ಬಿಕೆಐಟಿಯಲ್ಲಿ ಕ್ಯಾಂಪಸ್ ಪ್ಲೇಸ್‌ಮೆಂಟ್ ಡ್ರೈವ್

# ಕ್ಯಾಂಪಸ್ ಸಂದರ್ಶನದಲ್ಲಿ 10 ವಿದ್ಯಾರ್ಥಿಗಳು ಆಯ್ಕೆ




• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ:**

ಬಿಕೆಐಟಿ ಮಹಾವಿದ್ಯಾಲಯದಲ್ಲಿ ಕ್ಯಾಂಪಸ್ ಪ್ಲೇಸ್‌ಮೆಂಟ್ ಡ್ರೈವ್ ಆಯೋಜಿಸಲಾಗಿತ್ತು. ಹೈದ್ರಾಬಾದಿನ ಡೆರಿವೆಟ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್ ನೇಮಕಾತಿ ಮತ್ತು ಸಂಪರ್ಕ ಸಲಹೆಗಾರರಾದ ಹಿರಿಯ ಜನರಲ್ ಮ್ಯಾನೆಜರ್ ಯು. ಶ್ರೀನಿವಾಸ್ ಮೂರ್ತಿ, ಘಟಕ ಕಾರ್ಯಚಾರಣೆಗಳ ಸ್ಥಾವರ ಮುಖ್ಯಸ್ಥ, ಡಾ. ಡಿ. ನಾಗೇಂದ್ರ ಬಾಬು ಪ್ಲಾಂಟ್ ಹೆಡ್ ಮತ್ತು ಎಂಪಿ ಯುನಿಟ್ ಆಪರೇಶನ್ಸ್, ಡಾ. ಮಧು ವ್ಯವಸ್ಥಾಪಕರು ಆರ್ ಮತ್ತು ಏ ಎಂಪಿ; ಡಿ ಮತ್ತು ನೇಮಕಾತಿ ವ್ಯವಸ್ಥಾಪಕ ಬಿ. ಮೊಹನ್ ರೆಡ್ಡಿ ಅವರೊಂದಿಗೆ ಸಂಸ್ಥೆಗೆ ಆಗಮಿಸಿ ಕೆಮಿಕಲ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ವಿವಿಧ ಹಂತಗಳಲ್ಲಿ ವಿಶೇಷ ಡ್ರೈವ್‌ನ್ನು ನಡೆಸಿದರು.

ಅಭಿಯಾನದ ಕೊನೆಯಲ್ಲಿ 10 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಯಿತು ಅದರಲ್ಲಿ 08 ವಿದ್ಯಾರ್ಥಿಗಳು ಕೆಮಿಕಲ್ ಇಂಜಿನಿಯರಿಂಗ ವಿಭಾಗದಿಂದ ಮತ್ತು 02 ವಿದ್ಯಾರ್ಥಿಗಳು ಮೆಕ್ಯಾನಿಕಲ್ ಇಂಜಿನಿಯರಿಂಗ ವಿಭಾಗದಿಂದ ಆಯ್ಕೆಯಾಗಿರುತ್ತಾರೆ. ಇವರಿಗೆ ಉತ್ತಮ ವೇತನ ಸ್ಟೈಫಂಡದೊಂದಿಗೆ ಇಂಟರ್ನಶಿಪ್ ಅವಕಾಶಗಳೊಂದಿಗೆ ಆಫರ್ ಲೆಟರಗಳನ್ನು ನೀಡಲಾಯಿತು.

ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಈಶ್ವರ ಖಂಡ್ರೆ, ಕಾರ್ಯದರ್ಶಿಗಳಾದ ಸಾಗರ ಖಂಡ್ರೆ, ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಉದಯಕುಮಾರ ಕಲ್ಯಾಣೆ ಹಾಗೂ ಕೆಮಿಕಲ್ ಇಂಜಿನಿಯರಿಂಗ ವಿಭಾಗದ ಮುಖ್ಯಸ್ಥರಾದ ಡಾ. ಎಂ.ಎ.ದೇವಣಿ ಅವರು ಸಂತೋಷವನ್ನು ವ್ಯಕ್ತಪಡಿಸುತ್ತಾ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಹಾಗೂ ವಿಭಾಗದ ಸಿಬ್ಬಂದಿಯವರಿಗೆ ಅಭಿನಂದನೆ ಸಲ್ಲಿಸಿದರು.

# ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಡಿ ಸದಸ್ಯರನ್ನು ನೊಂದಾಯಿಸಲು ನೊಂದಾವಣೆಗೆ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

2025-26ನೇ ಸಾಲಿನ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯರಕ್ಷಣಾ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಯೋಜನೆಯಡಿ ಸದಸ್ಯರನ್ನು ನೊಂದಾಯಿಸಲು ನೊಂದಾವಣಿಗೆ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಸಹಕಾರ ಸಂಘಗಳ ಉಪನಿಬಂಧಕರು ಅವರು ತಿಳಿಸಿದ್ದಾರೆ.

ಯಾದಗಿರಿ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕರ ಸಂಘಗಳ, ಪಿಕಾರ್ಡ ಬ್ಯಾಂಕುಗಳ, ಹಾಲು ಉತ್ಪಾದಕರ ಸಹಕಾರ ಸಂಘಗಳ, ಟಿ.ಎ.ಪಿ.ಸಿ.ಎಂ. ಎಸ್‌ಗಳ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಡಿ ಅಥವಾ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ಅಥವಾ ಬಹುರಾಜ್ಯ ಸಹಕಾರಿ ಸಂಘಗಳ ಕಾಯ್ದೆ 2002ರಡಿ ನೊಂದಾಯಿಸಿ ಕಾರ್ಯನಿರ್ವಹಿಸುತ್ತಿರುವ ಯಾವುದೆ ಸಹಕಾರ ಸಂಘಗಳ ಸದಸ್ಯರು ಮತ್ತು ಗ್ರಾಮಿಣ ಸಹಕಾರ ಸಂಘಗಳ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಸ್ವ-ಸಹಾಯ ಗುಂಪುಗಳ ಸದಸ್ಯರುಗಳು ಗರಿಷ್ಟ 4 ಸದಸ್ಯರ ಕುಟುಂಬಕ್ಕೆ ವಾರ್ಷಿಕ 500 ರೂ.ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಶೇ.20ರಷ್ಟು ಹೆಚ್ಚುವರಿಯಾಗಿ ಅಂದರೆ ಪ್ರತಿ ಹೆಚ್ಚುವರಿ ಸದಸ್ಯೆಗೆ 100 ರೂ.ಗಳ ಪಾವತಿಸಿ ನೊಂದಾಯಿಸಬಹುದು. ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸಹಾಯಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರಕಾರವೆ ಭರಿಸುತ್ತದೆ.

ನಗರ ಸಹಕಾರಿಗಳ ಆರೋಗ್ಯರಕ್ಷಣಾಯೋಜನೆಯಡಿ ನೊಂದಾಯಿಸಲು ಈ ಯೋಜನೆಯಡಿ ಗರಿಷ್ಟ 4 ಸದಸ್ಯರ ಕುಟುಂಬಕ್ಕೆ ವಾರ್ಷಿಕ ವಂತಿಗೆ 1000 ರೂ. ಗಳ ಮತ್ತು 4ಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಶೇ.20 ರಷ್ಟು ಹೆಚ್ಚುವರಿಯಾಗಿ ಅಂ-ದರೆ ಪ್ರತಿ ಹೆಚ್ಚುವರಿ ಸದಸ್ಯರಿಗೆ 200 ರೂ.ಗಳ ಪಾವತಿಸಿ ನೊಂದಾಯಿಸಬಹುದಾಗಿದೆ. ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ಯಶಸ್ವಿನಿ ಯೋಜನೆಯಡಿ ನೊಂದಾಯಿಸುವ ದಿನಾಂಕಕ್ಕೆ 1 ತಿಂಗಳು ಕಳೆದಿರಬೇಕು, ಹಾಗೂ ವಯೋಮಿತಿ ನಿರ್ಬಂಧವಿರುವುದಿಲ್ಲ.

ಈ ಯೋಜನೆಯಡಿ ಯಶಸ್ವಿನಿ ಸದಸ್ಯರುಗಳನ್ನು ನೊಂದಾಯಿಸುವ, ನೊಂದಣಿ ಪ್ರಕ್ರಿಯೆಯನ್ನು 3ನೇ ಜನವರಿ 2026 ರಿಂದ ಪ್ರಾರಂಭವಾಗಿ 2026ರ ಮಾರ್ಚ್ 31ರ ವರೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಈ ಯೋಜನೆಯಡಿ ಸರಿ ಸುಮಾರು 1650 ಖಾಯಿಲೆಗಳಿಗೆ ಚಿಕಿತ್ಸೆಗಳು ಮತ್ತು 478 ಐ.ಸಿ.ಯು ಚಿಕಿತ್ಸೆಗಳು ಒಟ್ಟು 2128 ಚಿಕಿತ್ಸೆಗಳನ್ನು ಯಶಸ್ವಿನಿ ಯೋಜನೆಯಡಿ ಅಳವಡಿಸಿಕೊಂಡಿರುವದರಿಂದ ಈ ಯೋಜನೆಯ ಫಲಾನುಭವಿಗಳ ಕುಟುಂಬಕ್ಕೆ ವಾರ್ಷಿಕ ವೈದ್ಯಕೀಯ ಚಿಕಿತ್ಸಾ ವೆಚ್ಚದ ಗರಿಷ್ಠ ಮಿತಿ 5 ಲಕ್ಷ.ರೂ.ಗಳ ನಿಗದಿಪಡಿಸಿದೆ. ರಾಜ್ಯದ ಯಾವುದೇ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಯಲ್ಲಿ ನಗದು ರಹಿತಾ ಚಿಕಿತ್ಸಾ ಪಡೆಯಲು ಅವಕಾಶವಿರುತ್ತದೆ. ಈ ಯೋಜನೆಯಡಿಯಲ್ಲಿ ನೊಂದಾಯಿಸಿ ಪ್ರಯೋಜನೆ ಪಡೆದುಕೊಳ್ಳಬೇಕು. 2025-26ನೇ ಯಶಸ್ವಿನಿ ಯೋಜನೆಯ ಚಿಕಿತ್ಸಾ ಅವಧಿಯು 2026ರ ಏಪ್ರಿಲ್ 1 ರಿಂದ 2027ರ ಮಾರ್ಚ್ 31ರ ವರೆಗೆ ಜಾರಿಯಲ್ಲಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸ್ಥಳೀಯ ಸಹಕಾರ ಸಂಘಗಳು ಹಾಗೂ ಸಹಕಾರ ಇಲಾಖೆಯ ಕಚೇರಿಗೆ ಖುದ್ದಾಗಿ ಭೇಟಿ ನೀಡಿ ಅಥವಾ ಯಾದಗಿರ ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ ದೂ.ಸಂ. 08473200424ಗೆ ಯಾದಗಿರ ಸಹಾಯಕ ನಿಬಂಧಕರ ಕಚೇರಿ ದೂ.ಸಂ.08473252379, ಹುಣಸಗಿ ಸಹಕಾರ ಅಭಿವೃದ್ಧಿ ಅಧಿಕಾರಿ ಮೊ.ನಂ.9902165419, ಸುರಪುರ ಸಹಕಾರ ಅಭಿವೃದ್ಧಿ ಅಧಿಕಾರಿ 9886549075,

ಶಹಾಪೂರ, ವಡಗೇರಾ ಸಹಕಾರ ವಿಸ್ತಿರ್ಣಾಧಿಕಾರಿ ಮೊ.ನಂ.9972786111 ಯಾದಗಿರಿ, ಗುರುಮಠಕಲ್ ಸಹಕಾರ ವಿಸ್ತಿರ್ಣಾಧಿಕಾರಿ ಮೊ.ನಂ.9972246622ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೆಳೆ ಹಾನಿ ವಿಮೆ ಪರಿಹಾರ ವಿಳಂಬ ಖಂಡನೆ ಎಪಿಎಂಸಿ ತೂಕ ಅನ್ಯಾಯ ಸರಿಪಡಿಸಲು ರೈತ ಸಂಘ ಆಗ್ರಹ




• **ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:**

ಕರ್ನಾಟಕ ರಾಜ್ಯ ರೈತ ಸಂಘ ತಾಲೂಕು ಘಟಕ ಲಿಂಗಸುಗೂರು ವತಿಯಿಂದ ಮಾನ್ಯ ಸಹಾಯಕ ಆಯುಕ್ತರಾದ ಬಸವಣ್ಣಪ್ಪ ಕಲ್ಲ ಶೆಟ್ಟಿ ಅವರಿಗೆ ಬೆಳೆ ಹಾನಿ ಪರಿಹಾರ ಹಾಗೂ ಬೆಳೆ ವಿಮಾ ಪರಿಹಾರ ವಿಳಂಬದ ಕುರಿತು ಮತ್ತು ಎಪಿಎಂಸಿಗಳಲ್ಲಿ ವರ್ತಕರು ತೂಕದಲ್ಲಿ ರೈತರಿಗೆ ಮಾಡುತ್ತಿರುವ ಅನ್ಯಾಯವನ್ನು ತಕ್ಷಣ ಸರಿಪಡಿಸಬೇಕೆಂದು ಮನವಿ ಸಲ್ಲಿಸಿ ಒತ್ತಾಯಿಸಲಾಯಿತು.

ಜಿಲ್ಲೆಯಾದ್ಯಂತ ಇತ್ತೀಚೆಗೆ ಸತತವಾಗಿ ಸುರಿದ ಭಾರೀ ಮಳೆಯಿಂದಾಗಿ ರೈತರ ಜಮೀನುಗಳಲ್ಲಿ ತೋಟಗಾರಿಕೆ ಇಲಾಖೆಯ ಬೆಳೆಗಳು ಹಾಗೂ ಕೃಷಿ ಇಲಾಖೆಯ ಪ್ರಮುಖ ಬೆಳೆಗಳಾದ ತೊಗರಿ, ಎತ್ತಿ, ದಾಳಂಬಿ, ಮೆಣಸಿನಕಾಯಿ ಸೇರಿದಂತೆ ಅನೇಕ ಬೆಳೆಗಳು ಸಂಪೂರ್ಣವಾಗಿ ನಾಶವಾಗಿವೆ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಲಿಂಗಸುಗೂರು ಮತ್ತು ಮಸ್ಕಿ ತಾಲೂಕಿನ ಕೆಲ ರೈತರ ಬ್ಯಾಂಕ್ ಖಾತೆಗಳಿಗೆ ಮಾತ್ರ ಬೆಳೆ ಹಾನಿ ಪರಿಹಾರ ಧನ ಜಮಾ ಆಗಿದ್ದು, ಇನ್ನೂ ಬಹಳಷ್ಟು ರೈತರಿಗೆ ಬೆಳೆ ಪರಿಹಾರ ಹಾಗೂ ಬೆಳೆ ವಿಮಾ ಪರಿಹಾರ ಹಣ ಜಮಾ ಆಗಿಲ್ಲ ಎಂದು ರೈತ ಸಂಘ ಆಕ್ರೋಶ ವ್ಯಕ್ತಪಡಿಸಿತು.

ಕಳೆದ ನಾಲ್ಕು ವರ್ಷಗಳಿಂದ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಮಾರ್ಗದರ್ಶನದಂತೆ ರೈತರು ಸತತವಾಗಿ ಬೆಳೆ ವಿಮೆ ಮಾಡಿಕೊಂಡಿದ್ದರೂ, ವಿಮೆ ಕುರಿತು ಸಂಬಂಧಿಸಿದ ಇಲಾಖಾಧಿಕಾರಿಗಳಿಂದ ಸ್ಪಷ್ಟ ಮಾಹಿತಿ ಸಿಗುತ್ತಿಲ್ಲ. ಇದರಿಂದ ರೈತರು ಗೊಂದಲ ಹಾಗೂ ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ ಎಂದು ಸಂಘದ ಮುಖಂಡರು ಹೇಳಿದರು.

ಇದಲ್ಲದೆ, ಲಿಂಗಸುಗೂರು ಮತ್ತು ಮಸ್ಕಿ ಎಪಿಎಂಸಿಗಳಲ್ಲಿ ಹಿಂದಿನಿಂದ ಗೋಣಿಚೀಲಗಳಲ್ಲಿ ಧಾನ್ಯ ತೂಕ ಮಾಡಲಾಗುತ್ತಿತ್ತು. ಆದರೆ ಇತ್ತೀಚೆಗೆ ಪ್ಲಾಸ್ಟಿಕ್ ಚೀಲಗಳಲ್ಲಿ ತೂಕ ಮಾಡಿ ಪ್ರತಿ ಚೀಲಕ್ಕೆ 1 ಕೆಜಿ ಸೂಟ್ ನಿಲ್ಲಿಸಿರುವುದು ರೈತರಿಗೆ ಭಾರೀ ಅನ್ಯಾಯವಾಗಿದ್ದು, ಕೂಡಲೇ ಮೊದಲಿನಂತೆ ಗೋಣಿಚೀಲಗಳಲ್ಲಿ ಧಾನ್ಯ ತೂಕ ಮಾಡುವ ವ್ಯವಸ್ಥೆ ಜಾರಿಗೆ ತರಬೇಕೆಂದು ಆಗ್ರಹಿಸಿದರು.

**ರೈತರ ಪ್ರಮುಖ ಬೇಡಿಕೆಗಳು :**

ಬಾಕಿ ಇರುವ ಎಲ್ಲಾ ಬೆಳೆ ಹಾನಿ ಪರಿಹಾರ ಹಣವನ್ನು ತಕ್ಷಣ ರೈತರ ಖಾತೆಗೆ ಜಮಾ ಮಾಡಬೇಕು. ವೈಜ್ಞಾನಿಕ ಬೆಳೆ ಹಾನಿ ಮೌಲ್ಯಮಾಪನ ನಡೆಸಿ ಪ್ರತಿ ಎಕರೆಗೆ –25,000 ಪರಿಹಾರ ನೀಡಬೇಕು.

ಪ್ರತಿಯೊಬ್ಬ ರೈತನಿಗೂ ತನ್ನ ಪರಿಹಾರದ ಸ್ಥಿತಿಗತಿ ತಿಳಿಯುವಂತೆ ಪಾರದರ್ಶಕ ವ್ಯವಸ್ಥೆ ಜಾರಿಗೆ ತರಬೇಕುದತ್ತಾಂಶ ದೋಷಗಳನ್ನು ಸರಿಪಡಿಸಲು ತಾಲೂಕು ಮಟ್ಟದಲ್ಲಿ ಪ್ರತ್ಯೇಕ ಸಹಾಯವಾಣಿ ಆರಂಭಿಸಬೇಕು

ಬಾಕಿ ಇರುವ ಬೆಳೆ ವಿಮಾ ಪರಿಹಾರ ಹಣವನ್ನು ಕೂಡಲೇ ಜಮಾ ಮಾಡಬೇಕು

ಎಪಿಎಂಸಿಗಳಲ್ಲಿ ರೈತರಿಗೆ ಆಗುತ್ತಿರುವ ತೂಕ ಅನ್ಯಾಯವನ್ನು ತಕ್ಷಣ ನಿಲ್ಲಿಸಬೇಕು

ಈ ಸಂದರ್ಭದಲ್ಲಿ ರೈತ ಸಂಘದ ತಾಲೂಕು ಘಟಕದ ಅಧ್ಯಕ್ಷರಾದ ಮಲ್ಲಣ್ಣ ಕೋಳೂರು, ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ನಿಂಗಪ್ಪ ಗೌಡನಬಾವಿ (ಸಾಕಿನಹಟ್ಟಿ), ರಾಜ್ಯ ರೈತ ಸಂಘದ ಅಧ್ಯಕ್ಷ ಬಸನಗೌಡ ಮುಟ್ಟೂರು, ಸಾಕಿನ್ ಗೌಡೂರ್, ಮಾನಪ್ಪ ಪುಲ್ಬಾವಿ, ಬಸವಲಿಂಗಪ್ಪ ಪುಲ್ಬಾವಿ, ಗ್ರಾಮ ಘಟಕದ ಅಧ್ಯಕ್ಷ ಕುಮಾರಸ್ವಾಮಿ, ಗೌರವಾಧ್ಯಕ್ಷ ಅಮರಣ್ಣ ಅರಳಹಳ್ಳಿ, ಗ್ರಾಮ ಪಂಚಾಯತ್ ಸದಸ್ಯರಾದ ಈರಣ್ಣ ಗುಡಿಯಾಳ್, ವೆಂಕಣ್ಣ ಗುಡಿಯಾಳ್, ನಾಗರಾಜ್ ಗುಡಿಯಾಳ್, ಕಾಸಿಂಸಾಬ್ ಮುದುಗಲ್, ಹುಸೇನ್ ನಾಯಕ್ ಮುದುಗಲ್, ಮುದುಕನ ಗೌಡ, ಹನುಮಪ್ಪ, ಸಿದ್ದಿಂಗಪ್ಪ, ಚನ್ನಬಸವ, ಕುಪ್ಪಣ್ಣ, ವೆಂಕಣ್ಣ, ಬಸವರಾಜ್ ಹಿರೇಮನಿ ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು.

ರೈತರ ಸಂಕಷ್ಟವನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣ ಬೆಳೆ ಪರಿಹಾರ ಹಾಗೂ ಬೆಳೆ ವಿಮಾ ಹಣ ಬಿಡುಗಡೆ ಮಾಡಬೇಕು ಮತ್ತು ಎಪಿಎಂಸಿ ಅನ್ಯಾಯಕ್ಕೆ ಕಡಿವಾಣ ಹಾಕಬೇಕು ಎಂದು ರೈತ ಸಂಘ ಸ್ಪಷ್ಟವಾಗಿ ಆಗ್ರಹಿಸಿತು.

# ರೈಲ್ವೆ ಬ್ರೀಡ್ಜ್ ಅಂಡರ್ ಪಾಸ್ ರಸ್ತೆಯಿಂದ ರೈತರಿಗೆ ತೊಂದರೆ : ಬಾದರ್ಲಿ ಆರೋಪ

• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು:**



ನಗರದಿಂದ ಭಟ್ರಹಳ್ಳಿ ಕ್ಯಾಂಪಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ರೈಲ್ವೆ ಬ್ರೀಡ್ಜ್ ನಿರ್ಮಿಸಿದ್ದರಿಂದ ಪ್ರಯಾಣಿಕರಿಗೆ ಮತ್ತು ಜಮೀನುಗಳಿಗೆ ತೆರಳುವ ರೈತರಿಗೆ ಅಂಡರ್‌ಪಾಸ್‌ನಲ್ಲಿ ನೀರು ಮತ್ತು ಕೊಚ್ಚಿ ನಿಂತಿದ್ದರಿಂದ ತೀವ್ರ ತೊಂದರೆಯಾಗಿದೆ ಎಂದು ಕರ್ನಾಟಕ ರಾಜರತ್ನ ರಕ್ಷಣಾ ವೇದಿಕೆ ತಾಲೂಕಾಧ್ಯಕ್ಷ ಮಂಜುನಾಥ ಬಾದರ್ಲಿ ಆರೋಪಿಸಿದ್ದಾರೆ.

ಈ ಕುರಿತು ಮಂಗಳವಾರ ಪತ್ರಿಕೆ ಹೇಳಿಕೆ ನೀಡಿರುವ ಅವರು ಕಳೆದ ಕೆಲ ತಿಂಗಳ ಹಿಂದೆ ಸತತವಾಗಿ ಮಳೆಯಾಗಿದ್ದರಿಂದ ಮಳೆ ನೀರು ಮುಂದಕ್ಕೆ ಹರಿಯದೇ ಇರುವುದರಿಂದ ರೈಲ್ವೆ ಬ್ರೀಡ್ಜ್ ಅಂಡರ್ ಪಾಸ್‌ನಲ್ಲಿ ಬಹಳ ದಿನ ಮಳೆ ನೀರು ನಿಂತಿಕೊಂಡಿದ್ದರಿಂದ ಪಾಚು ಉತ್ಪತ್ತಿಯಾಗಿ ದ್ವಿಚಕ್ರವಾಹನಗಳು ಸ್ಕೀಡಾಗಿರುವ ಹಲವಾರು ಘಟನೆಗಳು ನಡೆದಿವೆ. ಈ ಬಗ್ಗೆ ರೈಲ್ವೆ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲವೆಂದು ಆರೋಪಿಸಿದರು. ಸುಕಾಲಪೇಟೆಯ ಬಹುತೇಕ ರೈತರ ಜಮೀನುಗಳಿಗೆ ತೆರಳಿಬೇಕಾದರೆ ರೈಲ್ವೆ ಬ್ರೀಡ್ಜ್ ಅಂಡರ್ ಪಾಸ್ ಮೂಲಕ ತೆರಳಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರ ಹಿತದೃಷ್ಟಿಯಿಂದಾದರೂ ರೈಲ್ವೆ ಇಲಾಖೆ ಅಧಿಕಾರಿಗಳು ವಾರದೊಳಗೆ ಅಂಡರ್‌ಪಾಸ್ ರಸ್ತೆಯನ್ನು ಪ್ರಯಾಣಿಕರಿಗೆ ಮತ್ತು ರೈತರಿಗೆ ಅನುವು ಮಾಡಿಕೊಡದೆ ಹೋದಲ್ಲಿ ಸಂಘಟನೆಯಿಂದ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುತ್ತದೆ ಎಂದು ಪತ್ರಿಕಾ ಹೇಳಿಗೆ ಮೂಲಕ ಎಚ್ಚರಿಸಿದ್ದಾರೆ.

# ಅಕ್ಕಮಹಾದೇವಿಯವರ ವಚನಗಳು ವಿಶ್ವಕ್ಕೆ ಶ್ರೇಷ್ಠ ಸಂದೇಶಗಳನ್ನು ನೀಡಿದೆ



• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ಕರ್ನಾಟಕ ವಚನ ಸಾಹಿತ್ಯ ಪರಿಷತ್ ವತಿಯಿಂದ ನಗರದ ಮಾಧವ ನಗರದಲ್ಲಿರುವ ಅಕ್ಕಮಹಾದೇವಿ ಮಂಟಪದಲ್ಲಿ ಭಾನುವಾರ ಮಾಸಿಕ ಶರಣ ಚಿಂತನ ಗೋಷ್ಠಿ ಕಾರ್ಯಕ್ರಮ ನಡೆಯಿತು. ಅಕ್ಕಮಹಾದೇವಿಯವರ ಜೀವನ ಕುರಿತು ವಿಶೇಷ ಉಪನ್ಯಾಸ ಹಾಗೂ 'ಕನ್ನಡದ ನಂದಾದೀಪ' ಕೃತಿ ವಿಮರ್ಶೆ ಜರುಗಿತು.

ವಚನಾಮೃತ ಕನ್ನಡ ಸಂಘದ ಅಧ್ಯಕ್ಷ ಪ್ರೊ. ಸಿದ್ರಾಮಪ್ಪಾ ಮಾಸಿಮಾಡೆ ಸಸಿಗೆ ನೀರು ಎರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, 'ಅಕ್ಕಮಹಾದೇವಿಯವರ ವಚನಗಳು ವಿಶ್ವಕ್ಕೆ ಶ್ರೇಷ್ಠ ಸಂದೇಶಗಳನ್ನು ನೀಡಿದ್ದು, ಅವರ ಮೇರು ವ್ಯಕ್ತಿತ್ವ ಸ್ತ್ರೀಕುಲಕ್ಕೆ ಆದರ್ಶವಾಗಿದೆ' ಎಂದರು.

12ನೇ ಶತಮಾನದಲ್ಲಿ ಬಸವಾದಿ ಶರಣರು ನೀಡಿದ ವೈಚಾರಿಕ ಮತ್ತು ಆಧ್ಯಾತ್ಮಿಕ ತತ್ವಗಳನ್ನು 20ನೇ ಶತಮಾನದಲ್ಲಿ ಚನ್ನಬಸವ ಪಟ್ಟದೇವರು ಅಕ್ಷರ, ಕಾಯಕ ಮತ್ತು ದಾಸೋಹ ಸೇವೆಗಳ ಮೂಲಕ ಸಮಾಜಕ್ಕೆ ತಲುಪಿಸಿದ್ದಾರೆ' ಎಂದು ಹೇಳಿದರು.

ಕನ್ನಡದ ನಂದಾದೀಪ' ಕೃತಿಯ ದಾಸೋಹಿ ಡಾ.ಗುರಮ್ಮಾ ಸಿದ್ಧಾರೆಡ್ಡಿ ಮಾತನಾಡಿ, 'ಮಕ್ಕಳಲ್ಲಿ ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಲು ವಚನ ಸಾಹಿತ್ಯ ಅಧ್ಯಯನ ಅಗತ್ಯವಿದೆ' ಎಂದರು.

ಭಕ್ತಿ ಶಿವಲಿಂಗ ಹೆಡೆ ವಚನ ನೃತ್ಯ, ವರ್ಷಾರಾಣಿ ಶ್ರೀನಿವಾಸ ಬಿರಾದಾರ ವಚನ ಗಾಯನ ನಡೆಸಿದರು. ಈ ಸಂದರ್ಭದಲ್ಲಿ ಅಕ್ಕಮಹಾದೇವಿ ಚಲನಚಿತ್ರದ ನಿರ್ದೇಶಕ–ನಿರ್ಮಾಪಕ ಬಿ.ಜೆ. ವಿಷ್ಣುಕಾಂತ ಹಾಗೂ ನಟಿ ಸುಲಕ್ಷಾ ಕೈರಾ ಅವರನ್ನು ಸನ್ಮಾನಿಸಲಾಯಿತು.

ಕವಿಗಳಾದ ಧನಲಕ್ಷ್ಮೀ ಪಾಟೀಲ, ವಜ್ರಾ ಪಾಟೀಲ, ವಿದ್ಯಾವತಿ ಹಿರೇಮಠ, ಸೂರ್ಯಕಲಾ ಎಸ್. ಹೊಡಮನಿ, ಮಹೇಶ್ವರಿ ಶಿವಲಿಂಗ ಹೆಡೆ, ಸುಲೇಖಾ ಹುಲಸೂರು, ಶಿವರಾಜ ಮಾದಪ್ಪಾ ಮಿತ್ರ, ಓಂಕಾರ ಪಾಟೀಲ, ಬಾಪು ಮಡಕಿ, ಗಣಪತಿ ಭೂರೆ, ಪ್ರೊ. ಉಮಾಕಾಂತ .ಕೆ. ಮೀಸೆ, ಡಾ. ರಘುಶಂಖ ಭಾತಂಬ್ರಾ, ರಮೇಶ ಬರ್ಮಾ, ಶಿವಲಿಂಗ ಹೆಡೆ, ಶ್ರೀಧರ ಅವರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಸುರೇಶ ಚನ್ನಶೆಟ್ಟಿ, ಕಲ್ಯಾಣರಾವ ಚಳಕಾಪೂರೆ, ಶೈಲಜಾ ಚಳಕಾಪೂರೆ, ಪ್ರೊ. ಬಾಬುರಾವ ಪಸರ್ಗೆ, ಶ್ರೀಕಾಂತ ಬಿರಾದಾರ, ಎಸ್.ಎಸ್. ಹೊಡಮನಿ ಹಾಗೂ ಶರಣ–ಶರಣೆಯರು ಭಾಗವಹಿಸಿದ್ದರು. ಶಿವಲಿಂಗಪ್ಪಾ ಜಲಾದೆ ಸ್ವಾಗತಿಸಿದರು. ಬಸವರಾಜ ಮೂಲಗೆ ನಿರೂಪಿಸಿದರು. ಲತಾ ವೀರಶೆಟ್ಟೆ ವಂದಿಸಿದರು. ನಿವೃತ್ತ ಯೋಜನಾಧಿಕಾರಿ ವಿಶ್ವನಾಥ ಬಿರಾದಾರ ಪ್ರಸಾದ ದಾಸೋಹ ನೆರವೇರಿಸಿದರು.

# ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಗಳ ಅಮಾನತುಗೆ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ಬೀದರ್:**



ಬೀದರ್ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳಾದ ಶ್ರೀಕಾಂತ ವೈರಾಗೆ ಅವರನ್ನು ತಕ್ಷಣ ಸೇವೆಯಿಂದ ಅಮಾನತು ಮಾಡಬೇಕು ಎಂದು ದಲಿತ ರಕ್ಷಣಾ ಹೋರಾಟ ಸಮಿತಿಯ ಸಂಸ್ಥಾಪಕ ರಾಜ್ಯಾಧ್ಯಕ್ಷರು ಪ್ರಕಾಶ ಹಳ್ಳಿಖೇಡ ಅವರು ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಶ್ರೀಕಾಂತ ವೈರಾಗೆ ಅವರು ತಮ್ಮ ಅಧೀನದಲ್ಲಿರುವ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಮೇಲೆ ದರ್ಪ ತೆ–ೂರಿಸಿ, ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ

ಶಿಕ್ಷಣ ಇಲಾಖೆಯ ಸಮಗ್ರ ಶಿಕ್ಷಣ ಕರ್ನಾಟಕ–ಬೀದರ್ ವಿಭಾಗದಲ್ಲಿ ವಿವಿಧ ಕಾರ್ಯಗಳಿಗೆ ಏಜೆನ್ಸಿ ಅಥವಾ ಎನ್‌ಜಿಓ ನೇಮಕಾತಿಗೆ ಟೆಂಡರ್ ಕರೆಯಲಾಗಿದ್ದು, ಈ ಸಂಬಂಧಿತ ಕಡತಗಳನ್ನು ಸುಮಾರು ಒಂದು ತಿಂಗಳ ಕಾಲ ತಮ್ಮ ಬಳಿಯೇ ಇಟ್ಟುಕೊಂಡು, ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡದೆ ಅಡ್ಡಿಪಡಿಸಿದ್ದಾರೆ ಎಂದು ಅವರು ದೂರಿದ್ದಾರೆ.

ಸರ್ಕಾರದ ನಿಯಮಗಳ ಪ್ರಕಾರ ಇಲಾಖಾ ಮುಖ್ಯಸ್ಥರಿಗೆ ಒಂದು ಕೋಟಿ ರೂಪಾಯಿ ಮೌಲ್ಯದವರೆಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸುವ ಅಧಿಕಾರವಿದ್ದರೂ, ಈ ನಿಯಮಗಳನ್ನು ಉಲ್ಲಂಘಿಸಿ ತಮ್ಮ ಮನಬಂದಂತೆ ವರ್ತಿಸುತ್ತಿದ್ದಾರೆ ಎಂದು ಆರೋಪಿಸಲಾಗಿದೆ. ಎರಡನೇ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳು ಹಾಗೂ ಸರ್ಕಾರದ ವಿವಿಧ ಆದೇಶಗಳನ್ನು ಗಾಳಿಗೆ ತೂರಿರುವುದು ಗಂಭೀರ ವಿಷಯವಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಇದಲ್ಲದೆ, ಶ್ರೀಕಾಂತ ವೈರಾಗೆ ವಿರುದ್ಧ ಅನೇಕ ಭ್ರಷ್ಟಾಚಾರ ಹಾಗೂ ಕರ್ತವ್ಯ ಲೋಪದ ಆರೋಪಗಳಿದ್ದರೂ, ಅವರಿಗೆ ಬ್ರೀಮ್ಸ್ ಬೋಧಕ ಆಸ್ಪತ್ರೆಯ ಆರ್ಥಿಕ ಸಲಹೆಗಾರರ ಹೆಚ್ಚುವರಿ ಜವಾಬ್ದಾರಿ ನೀಡಿರುವುದು ಖಂಡನೀಯವಾಗಿದೆ ಎಂದು ಸಮಿತಿ ತಿಳಿಸಿದೆ.

ಈ ಹಿನ್ನೆಲೆಯಲ್ಲಿ, ಶ್ರೀಕಾಂತ ವೈರಾಗೆ ಅವರನ್ನು ತಕ್ಷಣ ಸೇವೆಯಿಂದ ಅಮಾನತು ಮಾಡಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ದಲಿತ ರಕ್ಷಣಾ ಹೋರಾಟ ಸಮಿತಿಯ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಪ್ರಕಾಶ ಹಳ್ಳಿಖೇಡ ಅವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಕೃತಿ ಲೋಕಾರ್ಪಣೆ

• **ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ :**

ಇಲ್ಲಿನ ಬಿಕೆಡಿಬಿ ಯಾತ್ರಿ ನಿವಾಸದಲ್ಲಿ ಅಯೋಜಿಸಲಾಗಿದ್ದ ಲಿಂ. ಬಸಮ್ಮ ಕಾಶಪ್ಪ ಬಾಲಿಕಿಲೆಯವರ ಸ್ಮರಣಾರ್ಥ. ಕಾಶಪ್ಪ ಬಾಲಿಕಲೆ ವಿರಚಿತ ದಲಿತೋದ್ಧಾರಕ ಬಸವಣ್ಣ ಮತ್ತು ಕಲ್ಯಾಣದ ಕ್ರಮ ಭೂಮಿಯಲ್ಲಿ ಕೃತಿಗಳ ಲೋಕಾರ್ಪಣೆ ಇದೇ ದಿನಾಂಕ 11.ರಂದು ಬೆಳಿಗ್ಗೆ 11. ಗಂಟೆಗೆ

ದಿವ್ಯ ಸಾನಿಧ್ಯ ಬೀದರ ಬಸವ ಸೇವಾ ಪ್ರತಿಷ್ಠಾನದ ಅಧ್ಯಕ್ಷರ ಪೂಜ್ಯ ಶ್ರೀ ಡಾ. ಗಂಗಾಂಬಿಕಾ ಅಕ್ಕ. ಕಿರು ಹೊತ್ತಗೆಗಳ ಬಿಡುಗಡೆ ಬೆಂಗಳೂರು ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಡಾ. ಎಲ್. ಭೈರಪ್ಪ ಅಧ್ಯಕ್ಷತೆ ವಹಿಸುವರು. ಹುಮನಾಬಾದ ಹಿರಿಯ ಸಾಹಿತಿಗಳಾದ ಡಾ. ಸೋಮನಾಥ ಯಾಳವಾರ. ಕೃತಿಗಳ ಪರಿಚಯ ಕಲಬುರ್ಗಿ ವಿಶಾಂತ ಪ್ರಾಚಾರ್ಯರಾದ ಡಾ. ನೀಲಾಂಬಿಕಾ ಪೋಲಿಸ್ ಪಾಟೀಲ. ಮುಖ್ಯ ಅತಿಥಿಗಳಾಗಿ ಶಾಸಕರಾದ ಶರಣು ಸಲಗರ್.

ಬೀದರ ಡಾ. ಜಗನ್ನಾಥ ಹೆಬ್ಬಾಳೆ. ಬೀದರ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಶಂಭುಲಿಂಗ ಕಾಮಣ್ಣ. ಗೌರವ ಉಪಸ್ಥಿತಿ ಕೃತಿಗಳ ಲೇಖಕರು ಕಾಶಪ್ಪ ಬಾಲಿಕಲೆ. ಗೌರವ ಸನ್ಮಾನ ನಿವೃತ್ತ ಶಿಕ್ಷಕರಾದ ಎಸ್. ಜಿ. ಹುಡೇದ. ಶ್ರೀ ಬಸವೇಶ್ವರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಡಾ. ಭೀಮಾಶಂಕರ ಬಿರಾದಾರ. ಭಾಲ್ಕಿಯ ವಿಶಾಂತಿ ಪ್ರಾಧ್ಯಾಪಕರು ಡಾ. ಚಂದ್ರಶೇಖರ ಬಿರಾದಾರ. ಧಮ್ಮದೀಪ ಭೇಂಡೆ. ಸ್ವಾಗತ ಎಸ್. ಎಸ್. ಖೂಬಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಎಸ್. ಜಿ. ಕರಣೆ ನಿರೂಪಣೆ. ಮನ್ನಾಏಖೇಳಿ ಆಕಾಶವಾಣಿ ಕಲಾವಿದ ನವಲಿಂಗ ಪಾಟೀಲ. ಉದ್ಯಮಿಗಳಾದ ಬಸವರಾಜ ಬಾಲಿಕಿಲೆ ವಂದಿಸಲಿದ್ದಾರೆ.

# ಸರಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಸ್‌ಡಿಎಂಸಿ ರಚನೆ

• **ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:**



ಪಟ್ಟಣದ ಶಾಸಕರ ಸರಕಾರಿ ಮಾದರಿಯ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲೆಯ ಸಮಗ್ರ ಅಭಿವೃದ್ಧಿ ಹಾಗೂ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ಎಸ್‌ಡಿಎಂಸಿ ಯನ್ನು ಇತ್ತೀಚೆಗೆ ರಚಿಸಲಾಯಿತು.

ಶಿಕ್ಷಣ ಹಕ್ಕು ಕಾಯ್ದೆ–2009ರ ನಿಯಮಾನುಸಾರ ಪೋಷಕರ ಸಭೆಯನ್ನು ನಡೆಸಿ, ಪಾರದರ್ಶಕವಾಗಿ ಸಮಿತಿ ರಚನೆ ಮಾಡಲಾಗಿದ್ದು, ಒಟ್ಟು 18 ಮಂದಿ ಸದಸ್ಯರನ್ನು ಆಯ್ಕೆಮಾಡಲಾಗಿದೆ. ಸಮಿತಿಯಲ್ಲಿ ಮಹಿಳೆಯರಿಗೆ ಹಾಗೂ ಎಸ್‌ಸಿ/ ಎಸ್‌ಟಿ ಮತ್ತು ಹಿಂದುಳಿದ ವರ್ಗಗಳಿಗೆ ಸೂಕ್ತ ಪ್ರತಿನಿಧಿತ್ವ ನೀಡಲಾಗಿದೆ.

ಪೋಷಕ ಸದಸ್ಯರೊಳಗಿಂದಲೇ ರಮೇಶ್ ತಂದೆ ಕನಕಪ್ಪ ಅವರನ್ನು ಅಧ್ಯಕ್ಷರನ್ನಾಗಿ ಹಾಗೂ ಶ್ರೀಮತಿ ಬಿಬಿ ಆಶಾ ಗಂಡ: ಆದಮ್ ಪಟೇಲ್ ವ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ಸದಸ್ಯರಾಗಿ ಕಾಮಣ್ಣ, ಶಿವಪ್ಪ, ಲಕ್ಷ್ಮಿ, ಲಲಿತಾ, ಜ್ಯೋತಿ, ಶಾರದಾ, ಬಾಬು ನಾಯಕ, ರೇಣುಕಮ್ಮ, ನುಜ್ಹತ್, ರಾಜಮಹ್ಮದ್, ರಂಜಾನ ಸಾಬ್, ಬಸವರಾಜ, ಆದಯ್ಯ, ಗೌತಮ್ ಕುಮಾರ, ಸೌಮ್ಯಶ್ರೀ ಹಾಗೂ ಸಾವಿತ್ರಿ ಅವರನ್ನು ಆಯ್ಕೆ ಮಾಡಲಾಗಿದೆ. ಶಾಲಾ ಸುದಾರಣಾ ಸಮಿತಿಯ ಸದಸ್ಯರನ್ನಾಗಿಯೂ ಅವರು ಕಾರ್ಯನಿರ್ವಹಿಸಲಿದ್ದಾರೆ. ಮುಖ್ಯಶಿಕ್ಷಕರು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

ಶಾಲೆಯ ಶೈಕ್ಷಣಿಕ ಪ್ರಗತಿ, ಮೂಲಸೌಕರ್ಯ ಅಭಿವೃದ್ಧಿ, ಮಧ್ಯಾಹ್ನದ ಬಿಸಿಯೂಟ ಯೋಜನೆಯ ಮೇಲ್ವಿಚಾರಣೆ, ಮಕ್ಕಳ ಹಾಜರಾತಿ ಹಾಗೂ ಸರ್ಕಾರದ ಅನುದಾನಗಳ ಸರಿಯಾದ ಬಳಕೆಗೆ ಹೆಚ್ಚಿನ ಗಮನ ಹರಿಸುವುದಾಗಿ ಸಮಿತಿ ನಿರ್ಧರಿಸಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಶಿಕ್ಷಕರಾದ ಸುಭಾಸ್, "ಎಸ್‌ಡಿಎಂಸಿ ಸಹಕಾರದಿಂದ ಶಾಲೆಯನ್ನು ಇನ್ನಷ್ಟು ಉತ್ತಮ ಮಟ್ಟಕ್ಕೆ ಕೊಂಡೊಯ್ಯಲು ಸಾಧ್ಯವಾಗಲಿದೆ" ಎಂದು ತಿಳಿಸಿದರು. ಪೋಷಕರು ಹಾಗೂ ಸ್ಥಳೀಯ ಮುಖಂಡರು ಸಮಿತಿಯ ಕಾರ್ಯಚಟುವಟಿಕೆಗಳಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಕ ವೃಂದ ಉಪಸ್ಥಿತರಿದ್ದರು.

# ಧರ್ಮಸ್ಥಳ ಸಂಘದಿಂದ ಲಕ್ಷ್ಮೀ ಪೂಜೆ



• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ಪಟ್ಟಣದ ಬಸವಕಲ್ಯಾಣ ಮಂಟಪದಲ್ಲಿ ಶುಕ್ರವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್(ರಿ) ವತಿಯಿಂದ ಆಯೋಜನೆ ಮಾಡಿದ ಸಾಮೂಹಿಕ ಲಕ್ಷ್ಮೀ ಪೂಜೆ ಸಂಘದ ಪದಾಧಿಕಾರಿಗಳು ನೆರವೇರಿಸಿ ಕೊಟ್ಟರು.

ಶ್ರೀಮತಿ ವೈಷ್ಣವಿ ಗಿರೀಶ ಮಿರ್ಚೆ ಲಕ್ಷ್ಮೀಪೂಜಾ ಸಮಿತಿಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಮಾಜದಲ್ಲಿ ಶಾಂತಿ ಮತ್ತು ಪ್ರೀತಿಯ ವಾತಾವರಣ ನೆಲಸಲಿ, ಎಲ್ಲರ ಕಷ್ಟ ದೂರಮಾಡಿ ಎಲ್ಲರಿಗೂ ಒಳ್ಳೆಯದು ಆಗಲಿ ಎಂದು ಸಾಮೂಹಿಕ ಲಕ್ಷ್ಮೀ ಪೂಜೆ ಕಾರ್ಯಕ್ರಮ ಬಹಳ ಭಕ್ತಿಭಾವದಿಂದ ಆಚರಣೆ ಮಾಡಲಾಯಿತು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಿತಿ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮೀ ಉಮಾಕಾಂತ, ಕಾರ್ಯದರ್ಶಿ ಶ್ರೀ ಶರಣಬಸಪ್ಪ ಮೇಲ್ವಿಚಾರಕು ಕಮಲನಗರ ವಲಯ, ಜೋತೆ ಕಾರ್ಯದರ್ಶಿ ಶ್ರೀಮತಿ ರೇಣುಕಾ ವಿರೇಂದ್ರ ಕಮಲನಗರ,

ಕೋಶಾಧಿಕಾರಿ ಶ್ರೀಮತಿ ನಾಗವೇಣಿ ಸಂಜು ಸಮಿತಿಯ ಸದಸ್ಯರು, ಶಾಮಲಾ ಚಂದ್ರಕಾಂತ ಕಮಲನಗರ, ದೇವಿಕಾ ನಾಗೇಶ ಮದನೂರ, ಅಲಕಾ ಬಾಲಾಜಿ ಮದನೂರ, ಸಂಗೀತಾ ಮಲ್ಲಿಕಾರ್ಜುನ ಚಾಂಡೇಶ್ವರ, ಶೋಭಾ ಪ್ರಕಾಶ ಸಾವಳಿ, ಶಿವಕಾಂತ ರಾಮಶೆಟ್ಟಿ ,ಉಜ್ವಲಾ ಮಧುಕರ, ಶ್ರೀದೇವಿ ರಾಜಕುಮಾರ, ಸವಿತಾ ಅನೀಲ, ಆಹುಬಾಯಿ ಶ್ರೀಹರಿ ಕಮಲನಗರ, ನಿರ್ಮಲಾ ಧನರಾಜ ಹೊಳಸಮುದ್ರ, ಸುಮನ ಹೊಳಸಮುದ್ರ, ಕಮಲಾಬಾಯಿ, ಸಂಗೀತಾ ವಿಜಯಕುಮಾರ ಸೇರಿದಂತೆ ಸಂಘದ ಪದಾಧಿಕಾರಿಗಳು ಮಹಿಳೆಯರು ಇದ್ದರು.

# ಜಯಂತಿ ಅದ್ದೂರಿಯಾಗಿ ಆಚರಿಸಲು ಕ್ರಮವಹಿಸಿ: ಸಿದ್ರಾಮೇಶ್ವರ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ನಿಜಶರಣ ಅಂಬಿಗರ ಚೌಡಯ್ಯ ಜಯಂತಿಯನ್ನು ಅದ್ದೂರಿಯಾಗಿ ಆಚರಣೆಗೆ ಅಗತ್ಯ ಕ್ರಮವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು. ಅವರು ಗುರುವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಆಚರಣೆ ಕುರಿತು ಕರೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲಾ ಮಟ್ಟದ ನಿಜಶರಣ ಅಂಬಿಗರ ಚೌಡಯ್ಯ ಜಯಂತಿಯನ್ನು ಜನವರಿ 21 ರಂದು ಹಮ್ಮಿಕೊಳ್ಳಲಾಗುವುದು. ಅಂದು ಬೆಳಿಗ್ಗೆ 8.30ಕ್ಕೆ ಅಂಬಿಗರ ಚೌಡಯ್ಯನವರ ಭಾವಚಿತ್ರದ ಮೆರವಣಿಗೆಯು ನಗರದ ಸಿರಸಪ್ಪಯ್ಯನ ಮಠದ ಆವರಣದಿಂದ ಆರಂಭಗೊಂಡು ಸಾಹಿತ್ಯ ಭವನದವರೆಗೆ ಜರುಗಲಿದೆ. ನಂತರ 10.30 ಗಂಟೆಗೆ ನಗರದ ಸಾಹಿತ್ಯ ಭವನದಲ್ಲಿ ನಡೆಯಲಿರುವ ವೇದಿಕೆ ಸಮಾರಂಭದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಭಾವಚಿತ್ರಕ್ಕೆ ಪೂಜೆ, ವಿಶೇಷ ಉಪನ್ಯಾಸ ಸೇರಿದಂತೆ ಇತರೆ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಅಂಬಿಗರ ಚೌಡಯ್ಯ ಜಯಂತಿಯನ್ನು ಅರ್ಥಪೂರ್ಣ ಮತ್ತು ಅದ್ದೂರಿಯಾಗಿ ಆಚರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ ಎಲ್ಲ ಗಣ್ಯರಿಗೆ ಆಹ್ವಾನ ನೀಡಬೇಕು. ಕೆಲಸ ಹಂಚಿಕೆ ಮಾಡಿದಂತೆ ಆಯಾ ಇಲಾಖೆಗಳ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಸಿದ್ದತೆ ಮಾಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿ ದಿನದಂದು, ಸಾಹಿತ್ಯ ಭವನ ಮತ್ತು ರಸ್ತೆ ಸ್ವಚ್ಛತೆ, ಮೆರವಣಿಗೆಯಲ್ಲಿ ಹಾಗೂ ವೇದಿಕೆ ಸಮಾರಂಭದಲ್ಲಿ ಪಾಲ್ಗೊಳ್ಳುವ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಕೈಗೊಳ್ಳಬೇಕು. ಈ ಜಯಂತಿಯನ್ನು ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳು, ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಆಚರಿಸುವಂತಾಗಬೇಕು. ಕಾರ್ಯಕ್ರಮಗಳ ಯಶಸ್ವಿಗೆ ಎಲ್ಲಾ ಸಮಾಜದ ಮುಖಂಡರು, ಸಾರ್ವಜನಿಕರು ಸಹಕರಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ್, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ನಾಗರಾಜ, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಪುಷ್ಪಲತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ್, ಸಮಾಜದ ಮುಖಂಡರಾದ ಸೋಮಣ್ಣ, ಹುಲುಗಪ್ಪ ಬಾರಕೇರ್, ರಮೇಶ್ ಕಬ್ಬೇರ್, ರಾಜು ಕಲಿಗಾರ, ಉದಯ ಕಬ್ಬೇರ್, ಶಿವಪ್ಪ ಕಬ್ಬೇರ್, ಪ್ರವೀಣ, ಹನುಮಂತಪ್ಪ ಗಿಡ್ಡಾಲಿ ಹಾಗೂ ಮತ್ತಿತರರು ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ.**

ಪಟ್ಟಣದ ಬಾಲಾಜಿ ಮಂದಿರದಲ್ಲಿ ಬೆಳಿಗ್ಗೆ 10 ಗಂ–ಟೆಗೆ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗಡೆಯವರ ಹಾಗೂ ಡಾ. ಹೇಮಾವತಿ ಹೆಗಡೆಯವರ ಶುಭ ಆಶೀರ್ವಾದಗಳೊಂದಿಗೆ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮ ನಡೆಯಲಿದೆ. ಉದ್ಘಾಟಕರಾಗಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಡಾ. ಗೀತಾ ಈಶ್ವರ್ ಖಂಡ್ರೆ, ಅಧ್ಯಕ್ಷತೆಯನ್ನು ವೈದ್ಯರಾದ ಡಾ. ಶೈಲಜಾ ತಳವಾಡೆ, ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಪ ನಿರ್ದೇಶಕರಾದ ಮುರುಳಿಧರ ಹೆಚ್. ಎಲ್, ಹಿರಿಯ ಉದ್ಯಮಿಗಳಾದ ಸೋಮನಾಥಪ್ಪ ಅಸ್ಟೂರೆ, ನಿವೃತ್ತ ಪ್ರಾಂಶುಪಾಲರಾದ ಡಾ. ರೇಖಾ ಮಹಾಜನ್ ಪಾಲ್ಗೊಳ್ಳುವವರಿದ್ದಾರೆ. ಈ ಕಾರ್ಯಕ್ರಮದಲ್ಲಿ ಮಕ್ಕಳಲ್ಲಿ ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಸಂಸ್ಕಾರ ಬೆಳೆಸುವಲ್ಲಿ ಹೆತ್ತವರ ಪಾತ್ರದ ಕುರಿತು ವಿಚಾರಗೋಷ್ಠಿ ನಡೆಯಲಿದೆ. ಜ್ಞಾನವಿಕಾಸ ಕೇಂದ್ರದ ಸದಸ್ಯರಿಂದ ಸಂಸ್ಕೃತಿ ಕಾರ್ಯಕ್ರಮ ಮತ್ತು ರಂಗೋಲಿ ಸ್ಪರ್ಧೆ ನಡೆಯಲಿದೆ. ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ ನ ಯೋಜನಾಧಿಕಾರಿಯಾಗಿ ಸಂತೋಷ ಟಿ .ಎನ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಳ್ಳಾರಿ ಜಿಲ್ಲಾಮಟ್ಟದ ಪ್ರತಿಭಟನಾ ಸಮಾವೇಶದಲ್ಲಿ ಪೋಷಕರ ಘೋಷಣೆ

# ಜೀವ ಕೊಟ್ಟೇವು ರಾಜ್ಯದಲ್ಲಿ ಸರ್ಕಾರಿ ಶಾಲೆ ಮುಚ್ಚಲು ಬಿಡುವುದಿಲ್ಲ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

KPS-Magnet ಯೋಜನೆ ವಿರೋಧಿಸಿ ಬಳ್ಳಾರಿಯಲ್ಲಿ AIDSO ವಿದ್ಯಾರ್ಥಿ ಸಂಘಟನೆಯಿಂದ ಬೃಹತ್ ಪ್ರತಿಭಟನಾ ರ್‍ಯಾಲಿ ನಗರದ ಗಾಂಧಿ ಭವನದಿಂದ ಈಡಿಗ ಕಾಂಪ್ಲೆಕ್ಸ್, ರಾಯಲ್ ಸರ್ಕಲ್ ಮೂಲಕ ಗಾಂಧಿ ಭವನ ತಲುಪಿ ಸಮಾವೇಶದಲ್ಲಿ ನೆರೆದಿದ್ದ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ನಾಯಕರು, ನಾಗರಿಕರು, ಪಾಲಕರು ಹಾಗೂ ವಿದ್ಯಾರ್ಥಿಗಳು ರಾಜ್ಯ ಸರ್ಕಾರದ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಮಾವೇಶದ ಮುಖ್ಯ ಭಾಷಣಕಾರರಾಗಿ ೦ಖಆಖಔ ರಾಜ್ಯ ಖಜಾಂಚಿಗಳಾದ ಸುಭಾಷ್ ಬೆಟ್ಟದ ಕೊಪ್ಪ ರವರು ಮಾತನಾಡಿ, " ಕೆಪಿಎಸ್ ಮ್ಯಾಗ್ನೆಟ್ ಯೋಜನೆಯು 40,000 ಸರ್ಕಾರಿ ಶಾಲೆಗಳನ್ನು ಕೊಲ್ಲುತ್ತದೆ, ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಾರೆ ಆದ್ದರಿಂದ ಈ ಯೋಜನೆಯನ್ನು ಈ ಕೂಡಲೇ ಸರ್ಕಾರ ವಾಪಸು ತೆಗೆದುಕೊಳ್ಳಬೇಕೆಂದು ಅಗ್ರಹಿಸಿದರು. ಏಕಖ ಟಚಿರಟಜಣ ಶಾಲೆಯ ನಿರ್ವಹಣೆಯನ್ನು ಮತ್ತು ಸಂಪೂರ್ಣ ಹಣಕಾಸಿನ ವ್ಯವಸ್ಥೆಯನ್ನು ಆ ಶಾಲೆಗೆ ಮಾಡಿಕೊಳ್ಳು ತಕ್ಕದ್ದು ಎಂದು ಸರ್ಕಾರ ಆದೇಶ ಹೊರಡಿಸಿದೆ. ಸಾರಿಗೆ ವ್ಯವಸ್ಥೆಯನ್ನು ಪೋಷಕರೆ ನೋಡಿಕೊಳ್ಳಬೇಕೆಂದು ಹೇಳುತ್ತಿದ್ದಾರೆ.




ಗುಜರಾತಿನಲ್ಲಿ ಶಾಲೆಗಳ ವಿಲೀನ ದ ಹೆಸರಿನಲ್ಲಿ ಬಹುತೇಕ ಶಾಲೆಗಳ ವಿಲೀನ ಮಾಡಿದ ಮೇಲೆ 2,50,000 ಬಡಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ಹೋಗುವ ಮಕ್ಕಳಿಗೆ 6ನೇ ತರಗತಿಯಿಂದಲೇ ಮಣ್ಣಿನ ಹಣತೆ ಮಾಡುವ, ಅಡಿಕೆ ಸುಲಿಯುವ ಕೌಶಲ್ಯಗಳನ್ನು ಕಲಿಸುವುದಾಗಿ ಶಿಕ್ಷಣ ಮಂತ್ರಿಗಳು ಬಹಿರಂಗಪಡಿಸಿದ್ದಾರೆ. ಕಾರ್ಮಿಕರ, ರೈತರ ಮಕ್ಕಳನ್ನು ಶಿಕ್ಷಣದಿಂದ ವಂಚಿತರಾಗಿಸುವುದೇ ಸರ್ಕಾರದ ಹುನ್ನಾರವಾಗಿದೆ. ಆದ್ದರಿಂದ ನಮ್ಮೂರಿನ ಶಾಲೆಯನ್ನು ಉಳಿಸಲು ನಾವೇ ಮುಂದಾಗಬೇಕು ಪ್ರತಿಯೊಂದು ಹಳ್ಳಿಯಲ್ಲು ಪ್ರತಿರೋಧ ಚಳುವಳಿಯನ್ನು ಬೆಳೆಸಬೇಕೆಂದು ಕರೆ ನೀಡಿದರು. ಕರ್ನಾಟಕ ಮೆಡಿಕಲ್ ಅಸೋಸಿಯೇಷನ್ ಮಾಜಿ ರಾಜ್ಯ ಕಾರ್ಯದರ್ಶಿಗಳು ಬಳ್ಳಾರಿಯ ಖ್ಯಾತ ಯುರೋಲಾಜಿಸ್ಟ್ ಡಾ.ಗೋವರ್ಧನ್ ರೆಡ್ಡಿ ರವರು ಮಾತನಾಡುತ್ತಾ.., "ಪ್ರತಿಯೊಂದು ಹಳ್ಳಿಯಲ್ಲಿ ಸರ್ಕಾರಿ ಶಾಲೆ ಇರಬೇಕು, ಅಲ್ಲದೆ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇದ್ದು ಸಾಕಷ್ಟು ಸಮಸ್ಯೆಗಳಿವೆ. ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಈ ಸಮಸ್ಯೆಗಳನ್ನು ಸರಿಪಡಿಸುವ ಬದಲಾಗಿ ಪರ್ಯಾಯ ವ್ಯವಸ್ಥೆಯೇ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಎಂದು ಸರ್ಕಾರ ಹೇಳುತ್ತಿದೆ. ಇದು ಸರ್ಕಾರ ಶಿಕ್ಷಣ ನೀಡುವ ತನ್ನ ಜವಾಬ್ದಾರಿಯಿಂದ ನುಣಿಚಿಕೊಳ್ಳುತ್ತಿರುವ ಕ್ರಮವಾಗಿದೆ. ಈಗಾಗಲೇ ಆಯುಷ್ಮಾನ್ ಭಾರತ್, ಯಶಸ್ವಿನಿ ಸ್ಕೀಮ್ ನಂತಹ ಸರ್ಕಾರಿ ಯೋಜನೆಗಳಿಂದಾಗಿ ಆರೋಗ್ಯ ಕ್ಷೇತ್ರವು ಖಾಸಗಿಕರಣವಾಗಿ, ಇಡೀ ಆರೋಗ್ಯ ವ್ಯವಸ್ಥೆಯೇ ಕುಸಿದಿದೆ. ಅದೇ ರೀತಿ ಈ ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಜಾರಿಯಾಗಿ ಶಿಕ್ಷಣ ಖಾಸಗಿಕರಣವಾದಲ್ಲಿ ಬಡ ರೈತ ಕಾರ್ಮಿಕರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ".

ಸಮಾವೇಶದಲ್ಲಿ ಭಾಷಣಕಾರರಾಗಿ ಏ ಐಡಿಎ ರಾಜ್ಯ ಉಪಾಧ್ಯಕ್ಷರಾದ ಅಪೂರ್ವ ಸಿಎಂ ರವರು ಮಾತನಾಡುತ್ತಾ.., "ಸರ್ಕಾರದ ಅಂಕಿ ಅಂಶಗಳೇ ಹೇಳುವ ಪ್ರಕಾರ ನಮ್ಮ ರಾಜ್ಯದಲ್ಲಿ 60 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. 21,000 ಸರ್ಕಾರಿ ಶಾಲಾ ಕಟ್ಟಡಗಳು ಬೀಳುವ ಸ್ಥಿತಿಯಲ್ಲಿವೆ. 7,500 ಏಕೋಪಧ್ಯಾಯ ಶಾಲೆಗಳಿವೆ. 3500 ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಿಗೂ ಸಹ ಶೌಚಾಲಯಗಳಿಲ್ಲ. ಈ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯು ಈ ಸಮಸ್ಯೆಗಳ ಪರಿಹಾರದ ಕುರಿತು ಎಲ್ಲೂ ಮಾತನಾಡುವುದಿಲ್ಲ. ಕಾಂಗ್ರೆಸ್ ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು. ಒಂದು, ಕೆಲವರನ್ನು ಒಲಿಸುವ ರಾಜಕೀಯ ಮಾಡುತ್ತದೆ; ಇನ್ನೊಂದು, ದ್ವೇಷ ಹುಟ್ಟುಹಾಕುತ್ತದೆ. ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಲ್ಲಿ ಎರಡು ಪಕ್ಷಗಳು ಒಟ್ಟಿಗಿದ್ದಾರೆ. ಇಂದು ನಾವು ಯಾವುದೇ ಧರ್ಮ– ಜಾತಿಗಳ ಸಂಕೋಲೆಗಳಿಗೆ ಬಲಿಯಾಗದೆ ಕ್ರಾಂತಿಕಾರಿಗಳಾದ ರಾಮ್ ಪ್ರಸಾದ್ ಬಿಸ್ಮಿಲ್ ಮತ್ತು ಅಶ್ಫಾಕ್ ಉಲ್ಲಾಖಾನ್ ರ ಹೋರಾಟದ ಹಾದಿಯಲ್ಲಿ ಒಂದಾಗಿದ್ದೇವೆ. ಸರ್ಕಾವು ನಾಶಮಾಡಲು ಹೊರಟಿರುವ ನಮ್ಮ ಮುಂದಿನ ಪೀಳಿಗೆಯ ಭವಿಷ್ಯವನ್ನು ರಕ್ಷಿಸಲು ಮುಂದಾಗಿದ್ದೇವೆ. ಈ ಸಾರ್ವಜನಿಕ ಶಿಕ್ಷಣ ಉಳಿಸಿ ಹೋರಾಟವು ಇಡೀ ದೇಶಕ್ಕೆ ಮಾದರಿಯಾಗಲಿದೆ!" ಎಂದು ದೂರಿದರು.

ಸಮಾವೇಶದಲ್ಲಿ ಮುಖ್ಯ ಅತಿಥಿ ನಿವೃತ್ತ ಇಂಗ್ಲಿಷ್ ಶಿಕ್ಷಕರಾದ, ಉಪ್ಪಾರ್ ನರಸಣ್ಣ ಅವರು ಮಾತನಾಡಿ "ಇತಿಹಾಸದುದ್ದಕ್ಕೂ ಸಾವಿತ್ರಿಬಾಯಿ ಫುಲೆ, ಮಹಾತ್ಮ ಜ್ಯೋತಿರಾವ್ ಫುಲೆ, ಈಶ್ವರ ಚಂದ್ರ ವಿದ್ಯಾಸಾಗರ್ ರಂತಹ ಮಹನೀಯರು ಶಿಕ್ಷಣವು ಸಾರ್ವತ್ರಿಕವಾಗಬೇಕು ಎಂದು ಹೋರಾಡಿದರು. ಅವರ ನೈಜ ಉತ್ತರಾಧಿಕಾರಿಗಳಾದ ನಾವು ಆ ಹೋರಾಟವನ್ನು ಮುಂದುವರಿಸುವ ಸಮಯ ಬಂದಿದೆ." ಎಂದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ನಾಯಕರಾದ ಕೆ ಸೋಮಶೇಖರ್ ಗೌಡ ಅವರು ಮಾತನಾಡಿ "ಸರ್ಕಾರಿ ಶಾಲೆಗಳನ್ನು ಮುಚ್ಚುವ ನೀತಿಯನ್ನು ಈ ಹಿಂದೆ ಬಿಜೆಪಿ ಸರ್ಕಾರವು ಪ್ರಯತ್ನಿಸಿತ್ತು. ಇದನ್ನು ವಿರೋಧಿಸುತ್ತಲೇ ಅಧಿಕಾರಕ್ಕೆ ಬಂದ ಪ್ರಸ್ತುತ ಕಾಂಗ್ರೆಸ್ ಸರ್ಕಾರವು ಮತ್ತೆ ಈ ನೀತಿಯನ್ನು ಇನ್ನಷ್ಟು ಕರಾಳ ಮಾದರಿಯಲ್ಲಿ ಜಾರಿಗೊಳಿಸುತ್ತಿದೆ. ಈ ವಿಷಯದಲ್ಲಿ ಎಲ್ಲ ರಾಜಕೀಯ ಪಕ್ಷಗಳು ಸಹ ಶಾಮಿಲ್ ಆಗಿದ್ದಾರೆ" ಎಂದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಸಮಾವೇಶದ ಅಧ್ಯಕ್ಷತೆಯನ್ನು ಎಐಡಿಎ ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ, ಕಂಬಳಿ ಮಂಜುನಾಥ ವಹಿಸಿದ್ದರು. ಪ್ರಾಸ್ತಾವಿಕವಾಗಿ ಬಳ್ಳಾರಿ ಜಿಲ್ಲಾಧ್ಯಕ್ಷರಾದ ಕೆ.ಈರಣ್ಣ ಮಾತನಾಡಿದರು. ಬಳ್ಳಾರಿ ಸರ್ಕಾರಿ ಶಾಲೆಗಳ ಸಾರ್ವಜನಿಕ ಶಿಕ್ಷಣ ಉಳಿಸಿ ಪೋಷಕರ ಸಮಿತಿಯ ನಾಯಕರಾದ, ಸುಂಕಪ್ಪ, ಬಸವರಾಜ್, ನಾಗರಾಜ, ಪಾರ್ವತಿ, ಹನುಮಂತಮ್ಮ, ಕುಮಾರಪ್ಪ, ಗಾದಲಿಂಗ, ಚಂದ್ರಶೇಖರ್, ನೀಲಮ್ಮ, ರಾಮು, ಗಾಳೆಪ್ಪ, ಖಂಡೆಪ್ಪ, ನಾಗಮ್ಮ, ರುದ್ರಮ್ಮ, ವಸಂತ್, ಒಳಗೊಂಡಂತೆ ಬಿಸಲಹಳ್ಳಿ, ಬೇವಿನಹಳ್ಳಿ, ಕಕ್ಕಬೇವಿನಹಳ್ಳಿ, ಅಮರಾಪುರ, ತೆಗ್ಗಿನಬೂದಿಹಾಳ್, ಅಸುಂಡಿ, ಎತ್ತಿನಬೂದಿಹಾಳ್, ಯಾಳ್ಪಿ, ಬಿ.ಗೋನಾಳ್, ಕೊರ್ಲಗುಂದಿ, ಗುಡಾರ್ ನಗರ, ಹಾಗಲೂರು, ಬಿ.ಗೋನಾಳು ಸೇರಿದಂತೆ ವಿವಿಧ ಹಳ್ಳಿಗಳಿಂದ ಪಾಲಕರು ಹಾಗೂ ನಾಗರಿಕರು, ಯುವಕರು ಸೇರಿ ಈ ಸರ್ಕಾರದ ಈ ಶಿಕ್ಷಣ–ವಿರೋಧಿ ನೀತಿಯನ್ನು ವಿರೋಧಿಸಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಸರ್ಕಾರವು ಯೋಜನೆಯನ್ನು ಹಿಂಪಡೆದು ಅಧಿಕೃತವಾಗಿ ಆದೇಶ ಹೊರಡಿಸುವವರೆಗೂ ಈ ಹೋರಾಟ ಮುಂದುವರೆಯುತ್ತದೆ ಹಾಗೂ ಜಿಲ್ಲೆಯ ಮೂಲೆ ಮೂಲೆಗೂ ಪ್ರತಿರೋಧ ಚಳುವಳಿಯಾಗಿ ಹಬ್ಬುತ್ತದೆ ಎಂಬ ದೃಢ ಸಂಕಲ್ಪದೊಂದಿಗೆ ಸಮಾವೇಶವು ನಡೆಯಿತು.

## ಮಾಧ್ಯಮ ಪ್ರತಿನಿಧಿಗಳಿಗೆ ವಾರ್ತಾಲಾಪ



• ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:

ಭಾರತ ಸರ್ಕಾರದ ವಾರ್ತಾ ಶಾಖೆ (ಪಿಐಬಿ) ಬೆಂಗಳೂರು ಹಾಗೂ ಬಳ್ಳಾರಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಕುರಿತು ಮಾಧ್ಯಮ ಪ್ರತಿನಿಧಿಗಳಿಗಾಗಿ 'ವಾರ್ತಾಲಾಪ' ಕಾರ್ಯಾಗಾರವನ್ನು ಇಂದು ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ಕಚೇರಿಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಾಗಾರದಲ್ಲಿ ಕೇಂದ್ರ ಸರ್ಕಾರದ ವಿವಿಧ ಮಹತ್ವದ ಯೋಜನೆಗಳು, ನೂತನ ಕಾನೂನುಗಳು ಹಾಗೂ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ಕುರಿತು ತಜ್ಞರಿಂದ ಮಾಹಿತಿ ನೀಡಲಾಗಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನಪರ ಯೋಜನೆಗಳ ಸಮಗ್ರ ಮಾಹಿತಿ ಮಾಧ್ಯಮದ ಮೂಲಕ ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 11.30ರಿಂದ ಮಧ್ಯಾಹ್ನ 1.30ರವರೆಗೆ ನಡೆಯುವ ಮೊದಲ ಅಧಿವೇಶನದಲ್ಲಿ ವಿಕಸಿತ ಭಾರತ, ನೂತನ ಕಾರ್ಮಿಕ ಕಾನೂನುಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಗಳ ಅನುಷ್ಠಾನ ಹಾಗೂ ಸ್ವನಿಧಿ ಯೋಜನೆಗಳ ಕುರಿತು ಉಪನ್ಯಾಸಗಳು ನಡೆಯಲಿವೆ.

ಮಧ್ಯಾಹ್ನ 2ರಿಂದ 3.30ರವರೆಗೆ ನಡೆಯುವ ಎರಡನೇ ಅಧಿವೇಶನದಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023, ಭಾರತೀಯ ನ್ಯಾಯ ಸಂಹಿತೆ–2023 ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ–2023 ಸೇರಿದಂತೆ ಕಾನೂನು ಸುಧಾರಣೆಗಳ ಕುರಿತು ವಿವರಿಸಲಾಗುವುದು. ಜೊತೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕೃಷಿ ಮತ್ತು ತೋಟಗಾರಿಕಾ ವಲಯ, ಹಾಗೂ ಹಣಕಾಸು ಸುರಕ್ಷತೆ ಮತ್ತು ಆರ್ಥಿಕ ಸಬಲೀಕರಣ ವಿಷಯಗಳನ್ನೂ ಒಳಗೊಂಡಿರಲಿದೆ.

## ಸ್ಥಳ ಪರಿಶೀಲನೆ ನಡೆಸಿದ ನೂತನ ಎಸ್ಪಿ ಸುಮನ್ ಪನ್ನೇಕರ್



• ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:

ಬ್ಯಾನರ್ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ನೂತನ ಪೊಲೀಸ್ ವರಿಷ್ಠಾಧಿಕಾರಿ (ಎಸ್ಪಿ) ಸುಮನ್ ಪನ್ನೇಕರ್ ಅವರು ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಜನಾರ್ದನ ರೆಡ್ಡಿ ಅವರ ಮನೆಯ ಸುತ್ತಮುತ್ತಲಿನ ಪ್ರದೇಶದಲ್ಲೂ ಎಸ್ಪಿ ಪರಿಶೀಲನೆ ಕೈಗೊಂಡರು. ಈ ವೇಳೆ ಮಾತನಾಡಿದ ಎಸ್ಪಿ ಸುಮನ್ ಪನ್ನೇಕರ್, "ನಿನ್ನೆಯಷ್ಟೇ ನಾನು ಬಳ್ಳಾರಿಗೆ ಆಗಮಿಸಿದ್ದೇನೆ. ಘಟನೆಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿಯನ್ನು ಪಡೆಯುತ್ತಿದ್ದೇನೆ" ಎಂದು ತಿಳಿಸಿದರು. ಬ್ಯಾನರ್ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿ ಇದುವರೆಗೆ ಆರು ಪ್ರಕರಣಗಳನ್ನು ದಾಖಲಿಸಲಾಗಿದ್ದು, 26 ಜನರನ್ನು ಬಂಧಿಸಲಾಗಿದೆ ಎಂದು ಹೇಳಿದರು. ಸದ್ಯ ಸ್ಥಳ ಪರಿಶೀಲನೆ ನಡೆಯುತ್ತಿದ್ದು, ತನಿಖೆಯನ್ನು ಗಂಭೀರವಾಗಿ ಕೈಗೊಳ್ಳಲಾಗಿದೆ ಎಂದರು. "ಈ ಪ್ರಕರಣದಲ್ಲಿ ನನ್ನಲ್ಲಿಯೂ ಸಾಕಷ್ಟು ಪ್ರಶ್ನೆಗಳಿವೆ. ಎಲ್ಲ ಅಂಶಗಳ ಕುರಿತು ಶೀಘ್ರದಲ್ಲೇ ಸ್ಪಷ್ಟ ಉತ್ತರ ನೀಡುತ್ತೇನೆ" ಎಂದು ಎಸ್ಪಿ ಸುಮನ್ ಪನ್ನೇಕರ್ ಹೇಳಿದರು.

## ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ

• ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:

ಜೆಎಸ್‌ಡಬ್ಲ್ಯೂ ಫೌಂಡೇಶನ್ ಬೆಂಬಲದೊಂದಿಗೆ 'ಅಂಧತ್ವ ಮುಕ್ತ ಬಳ್ಳಾರಿ ' ಉಪಕ್ರಮದ ಭಾಗವಾಗಿ ತೋರಣಗಲ್ಲು ಜಿಂದಾಲ್ ಸಂಜೀವಿನಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯು ಗುರುವಾರ ಒಂದೇ ದಿನದಲ್ಲಿ 19 ರೋಗಿಗಳಿಗೆ ಯಶಸ್ವಿಯಾಗಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ನಡೆಸುವ ಮೂಲಕ ವೈದ್ಯಕೀಯ ಸಂಪನ್ಮೂಲಗಳ ಸಮರ್ಪಕ ಬಳಕೆಗೆ ಮಾದರಿಯಾಗಿದೆ. ಈ ವರ್ಷ ಗ್ರಾಮೀಣ ಆರೋಗ್ಯ ಶಿಬಿರ ಹಾಗೂ ದೃಷ್ಟಿ ತಪಾಸಣಾ ಶಿಬಿರಗಳಲ್ಲಿ ಗುರುತಿಸಲಾದ ಒಟ್ಟು 107 ರೋಗಿಗಳಿಗೆ ಆಸ್ಪತ್ರೆಯಲ್ಲಿ ಉಚಿತ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

ಶಿಬಿರಗಳಲ್ಲಿ ಶಿಫಾರಸ್ಸು ಕಾರ್ಡ್‌ಗಳನ್ನು ಪಡೆದ ರೋಗಿಗಳಿಗೆ ಆಸ್ಪತ್ರೆಯಲ್ಲಿ ಆಹಾರ, ವಸತಿ ಸೇರಿದಂತೆ ಸಂಪೂರ್ಣ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಯಿತು. ಕಣ್ಣಿನ ಪೊರೆ ಚಿಕಿತ್ಸೆಗೆ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಎಬಿ ಸ್ಕ್ಯಾನ್ (ABScan) ತಂತ್ರಜ್ಞಾನ ಬಳಸಲಾಗುತ್ತಿದ್ದು, ಇದು ಶೇಕಡಾ 100% ರಷ್ಟು ನಿಖರತೆಯನ್ನು ನೀಡುತ್ತದೆ. ಚಿಕಿತ್ಸೆ ಪಡೆದ ಎಲ್ಲರೂ ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬಗಳಿಗೆ ಸೇರಿದವರಾಗಿದ್ದು, ಸಂಪೂರ್ಣ ವೆಚ್ಚವನ್ನು ಜೆಎಸ್‌ಡಬ್ಲ್ಯೂ ಫೌಂಡೇಶನ್ ಭರಿಸಿದೆ.

ಚಿಕಿತ್ಸೆ ಪಡೆದವರಲ್ಲಿ ಕುಡುತಿನಿ ಗ್ರಾಮದ ಖಾಸಗಿ ಶಾಲಾ ಶಿಕ್ಷಕಿ ಉಮಾ ಮಹೇಶ್ವರಿ (43) ಕಳೆದ ನಾಲ್ಕು ತಿಂಗಳಿಂದ ಮಸುಕಾದ



ದೃಷ್ಟಿಯಿಂದ ಬಳಲುತ್ತಿದ್ದರು. ಶಸ್ತ್ರಚಿಕಿತ್ಸೆಯ ಬಳಿಕ ಅವರು, "ಇದೀಗ ಸ್ಪಷ್ಟವಾಗಿ ಕಾಣುತ್ತಿದೆ. ಮತ್ತೆ ಆತ್ಮವಿಶ್ವಾಸದಿಂದ ಪಾಠ ಮಾಡಬಹುದು. ಜೆಎಸ್‌ಡಬ್ಲ್ಯೂಗೆ ಧನ್ಯವಾದಗಳು," ಎಂದು ಸಂತಸ ವ್ಯಕ್ತಪಡಿಸಿದರು.

## ಉತ್ತಮ ಆರೋಗ್ಯಕ್ಕಾಗಿ ಕುಸುಬೆ ಎಣ್ಣೆ

## ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ಪ್ರಾತ್ಯಕ್ಷಿಕೆ



• ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:

ಉತ್ತಮ ಆರೋಗ್ಯಕ್ಕಾಗಿ ಕುಸುಬೆ ಎಣ್ಣೆಕಾಳು ಬೆಳೆಯಾಗಿದ್ದು, ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ಪ್ರಾತ್ಯಕ್ಷಿಕೆಗಳ ಮೂಲಕ ರೈತರಿಗೆ ಅರಿವು ಮೂಡಿಸಲಾಗಿದೆ.

ಕುಸುಬೆ ನಮ್ಮ ರಾಜ್ಯದ ಒಂದು ಪ್ರಮುಖ ಎಣ್ಣೆಕಾಳು ಬೆಳೆಯಾಗಿದೆ. ನೆಲಗಡಲೆ ಹಾಗೂ ಸೂರ್ಯಕಾಂತಿ ನಂತರ ಹಿಂಗಾರಿನಲ್ಲಿ ಬರುವ ಮುಖ್ಯ ಎಣ್ಣೆಕಾಳು ಬೆಳೆ ಎಂದರೆ ಕುಸುಬೆ. ಈ ಬೆಳೆಯನ್ನು ಉತ್ತರ ಕರ್ನಾಟಕ ಭಾಗದಲ್ಲಿ ಆಳವಾದ ಕಪ್ಪುಮಣ್ಣಿನಲ್ಲಿ ಬೆಳೆಯಲು ಸೂಕ್ತವಾಗಿದ್ದು, ಕಡಿಮೆ ಅವಧಿಯಲ್ಲಿ ಉತ್ತಮ ಆದಾಯ ಕೊಡುವ ಬೆಳೆಯಾಗಿದೆ.

ಗುಜರಾತ, ಮಹಾರಾಷ್ಟ್ರ, ಬಿಹಾರ ರಾಜ್ಯಗಳಲ್ಲಿ ಕರಾಡಿ ಎಂಬ ಹೆಸರಿನಲ್ಲಿ ಈ ಬೆಳೆ ಖ್ಯಾತಿ ಹೊಂದಿದೆ. ಸೂರ್ಯಕಾಂತಿ ಎಣ್ಣೆಕ್ಕಿಂತಲೂ ಆರೋಗ್ಯಕ್ಕೆ ಅದರಲ್ಲೂ, ಹೃದಯ ಸಂಬಂಧಿ ಆರೋಗ್ಯಕ್ಕೆ ಕುಸುಬೆ ಎಣ್ಣೆ ಅತ್ಯುತ್ತಮವಾಗಿದೆ. ಕುಸುಬೆ ಹಿಂಡಿಯುಕೂಡ ಜಾನುವಾರುಗಳಿಗೆ ಪ್ರಯೋಜನಕಾರಿಯಾಗಿದೆ. ಮಳೆಯ ಆಶ್ರಯದಲ್ಲಿ ಉತ್ತಮವಾಗಿ ಬರುವ ಈ ಬೆಳೆ ನೀರಾವರಿ ಇದ್ದಲ್ಲಿ ಉತ್ತಮ ನಿರ್ವಹಣೆಯೊಂದಿಗೆ ಹೆಚ್ಚಿನ ಲಾಭಕೊಡಬಲ್ಲದು. ಮಳೆ ಆಶ್ರಯದಲ್ಲಿ ಕಡಿಮೆ ಗೊಬ್ಬರಗಳ ಬಳಕೆಯಲ್ಲಿ, ಕಡಿಮೆ ಖರ್ಚಿನಲ್ಲಿ ಈ ಬೆಳೆಯನ್ನು ಬೆಳೆಯಬಹುದಾಗಿದೆ. ಕೊಪ್ಪಳ ಜಿಲ್ಲೆಯಾದ್ಯಂತ ಸುಮಾರು 3000 ಎಕರೆ ಪ್ರದೇಶದಲ್ಲಿ ಕುಸುಬೆಯನ್ನು ಬೆಳೆಯಲಾಗುತ್ತಿದ್ದು, ಕುಕನೂರು ತಾಲೂಕಿನಲ್ಲಿ ಸುಮಾರು 1000 ಎಕರೆಯಷ್ಟು ಪ್ರದೇಶದಲ್ಲಿ ಎರೆ ಭೂಮಿಯಲ್ಲಿ ಬೆಳೆಯಲಾಗುತ್ತಿದೆ. ಈ ನಿಟ್ಟಿನಲ್ಲಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳದಿಂದ ಆಯ್ದ ರೈತರಿಗೆ ಕುಸುಬೆ ಬೆಳೆ (ತಳಿ :ಐ.ಎಸ್.ಎಫ್. 764) ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಎರೆಹಂಚಿನಾಳ ಹಾಗೂ ಮಾದಿನೂರು ಗ್ರಾಮಗಳಲ್ಲಿ ಹಮ್ಮಿಕೊಳ್ಳಾಗಿದ್ದು, ರೈತರಿಂದ ಉತ್ತಮ ಪ್ರತಿಕ್ರಿಯೆ ಬಂದಿರುತ್ತದೆ.

ಎಕರೆಗೆ ಬೀಜ ಪ್ರಮಾಣ 3 ರಿಂದ 4 ಕಿಲೋ ಗ್ರಾಂ. ಇದ್ದು, ಸೆಪ್ಟೆಂಬರ್ 15 ರಿಂದ ಅಕ್ಟೋಬರ್ 15ನೇ ತಾರೀಖಿನವರೆಗೂ ಬೀಜ ಬಿತ್ತನೆ ಮಾಡುವುದು ಸೂಕ್ತ. ಎಕರೆಗೆ 16 ಕೆ.ಜಿ. ಸಾರಜನಕ, 16 ಕೆ.ಜಿ. ರಂಜಕ ಹಾಗೂ 5 ಕೆ.ಜಿ. ಪೊಟ್ಯಾಶ್ ರಾಸಾಯನಿಕ ಗೊಬ್ಬರಗಳ ಜೊತೆಗೆ 10 ಕೆ.ಜಿ. ಗಂಧಕ ಮತ್ತು 6 ಕೇ.ಜಿ. ಎಷ್ಟು ಸತು ಒದಗಿಸಿದರೆ ಉತ್ತಮ ಫಸಲು ಪಡೆಯುವ ಸಾಧ್ಯತೆ ಇರುತ್ತದೆ. ಗಂಧಕವನ್ನು ಜಿಪ್ಸಂ ರೂಪದಲ್ಲಿ ಕಡಿಮೆ ಖರ್ಚಿನಲ್ಲಿ ಕೊಡಬಹುದಾಗಿದೆ. ಬೀಜೋಪಚಾರವಾಗಿ ಒಂದು ಎಕರೆ ಬಿತ್ತನೆ ಬೀಜಕ್ಕೆ 200 ಗ್ರಾಂ. ಅಜೋಸ್ಪಿರಿಲಂ ಬಳಸುವುದು ಸೂಕ್ತ. ಇದಕ್ಕೆ ಪೂರ್ವದಲ್ಲಿ ಬೀಜಗಳನ್ನು ಶೇಕಡ 2ರ ಕ್ಯಾಲ್ಸಿಯಂ ಕ್ಲೋರೈಡ್ ದ್ರಾವಣದಲ್ಲಿ 12 ಗಂಟೆಗಳ ಕಾಲ ನೆನೆಸಿ ಬಿತ್ತನೆ ಮಾಡುವುದು ಸೂಕ್ತ. ಸಾಲಿನಿಂದ ಸಾಲಿಗೆ 45 ಸೆಂಟಿಮೀಟರ್ ಮತ್ತು ಬೀಜದಿಂದ ಬೀಜಕ್ಕೆ 30 ಸೆಂಟಿಮೀಟರ್ ಅಂತರದಲ್ಲಿ ಜೋಡು ಸಾಲು ಮಾಡಿ ಬಿತ್ತುವುದು ಉತ್ತಮ. ತಳಿಗಳನ್ನು ಆಧರಿಸಿ 120 ರಿಂದ 130 ದಿನಗಳಲ್ಲಿ ಕಟಾವಿಗೆ ಬರುವ ಕುಸುಬೆ ಬೆಳೆ ಒಂದು ಲಾಭದಾಯಕ ಮಳೆಯಾಶ್ರಿತ ಬೆಳೆಯಾಗಿದೆ. ಎಕರೆಗೆ 3 ರಿಂದ 5 ಕ್ವಿಂಟಲ್ ಇಳುವರಿ ಪಡೆಯಬಹುದಾಗಿದ್ದು, ಸದ್ಯದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ 8600 ರೂ. ಇರುತ್ತದೆ.

*ಪ್ರಮುಖ ಕೀಟಗಳು:* ಕರಿ ಹೇನು– ಇದರ ಹತೋಟಿಗಾಗಿ ಡೈಮೆಥೊಯೇಟ್ 30 ಈ.ಸಿ ಎನ್ನುವ ಕೀಟನಾಶಕವನ್ನು 1.7 ಮಿ.ಲಿ. ಪ್ರತಿ ಲೀಟರ್ ನೀರಿಗೆ ಬಳಸಿ ಸಿಂಪಡಿಸಬೇಕು. ಎಲೆ ತಿನ್ನುವ ಕೀಟ ಕಾಣಿಸಿದಲ್ಲಿ ಕ್ವಿನಾಲ್ಫಾಸ್ 25 ಇ.ಸಿ. ಅಥವಾ ಇಮಾಮ್ಯಾಕ್ಟಿನ್ ಬೆಂಝೋಯೇಟ್ ಎನ್ನುವ ಕೀಟನಾಶಕವನ್ನು 0.40 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಪ್ರಮುಖ ರೋಗಗಳಾದ ಎಲೆ ಮಚ್ಚೆ ಮತ್ತು ಎಲೆ ಚುಕ್ಕಿ ರೋಗಗಳು ಕಂಡುಬಂದಲ್ಲಿ ಮ್ಯಾಂಕೋಜೆಮ್ 75 ಡಬ್ಲ್ಯೂ. ಪಿ. 2 ಗ್ರಾಂ ಅಥವಾ ಸಾಫ್ ಎನ್ನುವ ಸಂಯುಕ್ತ ಶಿಲೀಂದ್ರ ನಾಶಕವನ್ನು 2 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಹೆಚ್ಚಿನ ನಿರ್ವಹಣೆ ಇಲ್ಲದ ಈ ಬೆಳೆ ಬೇಸಿಗೆ ಹಂಗಾಮಿನಲ್ಲಿ, ಮಳೆಯಾಶ್ರಯದಲ್ಲಿ ಉತ್ತಮ ಲಾಭದಾಯಕ ಬೆಳೆಯಾಗಿದ್ದು, ರೈತರು ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಜ್ಞಾನಿಗಳಾದ ವಿಸ್ತರಣಾ ಮುಂದಾಳು ಡಾ.ಎಂ.ವಿ.ರವಿ ಮೊ.ನಂ. 9480247745 ಮತ್ತು ಸಹಾಯಕ ಪ್ರಾಧ್ಯಾಪಕ ವಾಮನಮೂರ್ತಿ ಮೊ.ನಂ. 8217696837, ಇವರನ್ನು ಸಂಪರ್ಕಿಸಬಹುದು.

## ನೃತ್ಯ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದ ಕೌಶಿಕ್

• ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:



ಕುಚುಪುಡಿ ನೃತ್ಯ ಸ್ಪರ್ಧೆಯಲ್ಲಿ ಇಲ್ಲಿನ 4ನೇ ತರಗತಿಯ ವಿದ್ಯಾರ್ಥಿ ಪ್ರಾರ್ಥನಾ ಕೌಶಿಕ್ ಧಾರವಾಡ ಅವರು ಮೊದಲ ಸ್ಥಾನ ಪಡೆದು ದಾಖಲೆ ನಿರ್ಮಿಸಿದ್ದಾರೆ.

ಭಾರತ್ ಆರ್ಟ್ಸ್ ಆಕಾಡೆಮಿ ವತಿಯಿಂದ ಹೈದ್ರಾಬಾದ್ ನಗರದ ಗಚಿಬೌಲಿ ಕ್ರೀಡಾಂಗಣದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ನೃತ್ಯ ಸ್ಪರ್ಧೆಯಲ್ಲಿ 9ನೇ ವರ್ಷದ 4ನೇ ತರಗತಿಯ ಬಾಲಕಿ ಪ್ರಾರ್ಥನಾ ಕೌಶಿಕ್ ಧಾರವಾಡ ಅವರು , ಬಳ್ಳಾರಿಯಿಂದ ಭಾಗವಹಿಸಿ ಮೊದಲನೇ ಸ್ಥಾನ ಪಡೆದು ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಪ್ರವೀಣ್ ಕುಮಾರ್, ಬಿ.ಸುಮನ ಬಾಯಿ ಅವರ ಪುತ್ರಿ, ಸೆಂಟ್ ಫಿಲೋಮಿನಾ ಶಾಲೆಯ ವಿದ್ಯಾರ್ಥಿ, ಪ್ರಾರ್ಥನಾ ಕೌಶಿಕ್ ಧಾರವಾಡ ಅವರಿಗೆ ಆಯೋಜಕರು ಪ್ರಮಾಣ ಪತ್ರ ಹಾಗೂ ಪ್ರಶಸ್ತಿ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಅನೇಕ ಗಣ್ಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಅತ್ಯಂತ ಚಿಕ್ಕ ವಯಸ್ಸಿನ ಬಾಲಕಿ ಸಾಧನೆಗೆ ಪಾಲಕರು, ಶಾಲೆಯ ಆಡಳಿತ ಮಂಡಳಿಯವರು, ಹರ್ಷ ವ್ಯಕ್ತಪಡಿಸಿದ್ದಾರೆ. ಪ್ರಾರ್ಥನಾ ಕೌಶಿಕ್ ಧಾರವಾಡ ಅವರು ಇಲ್ಲಿನ ಶ್ರೀ ಲಕ್ಷ್ಮಿ ಕಲಾ ಕ್ಷೇತ್ರ ಬಳ್ಳಾರಿಯಲ್ಲಿ ಜಿಲಾನಿ ಭಾಷಾ ಅವರಿಂದ ತರಬೇತಿ ಪಡೆದಿದ್ದಾಳೆ.

## ಹುಲಿಗಣತಿಗಾಗಿ ಅರಣ್ಯದೊಳಗೆ ತೆರಳಿದ ಇಲಾಖೆ ಸಿಬ್ಬಂದಿಗಳು ತಜ್ಞರು

ಅಂಕೋಲಾ : ರಾಜ್ಯದಲ್ಲಿ ಈಗ ಹುಲಿ ಗಣತಿ ಆರಂಭಗೊಂಡಿದ್ದು, ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಈಗ ಕಾಡಿನಲ್ಲಿ ಹುಲಿಯ ಹೆಜ್ಜೆಯನ್ನು ಅರಸಿ ಹೋಗುವಂತಾಗಿದೆ. ಪ್ರಮುಖವಾಗಿ ಹಗಲಿನಲ್ಲಿ ಹುಲಿಗಣತಿಗೆ ತೆರಳಿದರೆ ಅದು ಕಣ್ಣಿಗೆ ಕಾಣಿಸುವುದಿಲ್ಲ. ಆದರೆ ಹೆಜ್ಜೆ ಮತ್ತು ಹಿಕ್ಕೆಯಿಂದ ಗುರುತಿಸಲು ಸಾಧ್ಯ. ಹೀಗಾಗಿ ಸಿಬ್ಬಂದಿಗಳು ಕೂಡ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡು ಕಾಡಿನೊಳಗೆ ತೆರಳಬೇಕಾಗಿದೆ.



ಅಂತಾರಾಷ್ಟ್ರೀಯ ಹುಲಿ ದಿನವನ್ನು ಪ್ರತಿ ವರ್ಷ ಜುಲೈ 29 ರಂದು ಪ್ರಪಂಚದಾದ್ಯಂತ ಆಚರಿಸಲಾಗುತ್ತದೆ. ಹುಲಿಗಳ ಸಂರಕ್ಷಣೆಯ ಮಹತ್ವದ ಬಗ್ಗೆ ಜನರಿಗೆ, ಸಂಘ–ಸಂಸ್ಥೆಗಳಿಗೆ ಮತ್ತು ಸರಕಾರಗಳಿಗೆ ಜಾಗೃತಿ ಮೂಡಿಸುವುದು ಈ ದಿನಾಚರಣೆಯ ಉದ್ದೇಶ. ವಿಶ್ವ ವನ್ಯಜೀವಿ ನಿಧಿಯ ಪ್ರಕಾರ, ಕಳೆದ 150 ವರ್ಷಗಳಲ್ಲಿ ಹುಲಿಗಳ ಜನಸಂಖ್ಯೆಯು ಸರಿಸುಮಾರು 95 ಪ್ರತಿಶತದಷ್ಟು ಕಡಿಮೆಯಾಗಿದೆ.

ವಿಶ್ವದ ಶೇ 70 ರಷ್ಟು ಹುಲಿ ಭಾರತದಲ್ಲಿ : ವಿಶ್ವ ವನ್ಯಜೀವಿ ನಿಧಿಯ ಪ್ರಕಾರ ಪ್ರಸ್ತುತ ವಿಶ್ವದಲ್ಲಿ ಕೇವಲ 3,900 ಹುಲಿಗಳು ಮಾತ್ರ ಇವೆ. ಇನ್ನು ವಿಶ್ವದಲ್ಲಿ ಈಗಿರುವ ಒಟ್ಟು ಹುಲಿಗಳ ಪೈಕಿ ಸುಮಾರು ಶೇ 70 ರಷ್ಟು ಭಾರತದಲ್ಲೇ ಇರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ.

ಭಾರತದಲ್ಲಿ ಪ್ರಾಜೆಕ್ಟ್ ಟೈಗರ್ : 1973 ರಲ್ಲಿ ಹುಲಿಗಳನ್ನು ಸಂರಕ್ಷಿಸುವ ಹೊಸ ಕಲ್ಪನೆಯೊಂದಿಗೆ ಪ್ರಾಜೆಕ್ಟ್ ಟೈಗರ್ ಎಂಬ ಯೋಜನೆಯನ್ನು ಭಾರತದಲ್ಲಿ ಜಾರಿಗೊಳಿಸಲಾಯಿತು. ಪ್ರಾಜೆಕ್ಟ್ ಟೈಗರ್ ಪ್ರಾರಂಭವಾದಾಗಿನಿಂದ ದೇಶದಲ್ಲಿ 9 ಹುಲಿ ಸಂರಕ್ಷಿತ ಪ್ರದೇಶಗಳನ್ನು ಘೋಷಣೆ ಮಾಡಲಾಗಿದೆ. ಕಾಲಾಂತರದಲ್ಲಿ ಹುಲಿ ಸಂರಕ್ಷಿತ ಪ್ರದೇಶಗಳ ವ್ಯಾಪ್ತಿಯು ನಿರೀಕ್ಷೆಗೂ ಮೀರಿ ಬೆಳೆದಿರುವುದು ಆಶಾದಾಯಕ ಸಂಗತಿಯಾಗಿದೆ.

ಭಾರತದಲ್ಲಿ ಹುಲಿಗಳ ಸರ್ವೆಯನ್ನು 4 ವರ್ಷಗಳಿಗೊಮ್ಮೆ ಮಾಡಲಾಗುತ್ತದೆ.

## ಪುರಾಣ ಪ್ರಾರಂಭೋತ್ಸವ: ಜಾತ್ರಾ ಮಹೋತ್ಸವಕ್ಕೆ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ

ಯಲಬುರ್ಗಾ:

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಸುಕ್ಷೇತ್ರ ದಮ್ಮೂರ ಗ್ರಾಮದ ಶ್ರೀ ಭೀಮಾಂಬಿಕಾದೇವಿ ದೇವಸ್ಥಾನದಲ್ಲಿ 37 ನೇಯ ಪುರಾಣ ಮಹಾಮಂಗಲೋತ್ಸವ, ಸಾಮೂಹಿಕ ವಿವಾಹ ,ಧರ್ಮಸಭೆ ಹಾಗು ಲಿಂ.ಪೂಜ್ಯ ಗುರುಬಸಪ್ಪಜ್ಜನವರು ಮತ್ತು ಲಿಂ.ಮಾತೋಶ್ರೀ ರೇಣಮ್ಮನವರ 19 ನೇ ವರ್ಣದ ಪುಣ್ಯಸ್ಮರೋಣೋತ್ಸವ ಹಾಗು 382 ನೇ ಶಿವಾನುಭವ ಗೋಷ್ಠಿ ಮತ್ತು ಮಹಾರಥೋತ್ಸವದ ಅಂಗವಾಗಿ ಜ.8 ರಂದ ರಾತ್ರಿ 8.30 ಕ್ಕೆ ಶ್ರೀ ಭೀಮಾಂಬಿಕಾ ದೇವಿಯ ಪುರಾಣ ಕಾರ್ಯಕ್ರಮಕ್ಕೆ ಗುರು ಹಿರಿಯರಿಂದ ಚಾಲನೆ ನಿಡಲಾಗಿತು. ಬಳೋಟಗಿಯ ಪ್ರವಚನಕಾರ ವೇ. ಮೂ.ಸಿದ್ದೇಶ್ವರ ಶಾಸ್ತ್ರೀ ಅವರು ಮಾತನಾಡಿ ಶ್ರೀ ಭೀಮಾಂಬಿಕಾದೇವಿಯ ಪುರಾಣವನ್ನು ಆಲಿಸುವುದರಿಂದ ನಮ್ಮ ಮನಸ್ಸಿಗೆ ನೇಮ್ಮದಿ ಮತ್ತು ಚಿಂತೆಯಿಂದ ಇರಲು ಸಾದ್ಯ ಎಂದರು. ಶ್ರೀಮಠದ ಒಡೆಯರಾದ ನಾಗಪ್ಪಜ್ಜ ಧರ್ಮರ, ಹನುಮಂತಪ್ಪಜ್ಜ ಧರ್ಮರ ಮತ್ತು ಶರಣಯ್ಯ ಹಿರೇಮಠ ಸಾನಿದ್ಯವಹಿಸಿದ್ದರು. ಪ್ರಾಸ್ತಾವಿಕವಾಗಿ ಅಂದಪ್ಪ ಮಂಡಲಗೇರಿ, ರಸೂಲಸಾಬ ಹಿರೇಮನಿ, ಗುರುಮೂರ್ತಿ ಬಡಿಗೇರ , ನಿ.ಶಿಕ್ಷಕ ಶರಣೆಗೌಡ ಎಸ್ ಗೌಡರ ಮಾತನಾಡಿದರು. ಈ ವೇಳೆ ಶ್ರೀ ಭೀಮಾಂಬಿಕಾ ದೇವಿಯ ಶಿವಾನುಭವ ಸೇವಾ ಸಮಿತಿ ಅದ್ಯಕ್ಷ ಶರಣಬಸಪ್ಪ ದಾನಕೈ, ಮುಖಂಡರಾದ ಡಿ.ಮೌನೇಶ ಬಡಿಗೇರ, ವೀರಪ್ಪ ರಾವಣಕಿ, ಶರಣಪ್ಪ ಹಾಲಕೇರಿ, ನಾಗಪ್ಪ ಮೇಟಿ, ಬಸವರಾಜ ತೋಂಡಿಹಾಳ, ಶರಣಪ್ಪ ಶೊಂಠಿ, ಅಂದಪ್ಪ ಕಿನ್ನಾಳ, ಭಾಷುಸಾಬ ವಾಲಿಕಾರ, ಭೀಮಣ್ಣ ಜರಕುಂಟಿ, ದೇವಪ್ಪ ಹಳ್ಳಿಕೇರಿ, ಅಂಬರೇಶ ಚಿಕ್ಕಗೌಡ್ರ ಸೇರಿದಂತೆ ಇತರರು ಇದ್ದರು.

ಲಿಂಗನಬಂಡಿಯ ಹನುಮಂತಪ್ಪ ಆಂದ್ರಪ್ರದೇಶದ ಮೌನೇಶ ಕುಮಾರ ಸಂಗೀತ ಸೇವೆ ನೀಡಿದರು. ಪ್ರಕಾಶ ರಾವಣಕಿ ವಂದಿಸಿದರು. ನಂತರ ಮಹಾಪ್ರಸಾದ ಜರುಗಿತು. ಜ.17 ರಂದು 382 ನೇ ಶಿವಾನುಭವ ಗೋಷ್ಠಿ, ಜ.20 ರಂದು ಮುತ್ತೈದಿಯರಿಗೆ ಉಡಿತುಂಬುವ ಕಾರ್ಯಕ್ರಮ, ಜ.21 ರಂದು ಗುಡ್ಡಕ್ಕೆ ಆರತಿ ಬೆಳಗುವದು, ಜ.22 ರಂದು ಶ್ರೀ ಚಂದ್ರಾಬಿಕಾದೇವಿಗೆ ಅಭೀಷೇಕ, ಜ.23 ರಂದು ಶ್ರೀ ಭೀಮಾಂಬಿಕಾದೇವಿಯ ರಥೋತ್ಸವ ಜರುಗುವದು, ಜ.23 ರಂದು ರಾತ್ರಿ 10 ಗಂಟೆಗೆ ಡಾ.ಪ್ರಕಾಶ ರಾವಣಕಿ ವಿರಚಿತ ಪ್ರಥಮ ಕಾಣಿಕೆ " ಸಿಹಿ ಮುತ್ತಿನ ಕಾಣಿಕರ" ಎಂಬ ನಾಟಕ ಪ್ರದರ್ಶನವಾಗುವದು ಈ ಜಾತ್ರೋತ್ಸವದಲ್ಲಿ ಬೂನಕೊಪ್ಪ ಗ್ರಾಮದವರಿಂದ ಕಳಸದ ಸೇವೆ,ಜಿ.ಜರಕುಂಟಿ ಭಕ್ತರಿಂದ ಹಗ್ಗದ ಸೇವೆ,ಜಿ.ವೀರಾಪೂರ

ಗ್ರಾಮದವರಿಂದ ಜಾನಗೋರಡದ ಸೇವೆ, ದಮ್ಮೂರದ ಮರಿಯಪ್ಪರಾ.ಲಕ್ಕಲಕಟ್ಟಿ ಕುಟುಂಬದವರಿಂದ ಮಹಾ ರಥೋತ್ಸವಕ್ಕೆ ಹೂವಿನ ಹಾರದ ಸೇವೆ ಹಾಗು ತಾಲೂಕಿನ ಸುತ್ತ ಮುತ್ತಲಿನ ಭಕ್ತರಿಂದ ಸಹಾಯ ಸಹಕಾರದೊಂದಿಗೆ ಜರುಗುವದು ಎಂದು ಶ್ರೀ ಭೀಮಾಂಬಿಕಾದೇವಿ ಜಾತ್ರಾ ಮಹೋತ್ಸವ ಹಾಗು ಶಿವಾನುಭವ ಸಮಿತಿ ಯವರು ಯಶಸ್ವಿಗೊಳಿಸಲು ವಿನಂತಿಸಿದರು.

# ಮಹಾದೇವತಾತಾ ಪುಣ್ಯಸ್ಮರಣೋತ್ಸವ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಅಲ್ಲೀಪುರಶ್ರೀಮಹಾದೇವತಾತನವರ ಸದ್ಭಕ್ತ ಮಂಡಳಿ ಹಾಗೂ ಚರಂತಿಮಠ ಶಿವಾನುಭವ ಸಮಿತಿಯಿಂದ ಮಹಾತಪಸ್ವಿ ಲೀಲಾಮೂರ್ತಿ ಸದ್ಗುರು ಅಲ್ಲೀಪುರ ಮಹಾದೇವತಾತನವರ 38ನೇ ವರ್ಷದ ಪುಣ್ಯಸ್ಮರಣೋತ್ಸವ ಜ.11 ರಂದು ನಗರದ ಚರಂತಿಮಠದ ಶಿವಾನುಭವ ಮಂಟಪದಲ್ಲಿ ನಡೆಯಲಿದೆ ಎಂದು ಸಿದ್ಧಲಿಂಗಪ್ಪ ಹೊಸಕೇರಿ ಹೇಳಿದರು.

ಶುಕ್ರವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.11 ಬೆಳಿಗ್ಗೆ 7 ಗಂಟೆಗೆ ಶ್ರೀ ತಾತನವರ ರಜತಮೂರ್ತಿಗೆ ಮಹಾರುದ್ರಾಭಿಷೇಕ ಜರುಗಲಿದೆ. ಸಾಯಂಕಾಲ 6 ಗಂಟೆಗೆ ಕಾರ್ಯಕ್ರಮ ನಡೆಯಲಿದ್ದು, ದಿವ್ಯ ಸಾನ್ನಿಧ್ಯವನ್ನು ಚರಂತಿಮಠ ಪ್ರಭು ಸ್ವಾಮೀಜಿ ವಹಿಸುವರು. ಬೀಳಗಿಯ ಕಲ್ಮಠದ ಗುರುಪಾದ ಶಿವಾಚಾರ್ಯರು ಸಮ್ಮುಖ ವಹಿಸುವರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬವಿವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಗಣ್ಯ ವ್ಯಾಪಾರಸ್ಥ ಮಲ್ಲಪ್ಪಣ್ಣ ಆರಬ್ಬಿ, ಜಿಲ್ಲಾ ಶರಣ

ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎ.ಎಸ್.ಪಾವಟೆ, ನಿವೃತ್ತ ಪ್ರಾಧ್ಯಾಪಕ ಉಮಾಪತಿ ಹಂಪಿಹೊಳಿ, ನಿವೃತ್ತ ಅಭಿಯಂತರ ಶಿವಪುತ್ರಪ್ಪ ಕಿರಗಿ, ವಿಶ್ರಾಂತ ಪ್ರಾಂಶುಪಾಲ ಜಿ.ಎಸ್.ಬಿಜಾಪೂರ, ಭಕ್ತರಾದ ಶ್ರೀಧರ ಗಡ್ಡಿ ಆಗಮಿಸುವರು ಎಂದು ತಿಳಿಸಿದರು.

ಮಹಾಮಹಿಮರಾದ ಶ್ರೀ ಅಲ್ಲೀಪುರ ತಾತನವರ ಪುಣ್ಯಸ್ಮರಣೋತ್ಸವ ಮೂರನೇ ವರ್ಷದ ಕಾರ್ಯಕ್ರಮ ನಡೆಸಲಾಗುತ್ತಿದೆ. ನಗರದ ಜನರು, ಭಕ್ತರು ಆಗಮಿಸಿ ಅಲ್ಲೀಪುರ ತಾತನವರ ಆರ್ಶೀವಾದ ಪಡೆಯಬೇಕು ಎಂದು ವಿನಂತಿಸಿಕೊಂಡರು.

ಅಲ್ಲೀಪುರ ತಾತನವರ ಪುಣ್ಯಸ್ಮರಣೋತ್ಸವವನ್ನು ಬಳ್ಳಾರಿಯ ಜ್ಞಾನ ರಂಭಾಮಠ, ಹಂಪಸಾಗರದ ಉಕ್ಕಿನಮಠ, ಸಾಲುಮೂರುಹಳ್ಳಿಯ ಯಯ ಶಿವಕಂಚಿಮಠ, ಕಾಂತೇಬೇನ್ನೂರುಮಠ, ಧಾರವಾಡದ ಲಕ್ಷ್ಮೀರಾಜ ಸಾಗರಮಠ, ಕಪಿಲಾ ಸಂಗಮದ ಶಿವಪುರಮಠ, ನಗರೂರುಮಠ, ಅದ್ವಾನಿಮಠ, ನಂದಿಪುರಮಠ ಹೀಗೆ ಒಂಭತ್ತು ಮಠಗಳಲ್ಲಿ ಪ್ರತಿವರ್ಷವೂ ಆಚರಿಸಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎ.ಎಸ್.ಪಾವಟೆ, ಪಂಡಿತ ಆರಬ್ಬಿ, ಬಸವರಾಜ ಮುಕ್ಕುಪ್ಪಿ, ಮುರುಗೇಶ ಶಿವನಗುತ್ತಿ, ವಿಶ್ವನಾಥ ವೈಜಾಪೂರ, ಚೆನ್ನವೀರಯ್ಯನವರು ಅಂಬಲಿಕೊಪ್ಪಮಠ ಉಪಸ್ಥಿತರಿದ್ದರು.

# ಜ.12-14 ಕೂಡಲಸಂಗಮದಲ್ಲಿ 39ನೇ ಶರಣಮೇಳ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಬಸವಧರ್ಮ ಪೀಠದಿಂದ ಜನೇವರಿ 12 ರಿಂದ 14 ರವರೆಗೆ 39 ನೇ ಶರಣ ಮೇಳ ಜರುಗಲಿದೆ. ಇದಕ್ಕಾಗಿ ಸಕಲ ಸಿದ್ಧತೆಗಳು ಪೂರ್ಣಗೊಂಡಿದ್ದು, ಶುಕ್ರವಾರ ಅಖಂಡ ವಚನ ಪಠಣದೊಂದಿಗೆ ಮೇಳದ ಕಾರ್ಯಕ್ರಮಗಳು ಆರಂಭಗೊಂಡಿವೆ ಎಂದು ಬಸವಧರ್ಮ ಪೀಠದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಹೇಳಿದರು.

ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಶರಣಮೇಳದ ವಿವರಣೆ ನೀಡಿದ ಅವರು, ಜ.12 ರಂದು ಬೆಳಿಗ್ಗೆ 10–30ಕ್ಕೆ ರಾಷ್ಟ್ರೀಯ ಬಸವದಳದ 35 ನೇ ಅಧಿವೇಶನವನ್ನು ಜಿಲ್ಲಾಧಿಕಾರಿ ಸಂಗಪ್ಪ ಉದ್ಘಾಟಿಸಲಿದ್ದು, ವಿವಿಧ ರಾಜ್ಯ ಹಾಗೂ ಜಿಲ್ಲೆಯ ರಾಷ್ಟ್ರೀಯ ಬಸವದಳದ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ತಿಳಿಸಿದರು.

ಅಂದೇ ಸಾಯಂಕಾಲ 6 ಗಂಟೆಗೆ ಮಠಾಧಿಪತಿಗಳ ಧರ್ಮ ಚಿಂತನಗೋಷ್ಠಿ ನಡೆಯಲಿದ್ದು, ಮೈಸೂರ ಜಿಲ್ಲೆಯ ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದ ನಟರಾಜ ಸ್ವಾಮೀಜಿ ಉದ್ಘಾಟಿಸುವರು. ಇಳಕಲ್ಲಿನ ಗುರುಮಹಾಂತ ಸ್ವಾಮೀಜಿ ಹಾಗೂ ಗುಳೇದಗುಡ್ಡದ ಬಸವರಾಜ ಪಟ್ಟದಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಅಥಣಿಯ ಪ್ರಭುಚನ್ನಬಸವ ಸ್ವಾಮೀಜಿ, ತಂಗಡಗಿಯ ಅಪ್ಪಣ್ಣ ಭಾರತಿ ಸ್ವಾಮೀಜಿ, ಚಿತ್ರದುರ್ಗದ ಮೇದಾರ ಕೇತಯ್ಯ ಸ್ವಾಮೀಜಿ ಸೇರಿ ಅನೇಕ ಶ್ರೀಗಳು ಭಾಗವಹಿಸುವರು.

ಜ.13 ಬೆಳಿಗ್ಗೆ 10–30 ಗಂಟೆಗೆ 39 ನೇ ಶರಣಮೇಳದ ಉದ್ಘಾಟನೆಯನ್ನು ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿ ಸುಶೀಲಕುಮಾರ ಶಿಂಧೆ ನೆರವೇರಿಸುವರು. ಮಾತೆ ಮಹಾದೇವಿ ರಚಿಸಿದ ತಂರಗಿಣಿ ಕೃತಿಯನ್ನು ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಬಿಡುಗಡೆಗೊಳಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಧರ್ಮ ಧ್ವಜಾರೋಹಣ ಮಾಡುವರು. ಅಧ್ಯಕ್ಷತೆಯನ್ನು ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ ವಹಿಸಲಿದ್ದು, ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ರಂಜಾನ್ ದರ್ಗಾ, ಮಹಾಂತೇಶ ಬಿರಾದಾರ, ಜೆ.ಎಸ್.ಪಾಟೀಲ, ಎಸ್.ಎಂ.ಜಾಮದಾರ, ಮಹಾದೇವ ಹೊರಟ್ಟಿ ಮತ್ತಿತರರು ಪಾಲ್ಗೊಳ್ಳುವರು.

ಸಾಯಂಕಾಲ 6 ಗಂಟೆಗೆ ಬಸವಧರ್ಮ ಪೀಠದ 34ನೇ ಪೀಠಾರೋಹಣ ಸಮಾರಂಭ ನಡೆಯಲಿದ್ದು, ಬೈಲೂರು ನಿಜಗುಣಾನಂದ ಸ್ವಾಮೀಜಿ ಸಾನಿಧ್ಯ ವಹಿಸುವರು. ಬಾಗೇವಾಡಿಯ ಸಿದ್ದಲಿಂಗ ಸ್ವಾಮೀಜಿ ಗುರುಬಸವ ಪೂಜೆ ನೆರವೇರಿಸುವರು. ಹಂದಿಗುಂದದ ಶಿವಾನಂದ ಸ್ವಾಮೀಜಿ ಧರ್ಮ ಧ್ವಜಾರೋಹಣ ಮಾಡುವರು.

ಜ.14 ಬೆಳಿಗ್ಗೆ 10 ಗಂಟೆಗೆ ಲಿಂಗಾಯತ ಧರ್ಮ ಸಂಸ್ಥಾಪಣಾ ದಿನ, ಬಸವ ಕ್ರಾಂತಿ ದಿನಾಚರಣೆ ಸಮಾರಂಭ ನಡೆಯಲಿದ್ದು, ಮಾಜಿ ಸಚಿವ ಎಸ್.ಆರ್.ಪಾಟೀಲ ಉದ್ಘಾಟಿಸುವರು. ಬಸನಗೌಡ ಎಂ.ಪಾಟೀಲ, ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಭಾಗವಹಿಸುವರು. ಪ್ರಶಸ್ತಿ ಪ್ರದಾನ: ಜ.12 ಬೆಳಿಗ್ಗೆ ಮೈಸೂರಿನ ನಾಗಮ್ಮ ಷಡಕ್ಷರಿ ಅವರಿಗೆ 'ಶರಣ ದಾಸೋಹ ರತ್ನ' ಪ್ರಶಸ್ತಿ, ವಿಜಯಪುರದ ಬೇಕರಿ ಶಿವಣ್ಣ ಅವರಿಗೆ 'ಶರಣ ಸೇವಾ ರತ್ನ' ಪ್ರಶಸ್ತಿ, ಹುನಗುಂದದ ರಾಚಪ್ಪ ರಾಜಮನಿ ಅವರಿಗೆ 'ಶರಣ ಕೃಷಿ ರತ್ನ' ಪ್ರಶಸ್ತಿ, ದಾವಣಗೆರೆಯ ಎ.ಎಚ್. ಹುಚ್ಚಪ್ಪ ಮಾಸ್ತರ್ ಅವರಿಗೆ 'ಬಸವ ರತ್ನ' ಪ್ರಶಸ್ತಿ ಹಾಗೂ ಚಾಮರಾಜನಗರ ಜಿಲ್ಲೆಯ ನೇಸಕಟ್ಟೆಯ ನಾಗಮಲ್ಲಪ್ಪ ಅವರಿಗೆ 'ಶರಣ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಜ.13 ಬೆಳಿಗ್ಗೆ ಹೆಸರಾಂತ ಗಾಯಕಿ ಸಂಗೀತಾ ಕಟ್ಟಿ ಅವರಿಗೆ 'ಬಸವಾತ್ಮಜೆ' ರಾಷ್ಟ್ರೀಯ ಪ್ರಶಸ್ತಿ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ಅವರಿಗೆ 'ಶರಣ ಕಾಯಕ ಪ್ರಶಸ್ತಿ' ಹಾಗೂ ಟಿವಿ ವರದಿಗಾರ ರವಿ ಮೂಕಿ ಅವರಿಗೆ 'ಶರಣ ಜ್ಞಾನ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಜ.14 ಬೆಳಿಗ್ಗೆ ಹಿರಿಯ ಸಾಹಿತಿ ಗೊ.ರು.ಚನ್ನಬಸಪ್ಪ ಅವರಿಗೆ 'ಸ್ವಾಮಿ ಲಿಂಗಾನಂದ ಶ್ರೀ' ರಾಷ್ಟ್ರೀಯ ಪ್ರಶಸ್ತಿಯನ್ನು, ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರಿಗೆ 'ಪ್ರಮುಖ ಪ್ರಜ್ಞೆ' ರಾಷ್ಟ್ರೀಯ ಪ್ರಶಸ್ತಿ, ಬೆಂಗಳೂರಿನ ಜನಸ್ನೇಹಿ ಟ್ರಸ್ಟ್‌ನ ಸಂಸ್ಥಾಪಕ ಯೋಗೇಶ ಅವರಿಗೆ 'ಕಾಯಕ ಕಲಿ' ರಾಜ್ಯ ಪ್ರಶಸ್ತಿಯನ್ನು ನೀಡಲಾಗುವುದು ಎಂದು ಮಾತೆ ಗಂಗಾದೇವಿ ಹೇಳಿದರು.

ಪುಸ್ತಕ ಬಿಡುಗಡೆ: ಮೇಳದಲ್ಲಿ ಜ.12 ರಂದು ಶ್ರೀಶೈಲ ಆಳೂರ ಅವರ 'ರೈತ ಸಾಮ್ರಾಜ್ಯ ಕಟ್ಟೋಣ ಬನ್ನಿ', ಎಚ್.ಜಿ.ಹಂಪಣ್ಣ ಅವರ 'ಚನ್ನಮಲ್ಲೇಶ್ವರ', ಜ.13 ರಂದು ಚಂದ್ರಶೇಖರ ಇಟಗಿ ಅವರ 'ತ್ರಿದಳ' ಹಾಗೂ ಶ್ರೀಧರ ಗೌಡರ ಅವರ 'ಇದೇ ಅಂತರಂತ ಶುದ್ಧಿ, ಇದೇ ಬಹಿರಂಗ ಶುದ್ಧಿ, ಕೃತಿಗಳನ್ನು ಬಿಡುಗಡೆಗೊಳಿಸಲಾಗುವುದು ಎಂದು ಮಾತಾಜಿ ತಿಳಿಸಿದರು.

# ಒತ್ತಡದಿಂದ ಹೊರಬರಲು ಕ್ರೀಡೆಗಳು ಸಹಕಾರಿ: ಭಾಂಡಗೆ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಸರಕಾರಿ ನೌಕರರು ದಿನನಿತ್ಯದ ಕೆಲಸದ ಒತ್ತಡದಿಂದ ಹೊರಬರಲು ಕ್ರೀಡಾ ಚಟುವಟಿಕೆಗಳು ಸಹಕಾರಿಯಾಗಲಿವೆ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕ್ರೀಡಾ ಇಲಾಖೆ ಹಾಗೂ ರಾಜ್ಯ ಸರಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡ ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ಹಾಗೂ 2023ನೇ ಸಾಲಿನ ಸರ್ವೋತ್ತಮ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ನೌಕರರು ಮಾನಸಿಕವಾಗಿ, ದೈಹಿಕವಾಗಿ ಸದೃಡರಾದರೆ ಮಾತ್ರ ಉತ್ತಮವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಸರಕಾರಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಕೆಲಸ ನೌಕರ ವರ್ಗ ಮಾಡುತ್ತದೆ. ಸಮರ್ಪಕವಾಗಿ ಕೆಲಸ ಮಾಡಬೇಕಾದರೆ ದೈಹಿಕವಾಗಿ ಆರೋಗ್ಯದಿಂದಾಗ ಮಾತ್ರ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ವಿಧಾನ ಪರಿಷತ್ ಶಾಸಕ ಹನಮಂತ ನಿರಾಣಿ ಮಾತನಾಡಿ ಸರಕಾರಿ ನೌಕರರು ತಮ್ಮ ಕೆಲಸದಲ್ಲಿ ಉತ್ಸಾಹಿಗಳಾಗಿರಬೇಕಾದರೆ, ದೈಹಿಕವಾಗಿ ಮಾನಸಿಕವಾಗಿ ಸದೃಡವಾಗಬೇಕಾದರೆ ಕ್ರೀಡೆಗಳು ಮುಖ್ಯವಾಗಿವೆ. ಶಾಲಾ ಕಾಲೇಜುಗಳಲ್ಲಿ ಕ್ರೀಡೆಗಳಲ್ಲಿ ಹೇಗೆ ಹೆಚ್ಚು ಮಹತ್ವ ಕೊಡುತ್ತಾರೆ. ನೌಕರರಲ್ಲಿ ಮಹತ್ವ ಕೊಟ್ಟು ಸರಕಾರಿ ನೌಕರರ ಸಂಘ ಪ್ರತಿ ವರ್ಷ ಆಯೋಜಿಸುತ್ತಿದೆ. ನಿಮ್ಮ ಸ್ಪೂರ್ತಿ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿ ಎಂದು ಹೇಳಿದರು. ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ ಸರಕಾರಿ ಸೇವೆ ಎಂದರೆ ಕೇವಲ ಕರ್ತವ್ಯ ನಿರ್ವಹಣೆ ಮಾತ್ರವಲ್ಲ. ಅದು ಶಿಸ್ತು, ನಿಷ್ಠೆ ಮತ್ತು ಸಾರ್ವಜನಿಕ ಹಿತಕ್ಕಾಗಿ ದುಡಿಮೆ ಸಂಕೇತವಾಗಿದೆ. ಒತ್ತಡದ ಮಧ್ಯೆ ಕೆಲಸ ಮಾಡುತ್ತಿರುವ ಸರಕಾರಿ ನೌಕರರಿಗೆ ಶಾರೀರಿಕ ಹಾಗೂ ಮಾನಸಿಕ ಆರೋಗ್ಯ ಅತ್ಯಂತ ಅಗತ್ಯವಾಗಿದೆ ಎಂದರು. ಜಿ.ಪಂ ಸಿಇಓ ಶಶಿಧರ ಕುರೇರ ಮಾತನಾಡಿ ಆರೋಗ್ಯವಂತ ನೌಕರರು ಇದ್ದಾಗ ಮಾತ್ರ ಜನತೆಗೆ ಉತ್ತಮ ಸೇವೆ ಒದಗಿಸಲು ಸಾಧ್ಯವಾಗುತ್ತದೆ ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸರಕಾರಿ ಸೇವೆಯಲ್ಲಿ ಬರುವ ಸವಾಲುಗಳನ್ನು ಎದುರಿಸಿ ಕೆಲಸ ಮಾಡಬೇಕಾಗುತ್ತದೆ. ಕ್ರೀಡೆಗಳಲ್ಲಿ ಪಾಲ್ಗೊಳ್ಳುವದರಿಂದ ನಮಗೆ ಉತ್ಸಾಹ ದೊರೆಯುತ್ತದೆ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ ಸರಕಾರಿ ನೌಕರರು ತಮ್ಮ ಆರೋಗ್ಯವನ್ನು ಸದೃಡವನ್ನಾಗಿ ಮಾಡಿಕೊಳ್ಳಬೇಕಾದರೆ, ಕೇವಲ ಒಂದು ಮಾತ್ರ ಕ್ರೀಡೆಗಳಲ್ಲಿ ಭಾಗವಹಿಸಿದರೆ ಸಾಲದು, ದಿನನಿತ್ಯ ನಮ್ಮ ಜೀವನದಲ್ಲಿ ಒಳವಡಿಸಿಕೊಂಡಾಗ ಮಾತ್ರ ಆರೋಗ್ಯವಾಗಿರಲು ಸಾಧ್ಯವಾಗುತ್ತದೆ. ಇಂದ ಕ್ರೀಡೆ, ಸಾಂಸ್ಕೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಉತ್ತಮ ಕಾರ್ಯವೆಂದು ತಿಳಿಸಿದರು.

ಪ್ರಾರಂಭದಲ್ಲಿ ರಾಜ್ಯ ಸರಕಾರಿ ನೌಕರರ ರಾಜ್ಯ ಕಾರ್ಯಾಧ್ಯಕ್ಷರು ಹಾಗೂ ಜಿಲ್ಲಾಧ್ಯಕ್ಷರಾದ ಮಲ್ಲಿಕಾರ್ಜುನ ಬಳ್ಳಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ ನೌಕರರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಜಿ.ಪಂ ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ, ಸರಕಾರಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಸಂಜೀವರಡ್ಡಿ ಸತ್ಯರಡ್ಡಿ ಸೇರಿದಂತೆ ಜಿಲ್ಲಾ ಉಪಾಧ್ಯಕ್ಷರು, ತಾಲೂಕಾ ಅಧ್ಯಕ್ಷರು ಉಪಸ್ಥಿತರಿದ್ದರು.

## ಸರ್ವೋತ್ತಮ ಪ್ರಶಸ್ತಿ ಪ್ರಧಾನ

**ಕಳೆದ 2023ನೇ ಸಾಲಿನ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಆಯ್ಕೆಯಾದ 10 ಜನ ಅಧಿಕಾರಿ, ನೌಕರರಿಗೆ ಪ್ರಶಸ್ತಿ ಪತ್ರ ಹಾಗೂ ತಲಾ 25 ಸಾವಿರ ರೂ. ನಗದು ನೀಡಿ ಸನ್ಮಾನಿಸಲಾಯಿತು. ಬೀಳಗಿ ತಹಶೀಲ್ದಾರ ವಿನೋದ ಹತ್ತಳ್ಳಿ, ಸುತಗುಂಡಾರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ವೀಣಾ ಶೆಲವಡಿ, ಜಮಖಂಡಿ ಸಹಾಯಕ ಕೃಷಿ ಅಧಿಕಾರಿ ಸಿದ್ದಪ್ಪ ಪಟ್ಟಿಹಾಳ, ಅರಕೇರಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಮಹೇಶ ಜಗಲಿ, ಲೋಕಾಪೂರ ಹಿಂದುಳಿದ ವರ್ಗದ ಮೆಟ್ರಿಕ್‌ಪೂರ್ವ ಬಾಲಕಿಯರ ವಸತಿ ನಿಲಯ ಪಾಲಕ ಅಶೋಕ ಕಾಂತಿ, ಜಿಲ್ಲಾ ಆಸ್ಪತ್ರೆಯ ಶುಶ್ರೂಷಾಧಿಕಾರಿ ಶೇಖರ ಕೋಲಕಾರ, ಲೋಕಾಪೂರ ಉಪ ತಹಶೀಲ್ದಾರ ಮಹೇಶ ಪಾಂಡವ, ಕುಳಗೇರಿ ಕ್ರಾಸ್ ಅಂಬೇಡ್ಕರ ಸರ್ಕಾರಿ ಮೆಟ್ರಿಕ್ ಪೂರ್ವ ವಸತಿ ನಿಲಯ ಪಾಲಕ ಆನಂದ ಉಗಲವಾಟ, ಹುನಗುಂದ ಗ್ರಂಥಾಲಯ ಶಾಖೆಯ ಗ್ರಂಥಾಲಯ ಸಹವರ್ತಿ ಮಹಾಂತೇಶ ನಾಡಗೌಡ ಹಾಗೂ ಬಿಲ್‌ಕೆರೂರ ಮೆಟ್ರಿಕ್‌ಪೂರ್ವ ಬಾಲಕರ ವಸತಿ ನಿಲಯ ಪಾಲಕಿ ರಾಜೇಶ್ವರಿ ಹಡಪದ ಅವರಿಗೆ ಪ್ರಶಸ್ತಿ ನೀಡಲಾಯಿತು.**

# ತೊಗರಿ ಖರೀದಿ ಕೇಂದ್ರ ಶಾಸಕರಿಂದ ಚಾಲನೆ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯ ಹುನಗುಂದ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಾಗೂ ಟಿಎಪಿಸಿಎಂಎಸ್ ಸಹಯೋಗದಲ್ಲಿ 2025–26ನೇ ಸಾಲಿನ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ತೊಗರಿ ಬೆಂಬಲ ಬೆಲೆ ಖರೀದಿ ಕೇಂದ್ರಕ್ಕೆ ಶಾಸಕ ವಿಜಯಾನಂದ ಕಾಶಪ್ಪನವರ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ತೊಗರಿ ಪ್ರತಿ ಕ್ವಿಂಟಲ್‌ಗೆ 8 ಸಾವಿರ ರೂ.ದಂತೆ ಬೆಂಬಲ ಬೆಲೆಯನ್ನು ನಿಗದಿಗೊಳಿಸಿ ಖರೀದಿಸುವ ಮೂಲಕ ರೈತರು ಬೆಳೆದ ಬೆಳೆಗೆ ಪ್ರಾಮಾಣಿಕ ಬೆಲೆ ಕಲ್ಪಿಸುವ ಕೆಲಸವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಕೃಷಿ ಸಚಿವ ಚೆಲುವರಾಯಸ್ವಾಮಿ ಮಾಡಿದ್ದಾರೆ ಎಂದರು.

ಈಗಾಗಲೇ ಸೂರ್ಯಕಾಂತಿ, ಹೆಸರು ಸೇರಿದಂತೆ ಅನೇಕ ಬೆಳೆಗಳನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲಾಗಿದೆ. ಮೆಕ್ಕೆಜೋಳಕ್ಕೂ ಕೂಡಾ ಬೆಂಬಲ ಬೆಲೆಯಲ್ಲಿ ಖರೀದಿಸಲು ಸರ್ಕಾರ ನಿರ್ಧರಿಸಿದ್ದು. ಶೀಘ್ರದಲ್ಲೇ ಮೆಕ್ಕೆಜೋಳ ಖರೀದಿ ಕೇಂದ್ರವನ್ನು ಕೂಡಾ ಆರಂಭಿಸಲಾಗುವುದು. ಈ ಬಾರಿ ಅತಿಯಾದ ಮಳೆಯಿಂದ ರೈತರ ಸಾಕಷ್ಟು ಬೆಳೆ ನಷ್ಟವಾಗಿದ್ದು. ನಷ್ಟವಾದ ಬೆಳೆಗೆ ಸರ್ಕಾರ ಈಗಾಗಲೇ 2600 ಕೋಟಿ ನಷ್ಟ ಪರಿಹಾರವನ್ನು ಕೂಡಾ ರೈತರಿಗೆ ನೀಡಿದೆ ಎಂದು ಕಾಶಪ್ಪನವರ ಹೇಳಿದರು.

ಈ ಬಾರಿ ಹುನಗುಂದ ಮತ್ತು ಇಳಕಲ್ ಅವಳಿ ತಾಲೂಕಿನ ರೈತರು ಹೆಚ್ಚಿನ ಕ್ಷೇತ್ರದಲ್ಲಿ ತೊಗರಿಯನ್ನು ಬೆಳೆದಿದ್ದಾರೆ. ರೈತರಿಗೆ ಅನುಕೂಲವಾಗಲಿ ಎಂದು ಜಿಲ್ಲಾಧಿಕಾರಿಗಳಿಗೆ ಮಾತನಾಡಿ ಅವಳಿ ತಾಲೂಕಿನಲ್ಲಿ ಹೆಚ್ಚಿನ ಖರೀದಿ ಕೇಂದ್ರ ತೆರೆಯಬೇಕೆಂದು ತಿಳಿಸಿದಾಗ ಈ ಬಾರಿ 17 ತೊಗರಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು ರೈತರು ಅದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ರಾಘವೇಂದ್ರ ದಂಡಿನ ಮಾತನಾಡಿ, ಸರ್ಕಾರ ಮತ್ತು ಜಿಲ್ಲಾ ಟಾಸ್ಕ ಪೋರ್ಸ ಸಮಿತಿಯ ಆದೇಶದಂತೆ ತೊಗರಿ ಬೆಳೆಗೆ ಪ್ರತಿ ಕ್ವಿಂಟಲ್‌ಗೆ 8 ಸಾವಿರದಂತೆ ಖರೀದಿಸುತ್ತಿದ್ದು. ಈಗಾಗಲೇ ಅವಳಿ ತಾಲೂಕಿನಲ್ಲಿ 4929 ತೊಗರಿ ಬೆಳೆದ ರೈತರು ನೋಂದಣಿ ಮಾಡಿಕೊಂಡಿದ್ದು ನೋಂದಣಿ

ಕಾರ್ಯ 80 ದಿನಗಳವರೆಗೆ ನಡೆದಿದ್ದು, ಖರೀದಿ ಪ್ರಕ್ರಿಯೆ 90 ದಿನಗಳವರೆಗೆ ನಡೆಯಲಿದೆ ಎಂದರು. ತಹಶೀಲ್ದಾರ ಪ್ರದೀಪಕುಮಾರ ಹಿರೇಮಠ, ಟಿಪಿಸಿಎಂಎಸ್ ಅಧ್ಯಕ್ಷ ಜೈನಸಾಬ ಹಗೇದಾಳ, ಮುಖಂಡರಾದ ಶೇಖರಪ್ಪ ಬಾದವಾಡಗಿ, ಬಸವರಾಜ ಗದ್ದಿ, ಸಂಗಣ್ಣ ಗಂಜಿಹಾಳ, ಸಂಜೀವ ಜೋಶಿ, ಮಹಾಲಿಂಗಯ್ಯ ಹಿರೇಮಠ, ಪ್ರಭು ಇದ್ದಲಗಿ ಸೇರಿದಂತೆ ಟಿಪಿಸಿಎಂಎಸ್ ನ ಸದಸ್ಯರು ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆಯ ಸಮಿತಿಯ ಸಿಬ್ಬಂದಿ ಇದ್ದರು.

# ಆರ್ಥಿಕ ಸುಧಾರಣೆಗೆ ಕೈಗಾರಿಕೆಗಳ ಕೊಡುಗೆ ಅವಶ್ಯ: ಅಂಗಡಿ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ದೇಶದ ಆರ್ಥಿಕ ಸ್ಥಿತಿ ಸುಧಾರಿಸುವಲ್ಲಿ ಕೈಗಾರಿಕೆಗಳ ಪಾತ್ರ ಮುಖ್ಯವಾಗಿದ್ದು, ಕೈಗಾರಿಕೆಗಳು ಬೆಳೆಯಲು ಬ್ಯಾಂಕ್‌ಗಳು ಸಹಕಾರ ನೀಡಿದಾಗ ಮಾತ್ರ ಸಾಧ್ಯವಾಗುತ್ತದೆ ಎಂದು ಬಿ.ವಿ.ವಿ ಸಂಘದ ಆರ್.ಸೆಟ್ ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್. ಅಂಗಡಿ ಹೇಳಿದರು.

ನಗರದ ಖಾಸಗಿ ಹೋಟೇಲ್‌ನಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕೆ ಕೇಂದ್ರ ಮತ್ತು ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಮತ್ತು ಅಡ್ವರ್ಟೈಸಿಂಗ್ ಲಿ. ಬೆಂಗಳೂರು ಸಂಯುಕ್ತ ಆಶ್ರಯದಲ್ಲಿ ರ್‍ಯಾಂಪ್ ಅಡಿ ಎಮ್‌ಎಸ್‌ಎಮ್‌ಇ ಇಕೋಸಿಸ್ಟೇಮ್ ಅರಿಯಿರಿ ವಿಷಯದ ಕುರಿತು ಬ್ಯಾಂಕರ್ಸ್ ಹಾಗೂ ವಿವಿಧ ಇಲಾಖಾ ಅಧಿಕಾರಿಗಳಿಗೆ ಆಯೋಜಿಸಲಾಗಿದ್ದ ಒಂದು ದಿನದ ಕಾರ್ಯಗಾರ ಉದ್ಘಾಟಿಸಿ ಮಾತನಾಡಿದ ಅವರು, ಕೈಗಾರಿಕೆಗಳಲ್ಲಿ ಶಿಸ್ತು ಮತ್ತು ಬದ್ಧತೆ ತರಲು, ಕೈಗಾರಿಕೆ ಅಭಿವೃದ್ಧಿ ರ್‍ಯಾಂಪ್ ಯೋಜನೆ ಉದ್ಯಮಗಳಲ್ಲಿ ತ್ಯಾಜ್ಯ ನಿರ್ವಹಣೆ, ಇಂಧನ ದಕ್ಷತೆ ಮತ್ತು ಮರುಬಳಕೆ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಉತ್ತೇಜಿಸುತ್ತಿದ್ದು ಇಲಾಖಾ ಅಧಿಕಾರಿಗಳು ಪೂರಕವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ ಎಂದರು.

ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಪ್ರಶಾಂತ ಬಾರಿಗಿಡದ ಮಾತನಾಡಿ, ಉದ್ಯೋಗಿಗಳ ಆರೋಗ್ಯ ಮತ್ತು ಸುರಕ್ಷತೆ ರ್‍ಯಾಂಪ್ ಯೋಜನೆಯ ಮತ್ತೊಂದು ಪ್ರಮುಖ ಅಂಶವಾಗಿದ್ದು ಕಾರ್ಮಿಕರಿಗೆ ಸುರಕ್ಷತೆ ಕೆಲಸದ ವಾತಾವರಣ, ಲಿಂಗ ಸಮಾನತೆ ಹಾಗೂ ನ್ಯಾಯಯುತ ವೇತನದಂತಹ ಸಾಮಾಜಿಕ ಅಂಶಗಳನ್ನು ಪಾಲಿಸುವುದು ಕೇವಲ ಕಾನೂನು ಬದ್ದತೆಯಷ್ಟೆ ಅಲ್ಲ ಉದ್ಯಮಗಳ ಘನತೆಯನ್ನು ಹೆಚ್ಚಿಸುವ ಪ್ರಮೂಖ ಅಂಶವಾಗಿದೆ. ಸಾಂಪ್ರದಾಯಕ ಉದ್ಯಮಗಳು ಹಳೆಯ ಪದ್ಧತಿಯಿಂದ ಹೊರಬಂದು ಪರಿಸರಕ್ಕೆ ಹಾನಿಯಾಗದ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ರಾಂಪ್ ಯೋಜನೆ ಪರಿಣಾಮಕಾರಿ ವೇದಿಕೆ ಒದಗಿಸಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಎಂಎಸ್‌ಎಂಇ–ಡಿಎಫ್‌ಓ ಗೋಪಿನಾಥ ರಾವ್ ಸಂಪನ್ಮೂಲ ವ್ಯಕ್ತಿಯಾಗಿ ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಕೆಎಸ್‌ಎಫ್‌ಸಿ ಉಪವ್ಯವಸ್ಥಾಪಕ ಮಂಜುನಾಥ ಎಂ, ಕೆನರಾ ಜಿಲ್ಲಾ ಅಗ್ರಣೀಯ ಬ್ಯಾಂಕ್ ವ್ಯವಸ್ಥಾಪಕ ದಯಾನಂದ ಕಾಳಗಿ, ಜಿಲ್ಲಾ ಕೈಗಾರಿಕಾ ಕೇಂದ್ರದ ಉಪನಿರ್ದೇಶಕ ಮಂಜುನಾಥ ಹೊಸಮನಿ ಹಾಗೂ ಸಹಾಯಕ ನಿರ್ದೇಶಕಿ ರತ್ನಾ ಅಂಗಡಿ ಸೇರಿದಂತೆ ವಿವಿಧ ಬ್ಯಾಂಕ್ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ನೋಂದಣಿ ಅಭಿಯಾನ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಬಾಗಲಕೋಟೆ ಮತಕ್ಷೇತ್ರದ ಎಲ್ಲಾ ಮತಗಟ್ಟೆಗಳಲ್ಲಿ ಮತದಾರರ ಪಟ್ಟಿಗಳಲ್ಲಿ ಹೆಸರುಗಳನ್ನು ನೋಂದಾಯಿಸಲು ಜನವರಿ 11 ಹಾಗೂ 18 ರಂದು ವಿಶೇಷ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ತಮ್ಮ ವ್ಯಾಪ್ತಿಯ ಮತಗಟ್ಟೆಗಳಿಗೆ ತೆರಳಿ ಸಂಬಂಧಪಟ್ಟ ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಿ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಸರು ತಿದ್ದುಪಡಿ, ವರ್ಗಾವಣೆ ಹಾಗೂ ಹೆಸರು ತೆಗೆದುಹಾಕಲು ಸಹ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ಮತದಾರರು ತಮ್ಮ ಮೊಬೈಲ್‌ನಲ್ಲಿ ಓಟರ್ ಹೆಲ್ಪಲೈನ್ ಆಪ್ ಡೌನ್ಲೋಡ್ ಮಾಡಿಕೊಂಡು ಅಥವಾ https://voters.eci.gov.in/ ಮೂಲಕ ಸಹ ಸರಿಯಾದ ವಿವರಗಳೊಂದಿಗೆ ಹಾಗೂ ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಸಾರ್ವಜನಿಕರು ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸುವ ಕುರಿತು ವಿಶೇಷ ಅಭಿಯಾನದ ದಿನಗಳ ಸದುಪಯೋಗ ಪಡಿಸಿಕೊಳ್ಳುವಂತೆ ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿಜಿಟಲ್ ಇ-ಸ್ಟಾಂಪ್ ತರಬೇತಿ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಡಿಜಿಟಲ್ ಇ–ಸ್ಟಾಂಪ್ ವ್ಯವಸ್ಥೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಹಾಗೂ ಅದರ ಸರಿಯಾದ ಬಳಕೆಯ ಬಗ್ಗೆ ಮಾಹಿತಿ ನೀಡುವ ಉದ್ದೇಶದಿಂದ ಆಯಾ ತಾಲೂಕಾ ಮಟ್ಟದಲ್ಲಿ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜನವರಿ 10 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 12 ವರೆಗೆ ಜಮಖಂಡಿ ಉಪವಿಭಾಗ ಅಧಿಕಾರಿಗಳ ಕಚೇರಿಯಲ್ಲಿ, ಸಂಜೆ 4 ರಿಂದ 6 ವರೆಗೆ ಮುಧೋಳ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ, 11 ರಂದು ಬೆ.10.30ರಿಂದ ಮಧ್ಯಾಹ್ನ 2ವರೆಗೆ ಬಾಗಲಕೋಟೆ ತಹಶೀಲ್ದಾರ ಕಚೇರಿ ಆವರಣದಲ್ಲಿರುವ ಸಭಾಭವನದಲ್ಲಿ, 12 ರಂದು ಸಂಜೆ 4 ರಿಂದ 6 ವರೆಗೆ ಬೀಳಗಿ ತಹಶೀಲ್ದಾರ ಕಚೇರಿ, 13 ರಂದು ಸಂಜೆ 4 ರಿಂದ 6 ವರೆಗೆ ಹುನಗುಂದ ತಹಶೀಲ್ದಾರ ಕಚೇರಿ, 14 ರಂದು ಸಂಜೆ 4 ರಿಂದ 6 ವರೆಗೆ ಬಾದಾಮಿ ತಹಶೀಲ್ದಾರ ಕಚೇರಿಯಲ್ಲಿ ತರಬೇತಿ ಹಮ್ಮಿಕೊಳ್ಳಲಾಗಿದೆ.

# ಓದಿನ ಜೊತೆಗೆ ಸಾಮಾನ್ಯ ಜ್ಞಾನವು ಅವಶ್ಯಕ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬೇಕಾದರೆ ಶಿಕ್ಷಣದ ಜೊತೆಗೆ ಸಾಮಾನ್ಯ ಜ್ಞಾನವು ಅವಶ್ಯಕವಾಗಿರುತ್ತದೆ ಎಂದು ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವ(ಮೌಲ್ಯಮಾಪನ) ಪ್ರೊ.ಬಸವರಾಜ ಲಕ್ಕಣ್ಣವರ ಹೇಳಿದರು. ಜಿಲ್ಲೆಯ ಹುನಗುಂದ ತಾಲೂಕಿನ ಕಮತಗಿ ಪಟ್ಟಣದ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಶ್ರೀಮತಿ ಯೋಗಿನಿದೇವಿ ಆರ್. ಪಾಟೀಲ ಗ್ರಾಮೀಣ ಮಹಿಳಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ದೀಪದಾನ ಸಮಾರಂಭದ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಬರೀ ಪುಸ್ತಕಗಳನ್ನು ಓದಿದರೆ ಅಂಕಗಳನ್ನು ಹೆಚ್ಚಿಸಬಹುದು, ಆದರೆ ದಿನಪತ್ರಿಕೆಗಳನ್ನು ಓದುವದು ಹಾಗೂ ಬೇರೆ ಬೇರೆ ಸಾಮಾನ್ಯ ಜ್ಞಾನವುಳ್ಳ ಪುಸ್ತಕಗಳನ್ನು ಓದಿದರೆ ಮಾತ್ರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬಹುದು. ಕೇವಲ ಪಠ್ಯ ಜ್ಞಾನಕ್ಕಿಂತ ಜೀವನದಲ್ಲಿ ಅನುಭವವೇ ವ್ಯಕ್ತಿಯನ್ನು ಗಟ್ಟಿಗೊಳಿಸುತ್ತದೆ. ಕಲಿತ ಜ್ಞಾನವನ್ನು ಅನುಭವದ ಮೂಲಕ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಯಶಸ್ಸು ಸಾಧ್ಯವಾಗುತ್ತದೆ ಎಂದು ಪ್ರೊ.ಲಕ್ಕಣ್ಣವರ ಹೇಳಿದರು.

ಕೆರೂರ ಹಿರೇಮಠದ ಡಾ. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು, ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಹುಚ್ಚೇಶ್ವರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಕೋಟೆಕಲ್ಲ ಅಮರೇಶ್ವರ ಮಠದ ಡಾ.ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು. ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಸಹ ಕಾರ್ಯದರ್ಶಿ ವ್ಹಿ.ಆರ್.ಮಳ್ಳಿ, ಸಂಘದ ಆಡಳಿತ ಮಂಡಳಿತ ಸದಸ್ಯರಾದ ಶಿವಣ್ಣ ಗುರಿಕಾರ, ಎಸ್.ಬಿ.ಶಾಬಾದಿ, ಬಿ.ಈಡಿ ಕಾಲೇಜಿನ ಪ್ರಾಚಾರ್ಯ ಡಾ.ಪಿ.ಆಯ್. ಮೋಮಿನ, ಸಾಂಸ್ಕೃತಿಕ ಹಾಗೂ ಕಾರ್ಯಾಧ್ಯಕ್ಷ ಶ್ರೀಮತಿ ಶೈಲಜಾ ಕಲ್ಮನಿ, ಬಿ.ಈಡಿ. ದ್ವಿತೀಯ ವರ್ಷದ ಪ್ರಧಾನ ಕಾರ್ಯದರ್ಶಿ ರಾಜೇಶ್ವರಿ ಹಿರೇಮಠ ವೇದಿಕೆಯಲ್ಲಿದ್ದರು.

ಉಪನ್ಯಾಸಕರಾದ ಎ.ಎಚ್. ಮಲಘಾನ, ಜಿ.ಎಲ್.ವಾಲಿಕಾರ, ಎಂ.ಎಂ.ಲಾಯದಗುಂದಿ ಮತ್ತು ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ಒಕ್ಕೂಟದ ಪದಾಧಿಕಾರಿಗಳು ಮತ್ತು ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ವಿಶ್ವವಿದ್ಯಾಲಯಕ್ಕೆ ಕಳೆದ ಸಾಲಿನಲ್ಲಿ 8ನೇ ರ್‍ಯಾಂಕ್ ಪಡೆದ ವರ್ಷಾ ಮಂಟಾ, ಕೆ–ಸೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಚೈತ್ರ ಹದ್ದಾರ, ಶೃತಿ ಜಾಧವ ಹಾಗೂ ಕ್ರೀಡಾಪಟು ನಫೀಸಾ ಆರಿ ಪ್ರಶಿಕ್ಷಣಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

# ಕರುನಾಡಿನಲ್ಲಿ ನೆಮ್ಮದಿಯ ಗ್ಯಾರಂಟಿ

## ಪ್ರತಿಮನೆಗೂ ಭರವಸೆಯ ಬೆಳಕು




ಬೆವಿಕಂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ವಿದ್ಯುತ್ ಬಿಲ್/ ELECTRICITY BILL
GSTN No.: 29AACCB1412G1Z5
BESCOM

O/o. AEE(Ele.) N7 - KURUBARAHALLI

**Account Details**

| | |
|---|---|
| ಆರ್.ಆರ್. ಸಂಖ್ಯೆ/ RR Nos | N3EH4536 |
| ಖಾತೆ ಸಂಖ್ಯೆ/Acc.ID | 5107756000 |
| ಮಾ.ಓ. ಸಂಕೇತ/MR Code | 14002768 |

**ವೈಯಕ್ತಿಕ ವಿವರಗಳು/Personal Details**
ಹೆಸರು ಮತ್ತು ವಿಳಾಸ/Name and Address

**ಸಂಪರ್ಕದ ವಿವರಗಳು/Connection Details**

| | |
|---|---|
| ಜಕಾತಿ/Tariff | 1LT2A |
| ಮಂ. ಪ್ರಮಾಣ/Sanc Load | 3KW + OHP |
| ಗೃಹ ಜ್ಯೋತಿ/GJS Reg Date | 27-06-2023 |
| ಸರಾಸರಿ/Average [FY22-23] | 57.17 |
| ಅರ್ಹ/Entitlement Units | 63.0 |

**ಬಿಲ್ ವಿವರ/Billing Details**

| | |
|---|---|
| ಬಿಲ್ಲಿಂಗ್ ಅವಧಿ/Billing Period | 10/10/2023 to 10/11/2023 |
| ರೀಡಿಂಗ್ ದಿನಾಂಕ/Rdng Date | 10-11-2023 |
| ಬಿಲ್ ಸಂಖ್ಯೆ/Bill No. | 43133023B100092 |

**ಬಳಕೆಯ ವಿವರ/Consumption Detail**

| | |
|---|---|
| ಇಂದಿನ ಮಾಪನ/Pres Rdg. | 6312 |
| ಹಿಂದಿನ ಮಾಪನ/Prev Rdg. | 6252 |
| ಮಾಪನ ಸ್ಥಿರಾಂಕ/Constant | 1 |
| ಬಳಕೆ/Consumption Units | 60 |
| ಸರಾಸರಿ/Average | 60 |
| ದಾಖಲಿತ ಬೇಡಿಕೆ/Recorded MD | 1.7KW |
| ಪವರ್ ಫ್ಯಾಕ್ಟರ್/Power Factor | 1.0 |
| ಸಂ. ಪ್ರಮಾಣ/Connected Load | 0.0KW |
| ಅರ್ಹ ಯೂನಿಟ್/Eligible for subsidy | 60 |
| ಪಾವತಿ ಯೂನಿಟ್/Units chargeable | 0 |

**ಬಳಸಿದ ಯೂನಿಟ್ ಬಿಲ್ ಮೊತ್ತ/Bill for Consumed Unit**

| | | |
|---|---|---|
| ನಿಗದಿತ ಶುಲ್ಕ/Fixed Charges (Unit, Rate, Amount) | | |
| 3.0KW | 110 | 330.00 |
| ವಿದ್ಯುತ್ ಶುಲ್ಕ/Energy Charges (Unit, Rate, Amount) | | |
| 60 | 4.75 | 285.00 |
| ಇಂಧನ ಹೊಂದಾಣಿಕೆ ಶುಲ್ಕ/FPPCA (Unit, Rate, Amt) | | |
| 60 | 0.35 | 21.00 |
| ತೆರಿಗೆ/Tax @ 9% | | 25.65 |
| ಉಪ ಮೊತ್ತ-1/Sub-Total-1 | | 661.65 |

**ಗೃಹ ಜ್ಯೋತಿ ಅನುದಾನ/Gruha Jyothi Subsidy by GoK**

| | | |
|---|---|---|
| ನಿಗದಿತ ಶುಲ್ಕ/Fixed Charges (Unit, Rate, Amount) | | |
| 3.0KW | 110 | 330.00 |
| ವಿದ್ಯುತ್ ಶುಲ್ಕ/Energy Charges (Unit, Rate, Amount) | | |
| 60 | 4.75 | 285.00 |
| ಇಂಧನ ಹೊಂದಾಣಿಕೆ ಶುಲ್ಕ/FPPCA (Unit, Rate, Amt) | | |
| 60 | 0.35 | 21.00 |
| ತೆರಿಗೆ/Tax @ 9% | | 25.65 |
| ಉಪ ಮೊತ್ತ-2/Sub-Total-2 | | 661.65 |

| | |
|---|---|
| ಬಿಲ್ ಮೊತ್ತ/Bill Amount (1-2) | ₹ 0.0 |
| Additional Charges | |
| ಪಿ.ಎಫ್. ದಂಡ/PF Penalty | 0.00 |
| ಹೆ.ಲೋ. ದಂಡ/MD Penalty | 0.00 |
| ಬಡ್ಡಿ/Interest | 0.00 |
| ಇತರೇ/Others | 0.00 |
| ಡೆಬಿಟ್ or ಕ್ರೆಡಿಟ್/Debit or Credit | 0.00 |
| ಪ್ರಸ್ತುತ ಬೇಡಿಕೆ/Cur. Demand Payable | ₹0.00 |
| ಬಾಕಿ/Arrears | 0.00 |
| ಪಾವತಿಯ ಮೊತ್ತ/Net Payable | ₹ 0.00 |
| ಪಾವತಿಗೆ ಕಡೇಯ ದಿನಾಂಕ/Due Date | 24/11/2023 |

5107756000#0 10/11/2023 10:45
For any billing related clarification call 1912 / Call Subdivision



- ಗೃಹಜ್ಯೋತಿ ಯೋಜನೆಯು 2023 ಆಗಸ್ಟ್ ತಿಂಗಳಿಂದ ಜಾರಿಗೆ ಬಂದಿದೆ.
- ರಾಜ್ಯದ ಪ್ರತಿ ಗೃಹ ಬಳಕೆ ಗ್ರಾಹಕರಿಗೆ ಮಾಸಿಕ 200 ಯೂನಿಟ್ ಗಳವರೆಗೆ ಉಚಿತ ವಿದ್ಯುತ್
- ಮನೆ ಬದಲಾಯಿಸಿದರೂ ಹಳೆ ಮನೆಯ ಆರ್ ಆರ್ ಸಂಖ್ಯೆಯನ್ನು ಡಿ-ಲಿಂಕ್ ಮಾಡಿ, ಹೊಸ ಮನೆಯ ಸಂಖ್ಯೆಯನ್ನು ಲಿಂಕ್ ಮಾಡುವ ಮೂಲಕ ಗೃಹಜ್ಯೋತಿ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ.

## ಕರ್ನಾಟಕ ನವ ನಿರ್ಮಾಣಕ್ಕೆ ಗ್ಯಾರಂಟಿ ಸರ್ಕಾರ...

**ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಾ ನುಡಿದಂತೆ ನಡೆದು ಜನರ ವಿಶ್ವಾಸ ಗಳಿಸಿದ್ದೇವೆ.**

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/ ಕರ್ನಾಟಕ ವಾರ್ತೆ


Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927 (RNINO:KARKAN/2011/48371)